# ದಾವಣಗೆರೆ

# ಜಿಲ್ಲಾ ರಂಗಮಾಹಿತಿ

ಮಲ್ಲಿಕಾರ್ಜುನ ಕಡಕೋಳ

ಕರ್ನಾಟಕ ನಾಟಕ ಅಕಾಡೆಮಿ

ಜಿಲ್ಲಾ ರಂಗಮಾಹಿತಿ ಮಾಲಿಕೆ

# ದಾವಣಗೆರೆ ಜಿಲ್ಲಾ ರಂಗಮಾಹಿತಿ

ಮಲ್ಲಿಕಾರ್ಜುನ ಕಡಕೋಳ

ಕರ್ನಾಟಕ ನಾಟಕ ಅಕಾಡೆಮಿ
ಕನ್ನಡ ಭವನ, ಜೆ.ಸಿ. ರಸ್ತೆ, ಬೆಂಗಳೂರು – ೦೨

**Davanagere Jilla Rangamaahiti**
Theatre Information of Davanagere Dist in Kannada by **Mallikarjun Kadakol** Published by **Mr. Siddaraju,** Registrar, Karnataka Nataka Academy, Kannada Bhavana, J.C.Road, Bengaluru- 560002 . Phone: 080-22237484

ಹಕ್ಕುಗಳು : ಕರ್ನಾಟಕ ನಾಟಕ ಅಕಾಡೆಮಿ
ಮೊದಲ ಮುದ್ರಣ : ೨೦೧೬
ಪ್ರತಿಗಳು : ೧,೦೦೦
ಪುಟಗಳು : xii + ೧೧೪ = ೧೨೬
ಬೆಲೆ : ರೂ. ೮೦/-

**ಪ್ರಕಾಶಕರು**
ಸಿದ್ಧರಾಜು, ರಿಜಿಸ್ಟ್ರಾರ್,
ಕರ್ನಾಟಕ ನಾಟಕ ಅಕಾಡೆಮಿ,
ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು-೫೬೦೦೦೨
ದೂರವಾಣಿ: ೦೮೦ ೨೨೨೩೭೪೮೪

ಮುಖಪುಟ ವಿನ್ಯಾಸ :
ಕೃಷ್ಣ ರಾಯಚೂರು

ಮುದ್ರಣ :
**ಪ್ರಿಂಟ್ ಪಾಯಿಂಟ್**
ಬೆಂಗಳೂರು – ೫೬೦ ೦೪೦

# ಪ್ರಧಾನ ಸಂಪಾದಕರ ನುಡಿ

ಕರ್ನಾಟಕ ನಾಟಕ ಅಕಾಡೆಮಿಯ ನಮ್ಮ ಅವಧಿ ಎರಡು ವರ್ಷ ಕಳೆದಿದೆ. ಮೊದಲ ವರ್ಷ ಜಿಲ್ಲೆಗಳಲ್ಲಿ ನಾಟಕೋತ್ಸವ, ಹವ್ಯಾಸಿ ರಂಗ ತಂಡಗಳಿಗೆ ಶಿಬಿರ, ರಸಗ್ರಹಣ, ನಾಟಕ ಕಂಪನಿಗಳಿಗೆ ಹೊಸ ನಾಟಕ ಬರೆಸುವ ಯೋಜನೆ, ಪೌರಾಣಿಕ ರಂಗೋತ್ಸವ, ತಿಂಗಳ ನಾಟಕ, ರಂಗಗೀತೆ ಪ್ರಾತ್ಯಕ್ಷಿಕೆ, ಮುಂಬಯಿಯಲ್ಲಿ ನಾಟಕೋತ್ಸವ ಮುಂತಾದ ಹತ್ತು ಹಲವು ವಿನೂತನ ಕಾರ್ಯಕ್ರಮ ನಡೆಸಿದೆವು.

ವಿಜಯಪುರದಲ್ಲಿ ೨೦೧೫ ಸೆ.೨೪ ರಿಂದ ೩೦ರ ವರೆಗೆ ನಡೆದ ರಾಜ್ಯ ಕನ್ನಡ ವೃತ್ತಿರಂಗಭೂಮಿ ಸಮ್ಮೇಳನದಲ್ಲಿ ಎಲ್ಲ ಕಂಪನಿಗಳ ಕಲಾವಿದರು ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಐದು ದಿನಗಳ ಕಾಲ ಹತ್ತು ನಾಟಕ ಕಂಪನಿಗಳಿಗೆ ಏರ್ಪಡಿಸಿದ್ದ ನಾಟಕ ಸ್ಪರ್ಧೆ ರಂಗ ಇತಿಹಾಸದಲ್ಲಿ ಅಪರೂಪದ್ದಾಗಿತ್ತು. ಹಿರಿಯ ಕವಿಗಳಾದ ಬಿ.ಆರ್.ಅರಿಷಿಣಗೋಡಿ ಅವರಿಗೆ ಇಳಕಲ್‌ನಲ್ಲಿ, ಎಲ್.ಬಿ.ಕೆ.ಆಲ್ದಾಳ ಅವರಿಗೆ ಕಲಬುರಗಿಯಲ್ಲಿ ಏರ್ಪಡಿಸಿದ್ದ ಅಭಿನಂದನೆ, ವಿಚಾರ ಸಂಕಿರಣ, ಪುಸ್ತಕ ಬಿಡುಗಡೆ ವಿಶೇಷವಾಗಿತ್ತು.

ಹಾವೇರಿ ಜಿಲ್ಲೆಯ ಶೇಷಗಿರಿಯಲ್ಲಿ ೨೧ ದಿನಗಳ ಕಾಲ ರಂಗ ನೇಪಥ್ಯ ಶಿಬಿರ, ರಾಮನಗರದ ಜಾನಪದ ಲೋಕದಲ್ಲಿ ನಡೆದ ಐದು ದಿನಗಳ ನಾಟಕ ರಚನಾ ಶಿಬಿರ, ಶಿರಸಿಯಲ್ಲಿ ನಡೆದ ರಂಗವಿಮರ್ಶಾ ಕಮ್ಮಟ, ದೆಹಲಿಯಲ್ಲಿ ನಡೆದ ವೃತ್ತಿ ಕಂಪನಿ ನಾಟಕೋತ್ಸವ ಕೆಲವು ಮೈಲುಗಲ್ಲುಗಳು. ವಿಶೇಷ ಘಟಕ ಯೋಜನೆಯಡಿ ಬಹುತೇಕ ಜಿಲ್ಲೆಗಳಲ್ಲಿ ರಂಗಶಿಬಿರ, ನಾಟಕ ಪ್ರದರ್ಶನ ನಡೆದಿವೆ. ಫೆಲೋಶಿಪ್ ಯೋಜನೆ ಮುಂದುವರಿದಿದೆ. ಕರ್ನಾಟಕ ನಾಟಕ ಅಕಾಡೆಮಿಯ ಮುಖವಾಣಿ 'ಸಂವಾದ' ಪತ್ರಿಕೆಯನ್ನು ಪುನರಾರಂಭಿಸಿದ್ದೇವೆ.

ಪುಸ್ತಕಗಳ ಪ್ರಕಟನೆ ನಾಟಕ ಅಕಾಡೆಮಿಯ ಮಹತ್ವಾಕಾಂಕ್ಷೆಯ ಯೋಜನೆ. ಮೊದಲ ಸರ್ವ ಸದಸ್ಯರ ಸಭೆಯಲ್ಲಿ ಪ್ರಕಟಣಾ ಸಮಿತಿ ರಚಿಸಿ ಕಾರ್ಯಪ್ರವೃತ್ತರಾಗಿದ್ದೆವು. ಪುಸ್ತಕಗಳ ಪ್ರಕಟಣೆ ಮುಖಾಂತರ ಅಂದು ಕಂಡ ಕನಸು ಇಂದು ನನಸಾಗುತ್ತಿದೆ. ಹಿಂದಿನ ವರ್ಷ ಹಾಗೂ ಈ ವರ್ಷದ ಪ್ರಕಟಣಾ ಸಮಿತಿ ಮತ್ತು ಈ ಕನಸು ಸಾಕಾರಗೊಳ್ಳಲು ಶ್ರಮಿಸಿದ ಸದಸ್ಯ ಗುಡಿಹಳ್ಳಿ ನಾಗರಾಜ ಹಾಗೂ ಪುಸ್ತಕ ಬರೆದುಕೊಟ್ಟ ಎಲ್ಲ ಲೇಖಕರಿಗೂ ಕೃತಜ್ಞತೆಗಳು.

ಎಲ್.ಬಿ.ಶೇಖ (ಮಾಸ್ತರ)
ಅಧ್ಯಕ್ಷರು, ಕರ್ನಾಟಕ ನಾಟಕ ಅಕಾಡೆಮಿ

# ಜಿಲ್ಲಾ ರಂಗಮಾಹಿತಿ ಮುನ್ನೋಟ

ಕರ್ನಾಟಕ ನಾಟಕ ಅಕಾಡೆಮಿ ಪ್ರಕಟನೆಗೆ ಆದ್ಯತೆ ಇರುವ ಅಕಾಡೆಮಿಯಲ್ಲ, ಇದು ಪ್ರಯೋಗ ಪ್ರಧಾನವಾದುದು. ಆದರೂ ರಂಗಭೂಮಿ ಚಟುವಟಿಕೆ, ಅಧ್ಯಯನಕ್ಕೆ ಪೂರಕವಾಗಬಲ್ಲ ಆಕರಗಳು ಅಕಾಡೆಮಿಯಲ್ಲಿ ದೊರೆಯುವಂತಾಗಬೇಕು ಎಂದು ಈ ಹಿಂದೆ ತಕ್ಕಮಟ್ಟಿನ ಪ್ರಕಟಣೆ ಕಾರ್ಯಗಳು ನಡೆದಿವೆ. ಮಧ್ಯೆ ಕ್ಷೀಣಿಸಿದ್ದ ಪ್ರಕಟಣಾ ವಿಭಾಗವನ್ನು ಚುರುಕುಗೊಳಿಸಿ ಮತ್ತಷ್ಟು ಪುಸ್ತಕಗಳನ್ನು ಹೊರತರಬೇಕು ಎಂದು ಅಧ್ಯಕ್ಷರಾದ ಎಲ್.ಬಿ.ಶೇಖ (ಮಾಸ್ತರ) ಅವರ ಅಧ್ಯಕ್ಷತೆಯಲ್ಲಿ 23 ಜುಲೈ 2014 ರಂದು ನಡೆದ ಪ್ರಕಟನಾ ಸಮಿತಿ ಸಭೆಯಲ್ಲಿ ನಿರ್ಧರಿಸಲಾಯಿತು. ಸಮಿತಿ ಸದಸ್ಯರಾದ ಪಿ.ತಿಪ್ಪೇಸ್ವಾಮಿ, ವಿ.ಎನ್.ಅಕ್ಕಿ, ಗುಡಿಹಳ್ಳಿ ನಾಗರಾಜ ಹಾಗೂ ರಿಜಿಸ್ಟ್ರಾರ್ ಸಿದ್ಧರಾಜು ಭಾಗವಹಿಸಿದ್ದರು.

ಪ್ರಕಟನೆಗೆ ಇದ್ದ ಬೇಡಿಕೆಗಳು ಹಲವಾರು. ಆದರೆ ಸೀಮಿತ ಅವಕಾಶದಲ್ಲಿ ತೀರಾ ಅಗತ್ಯವಾದ ಪುಸ್ತಕಗಳನ್ನು ಮಾತ್ರ ಪ್ರಕಟಿಸಲು ಸಾಧ್ಯವಿತ್ತು. ಕನ್ನಡ ರಂಗಭೂಮಿಗೆ ಅಸಾಧಾರಣ ಕೊಡುಗೆ ನೀಡಿದ ಪ್ರತಿಭಾವಂತರ ಕುರಿತ ಪುಸ್ತಕಗಳನ್ನು ಹೊರತರುವ 'ರಂಗಸಂಪನ್ನರು' ಮಾಲಿಕೆಯನ್ನು ಸಿಜಿಕೆಯವರು ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಆರಂಭಿಸಿ ಕೆಲವು ಪುಸ್ತಕಗಳನ್ನು ಹೊರತರಲಾಗಿತ್ತು. ನಂತರದ ಅವಧಿಯಲ್ಲೂ ಕೆಲವು ಪುಸ್ತಕಗಳು ಹೊರಬಂದವು. ಆ ಮಾಲಿಕೆಯನ್ನು ಮುಂದುವರಿಸಲು ತೀರ್ಮಾನಿಸಿದೆವು.

ಬಿ.ವಿ.ರಾಜಾರಾಂ ಅಧ್ಯಕ್ಷರಾಗಿದ್ದ ಅವಧಿಯಲ್ಲಿ ಪ್ರತಿ ಜಿಲ್ಲೆಯ ರಂಗಮಾಹಿತಿ ಹೊರತರುವ ಯೋಜನೆ ರೂಪಿಸಿ ಸದಸ್ಯರಿಗೇ ಆ ಹೊಣೆ ವಹಿಸಲಾಗಿತ್ತು. 5–6 ಜಿಲ್ಲೆಗಳ ರಂಗಮಾಹಿತಿ ಬರಹವೂ ಪೂರ್ಣಗೊಂಡಿತ್ತು. ಆದರೆ ಪುಸ್ತಕಗಳು ಪ್ರಕಟನೆಯಾಗಲಿಲ್ಲ. ಉಳಿದಿರುವ ಇತರ ಜಿಲ್ಲೆಗಳನ್ನೂ ಸೇರಿಸಿಕೊಂಡು ಜಿಲ್ಲೆಗೊಂದು ರಂಗಮಾಹಿತಿ ಪುಸ್ತಕಗಳನ್ನು ಹೊರತರುವ ಯೋಜನೆ ಹಮ್ಮಿಕೊಂಡೆವು. ಆಯಾ ಜಿಲ್ಲೆಗಳ ರಂಗ ಚಟುವಟಿಕೆಯಲ್ಲಿ ಪಾಲ್ಗೊಂಡ ಲೇಖಕರಿಗೆ ಈ ಕೆಲಸವನ್ನು ಒಪ್ಪಿಸಿದೆವು. ಜಿಲ್ಲಾ ರಂಗಮಾಹಿತಿ ಕಲೆಹಾಕುವುದು ಗುರುತರ ಕೆಲಸ. ದಾಖಲೆಗಳು ಸರಿಯಾಗಿ ಲಭ್ಯವಿಲ್ಲದ ಕಾರಣ ಲೇಖಕರು ತಮ್ಮ ಶಕ್ತ್ಯಾನುಸಾರ ಸಂಗ್ರಹಿಸಿ ಬರೆದಿದ್ದಾರೆ. ಆದ್ದರಿಂದ ಇದನ್ನು ಯಾರೂ ಸಂಪೂರ್ಣ ಮಾಹಿತಿ ಎಂದು ಭಾವಿಸಬಾರದು. ಇದೊಂದು ಆರಂಭ. ಇದನ್ನು ಮುಂದುವರಿಸಲು ಸಂಘ ಸಂಸ್ಥೆ, ವಿಶ್ವವಿದ್ಯಾಲಯಗಳಿಗೆ ಅವಕಾಶವಿದೆ.

ರಂಗಸಂಪನ್ನರು ಮಾಲಿಕೆಗೆ ಪುಸ್ತಕ ಬರೆಯಲು ಕಲಾವಿದರ ಬಳಿ ಕುಳಿತಾಗಲೂ ಲೇಖಕರಿಗೆ ಮಾಹಿತಿ ಹಾಗೂ ಚಿತ್ರಗಳ ಕೊರತೆ ಕಾಡಿದೆ. ಆದರೂ ತಾವು ಕಣ್ಣಾರೆ ಕಂಡಿದ್ದ ಕಲಾವಿದರ ಪ್ರತಿಭಾ ಸಂಪನ್ನತೆಯನ್ನು ಆಪ್ತವಾಗಿ ಚಿತ್ರಿಸಿಕೊಟ್ಟಿದ್ದಾರೆ.

2015ರಲ್ಲಿ ಪ್ರಕಟಣಾ ಸಮಿತಿ ಬದಲಾದಾಗಲೂ ಈ ಮಾಲಿಕೆಗಳ ಪುಸ್ತಕಗಳನ್ನು ಸಂಪಾದಿಸುವ ಹೊಣೆಯನ್ನು ನನಗೇ ವಹಿಸಲಾಯಿತು. ಸದಸ್ಯರು ಇಟ್ಟ ವಿಶ್ವಾಸ ಹಾಗೂ ಅಧ್ಯಕ್ಷರಾದ ಶ್ರೀ ಶೇಖ್ ಮಾಸ್ತರ್ ಅವರು ಪುಸ್ತಕದ ಕೆಲಸ ಎಲ್ಲಿಗೆ ಬಂತು ಎಂದು ಸದಾ ನೆನಪಿಸುತ್ತ, ಈ ಪ್ರಕಟಣೆಗಳ ಕುರಿತು ತಾಳಿದ ಆಸಕ್ತಿಯ ಫಲವಾಗಿ ಈ ಪುಸ್ತಕಗಳು ಇದೀಗ ಹೊರಬರುತ್ತಿವೆ.

**ಎಲ್ಲ ರಂಗ ಪ್ರಕಾರಗಳ ಸಂಗಮ**

ರಾಜ್ಯದ ಕೇಂದ್ರ ಭಾಗದಲ್ಲಿರುವ ದಾವಣಗೆರೆ ಜಿಲ್ಲೆಯು ಜಾನಪದ, ವೃತ್ತಿ, ಹವ್ಯಾಸಿ ಸೇರಿದಂತೆ ವೈವಿಧ್ಯಮಯ ರಂಗ ಚಟುವಟಿಕೆಗಳ ಸಂಗಮವೂ ಹೌದು. ವೃತ್ತಿ ರಂಗಭೂಮಿಯ ಶ್ರೀಮಂತ ಹಿನ್ನೆಲೆ ಈ ಜಿಲ್ಲೆಗಿದೆ. ಅದೇ ಶೈಲಿಯ ನಾಟಕಗಳನ್ನು ಹೆಚ್ಚುಕಡಿಮೆ ಪ್ರತಿ ಹಳ್ಳಿಯಲ್ಲೂ ಪ್ರದರ್ಶಿಸುವ ಗ್ರಾಮೀಣ ರಂಗಭೂಮಿ ಇದೆ. ಹವ್ಯಾಸಿ ರಂಗ ಚಟುವಟಿಕೆಗಳು ದಾವಣಗೆರೆ, ಹರಿಹರ, ಹರಪನಹಳ್ಳಿ ಮುಂತಾದ ಕಡೆ ಪ್ರಯೋಗಶೀಲವಾಗಿವೆ.

ವೃತ್ತಿ ರಂಗಭೂಮಿಯ ಬಗ್ಗೆ ಕಕ್ಕುಲಾತಿ ಹೊಂದಿರುವ ಲೇಖಕ ಮಲ್ಲಿಕಾರ್ಜುನ ಕಡಕೋಳ ಅವರು ಹೃದಯಂಗಮವಾಗಿ ಅದನ್ನು ಚಿತ್ರಿಸಿದ್ದಾರೆ. ಉಳಿದಂತೆ ಇತರ ತಾಲ್ಲೂಕುಗಳ ರಂಗ ಮಾಹಿತಿ ಹಾಗೂ ದಾವಣಗೆರೆ ಹವ್ಯಾಸಿ ರಂಗ ಚಟುವಟಿಕೆಯನ್ನು ಸೂಕ್ತ ವ್ಯಕ್ತಿಗಳಿಂದ ಬರೆಯಿಸಿದ್ದಾರೆ. ಪದಗಳೊಂದಿಗೆ ಆಟವಾಡುತ್ತ ಆಕರ್ಷಕವಾದ ಆಡುಭಾಷೆ ಬಳಸಬಲ್ಲ ಕತೆಗಾರ ಕಡಕೋಳ ಅದನ್ನು ಬದಿಗಿಟ್ಟು ಇತಿಹಾಸದ ನಿಖರತೆಗೆ ಗಮನ ಹರಿಸಿದ್ದಾರೆ. ಆಪ್ತವಾದ ವ್ಯಕ್ತಿಚಿತ್ರದಂತೆ ಓದಿಸಿಕೊಳ್ಳುವುದು ಈ ಜಿಲ್ಲಾ ರಂಗಮಾಹಿತಿಯ ವಿಶೇಷ.

–ಗುಡಿಹಳ್ಳಿ ನಾಗರಾಜ

ಪ್ರಕಟಣಾ ಸಮಿತಿ ಸದಸ್ಯರು :
ಕೆ. ಜಗುಚಂದ್ರ
ಉಮೇಶ್ ಸಾಲಿಯಾನ್
ಹಾಲ್ಕುರಿಕೆ ಶಿವಶಂಕರ್

# ಕರ್ನಾಟಕ ನಾಟಕ ಅಕಾಡೆಮಿ

ಎಲ್.ಬಿ.ಶೇಖ (ಮಾಸ್ತರ)
ಅಧ್ಯಕ್ಷರು

ಸದಸ್ಯರು

ರಾಜಪ್ಪ ಕಿರಗಸೂರು
ಕಲ್ಪನಾ ನಾಗನಾಥ್
ಪಿ.ತಿಪ್ಪೇಸ್ವಾಮಿ
ಎಂ.ಎಸ್.ಗುಣಶೀಲನ್
ಮುದ್ದಣ್ಣ ರಟ್ಟೆಹಳ್ಳಿ
ಅನ್ನಪೂರ್ಣ ಸಾಗರ
ಗುಡಿಹಳ್ಳಿ ನಾಗರಾಜ
ಎಚ್.ಷಡಾಕ್ಷರಪ್ಪ ಹೊಸಮನಿ
ಶ್ರೀಪಾದ ಭಟ್
ಉಮೇಶ ಸಾಲಿಯಾನ್
ವಿ.ಎನ್.ಅಕ್ಕಿ
ಬಿ.ಎಂ.ರಾಮಚಂದ್ರ
ಎನ್.ಕೆ.ರಾಮಕೃಷ್ಣ
ಎ.ವರಲಕ್ಷ್ಮಿ
ಎಸ್.ಕೆ.ಕೊನೆಸಾಗರ
ಹಾಲ್ಕುರಿಕೆ ಶಿವಶಂಕರ್
ಎಲ್.ಎಚ್.ರಂಗನಾಥಪ್ಪ
ಕೆ.ಜಗುಚಂದ್ರ

ರಿಜಿಸ್ಟ್ರಾರ್:
ಸಿದ್ದರಾಜು

ಯೋಜನಾ ಸಹಾಯಕರು:
ಕೆ.ರೇವಣ್ಣ

ಕಚೇರಿ ಸಿಬ್ಬಂದಿ:
ಸೌಭಾಗ್ಯಲಕ್ಷ್ಮೀ, ಎಂ.ಭೋಜಣ್ಣ, ಸುಶೀಲಮ್ಮ

# ಹೀಗೊಂದು ನಾಂದಿ.....

ಧಾರವಾಡದಲ್ಲಿ ಸಣ್ಣದೊಂದು ಕಲ್ಲು ಎಸೆದರೂ ಅದು ಕವಿಗಳಿಗೆ ತಾಗುತ್ತದೆಯಂತೆ. ಹಾಗೇನೆ ದಾವಣಗೆರೆಯಲ್ಲಿ ಸಣ್ಣದೊಂದು ಕಲ್ಲು ಎಸೆದರೆ ಅದು ರಂಗಕರ್ಮಿಗಳಿಗೇ ತಾಗುತ್ತದೆ. ಕನ್ನಡ ರಂಗಭೂಮಿಗಿರುವಷ್ಟು ಹಿರಿದಾದ ಇತಿಹಾಸ ದಾವಣಗೆರೆ ರಂಗಭೂಮಿಗೂ ಇದೆ.

ಹಾಗೆ ನೋಡಿದರೆ ದಾವಣಗೆರೆ ವೃತ್ತಿರಂಗದ ತವರೂರು. ಹಾಗಂತ ವಿಲಾಸಿ ರಂಗಭೂಮಿ ಚಟುವಟಿಕೆಗಳಿಗೆ ಇಲ್ಲಿ ಬರವಿಲ್ಲ. ಕನ್ನಡ ವೃತ್ತಿರಂಗಭೂಮಿಯ ಸಮಗ್ರ ಚರಿತ್ರೆಯನ್ನೇ ಬರೆದವರಿಲ್ಲ. ಅದರ ವೈಭವಗಳನ್ನೆಲ್ಲ ವಿಸ್ಮೃತಿಗಿಳಿಸಲಾಗಿದೆ. ವೃತ್ತಿರಂಗದ ಒಳ ಭಿತ್ತಿಗಳನ್ನು ಸೀಳಿ ನೋಡುವ ಕೆಲಸದೊಂದಿಗೆ ವೃತ್ತಿ ಮತ್ತು ಹೊಸ ಅಲೆಯ ಅನುಸಂಧಾನದ ಪ್ರಕ್ರಿಯೆ ಸಮಗ್ರ ರಂಗಭೂಮಿಯನ್ನು ರೋಮಾಂಚನಗೊಳಿಸಬೇಕಿದೆ. ಇದು ದಾವಣಗೆರೆ ಜಿಲ್ಲೆಯಾದ್ಯಂತ ತಿರುಗಾಡಿ ರಂಗಮಾಹಿತಿ ಸಂಗ್ರಹಿಸುವ ಸಂದರ್ಭದಲ್ಲಿ ನನ್ನ ಅನುಭವಕ್ಕೆ ಬಂದ ಮಜಕೂರ. ಪ್ರಾಯಶಃ ಆಗಬೇಕಾದ ಅಗತ್ಯ ಕೆಲಸವಿದು.

ಎರಡು ಬಾರಿ ಪತ್ರಿಕಾಗೋಷ್ಠಿ ಮಾಡಿ, ಮತ್ತೆರಡು ಬಾರಿ ಲಿಖಿತ ಪ್ರಕಟಣೆ ನೀಡಿ ಸುದ್ದಿ ಮತ್ತು 'ಮಾಹಿತಿ ಕೋರಿಕೆ' ಪ್ರಕಟಿಸಿದ ಎಲ್ಲಾ ಪತ್ರಿಕೆಗಳಿಗೆ ಕೃತಜ್ಞತೆಗಳು. ಅಷ್ಟಾದರೂ ಮಾಹಿತಿಗಳು ನನ್ನನ್ನು ಹುಡುಕಿ ಬರಲಿಲ್ಲ. ನಾನೇ ಮುದ್ದಾಂ ಹುಡುಕಿಕೊಂಡು ಹೋಗಲೇ ಬೇಕಾಯ್ತು. ಒಂದೊಂದು ಮಾಹಿತಿ ಸಂಗ್ರಹಿಸಲು ಹತ್ತಾರು ಬಾರಿ ಫೋನು.

ಅಷ್ಟೇ ಸಲದ ಸುತ್ತಾಟ. ಇಷ್ಟಾಗಿಯೂ ಈ ಮಾಹಿತಿ ಸಂಗ್ರಹ ಪರಿಪೂರ್ಣವೆಂದು ಹೇಳುವ ಧೈರ್ಯ ನನಗಿಲ್ಲ. ಏಕೆಂದರೆ ರಂಗಭೂಮಿ ಜಂಗಮ ಸ್ವರೂಪಿ. ಅದು ಜುಳು ಜುಳು ಹರಿಯುವ ಜಳಜಳ ನೀರಿನ ಹೊಳೆ. ಅಷ್ಟು ಮಾತ್ರವಲ್ಲ ಅದು ಸುಂದರ ನಾಳೆಗಳ ತಿಳಿಗೊಳ.

ಪ್ರತಿ ಹಳ್ಳಿಯಲ್ಲಿ ವರ್ಷಕ್ಕೊಮ್ಮೆ ನಾಟಕಗಳಾಗುತ್ತವೆ. ಅವು ಕಂಪೆನಿ ಶೈಲಿಯ ವೃತ್ತಿ ನಾಟಕಗಳೇ. ಪ್ರತಿ ಹಳ್ಳಿಯಲ್ಲೂ ಕಲಾವಿದರಿದ್ದಾರೆ. ನಾಟಕ ಕಲಿಸುವ, ಹಾರ್ಮೋನಿಯಂ, ತಬಲಾ ನುಡಿಸುವ ಮಾಸ್ತರರುಗಳಿದ್ದಾರೆ. ಹರಪನಹಳ್ಳಿ

ತಾಲ್ಲೂಕಿನಲ್ಲೇ ಮೂವತ್ತು ಮಂದಿ ಅಂಥವರಿದ್ದಾರೆ. ಹಾಗಂತ ಇನ್ನುಳಿದ ತಾಲ್ಲೂಕುಗಳೇನೂ ಹಿಂದೆ ಬಿದ್ದಿಲ್ಲ. ಅಪರೂಪದ ಸಂಗತಿಯೆಂದರೆ ಜಾನಪದ ರಂಗಭೂಮಿಯನ್ನು ಇವತ್ತಿಗೂ ಜೀವಂತವಾಗಿಟ್ಟಿರುವ ಜಗಳೂರು ತಾಲ್ಲೂಕಿನ ಸಿದ್ದಮ್ಮನಹಳ್ಳಿ 'ದಾಸರು', ಕರಿಬಂಟನ ಕಾಳಗ, ಗಿರಿಜಾಕಲ್ಯಾಣಗಳನ್ನು ಆಡಿದರೆ; ಹರಪನಹಳ್ಳಿ ಭಾಗದಲ್ಲಿ ಸಂಗ್ಯಾಬಾಳ್ಯಾ, ಆಡುತ್ತಾರೆ. ಸಾರ್ಕ್ ಮೇಳದಲ್ಲಿ ಪ್ರದರ್ಶಿಸಿ ಬಂದ ನೇರ್ಲಿಗೆ, ಕುಂದುವಾಡ ಕಲಾವಿದರ ಜೋಗೇರ ಆಟ, ದೊಡ್ಡಾಟದ ತವರುಮನೆ ಕೊಂಡಜ್ಜಿ ಕಲಾವಿದರ ಕ್ರಿಯಾಶೀಲ ರಂಗಸಂವೇದನೆಗಳನ್ನು ಅತ್ಯಂತ ಸೊಗಸಾಗಿ ಸಂಗೀತ ಕಥಾನಕಗಳಲ್ಲಿ ನೋಡುವುದನ್ನು ಮರೆಯುವುದುಂಟೆ? ಇವರೆಲ್ಲ ಶಿಸ್ತು ಬದ್ಧವಾದ ತಂಡಗಳನ್ನು ಕಟ್ಟಿಕೊಂಡಿಲ್ಲ. ಅದೊಂದು ಸಾಂಸ್ಕೃತಿಕ ದುರಂತ.

ವೃತ್ತಿರಂಗಭೂಮಿಯದು ಜಿಲ್ಲೆ ತುಂಬಾ ಮೇಲುಗೈ. ನಗರಪ್ರದೇಶಗಳಲ್ಲಿ ಹವ್ಯಾಸಿ ತಂಡಗಳು ತುಂಬಾ ಹಿಂದೆಯೇ ಉತ್ತಮೋತ್ತಮ ರಂಗ ಪ್ರಯೋಗಗಳನ್ನು ನೀಡಿ ಅವು ಈಗೀಗ ಪೂರ್ಣ ವಿರಾಮ ಪಡೆಗಳಾಗಿವೆ. ವೃತ್ತಿರಂಗದ ನಟಿಯರು ವರ್ಷಕ್ಕೆ ಕನಿಷ್ಠ ಐವತ್ತು ನಾಟಕಗಳಲ್ಲಿ ಅದೂ ಗ್ರಾಮಾಂತರ ನಾಟಕಗಳಲ್ಲಿ ನಟಿಸುತ್ತಾರೆ. ತಮ್ಮ ಆಕರ್ಷಕ ಸಿನಿಮಾ ನೃತ್ಯಗಳ ಮೂಲಕ ವೃತ್ತಿ ರಂಗದ ಪೋಷಕ ಪ್ರೀತಿಯನ್ನು ಮೆರೆಯುತ್ತಾ, ತನ್ಮೂಲಕ ವೃತ್ತಿ ರಂಗಭೂಮಿ ಅಸ್ತಿತ್ವದ 'ಸಾಕ್ಷಿಪ್ರಜ್ಞೆ'ಗಳಾಗಿದ್ದಾರೆ.

ಮಾಹಿತಿ ಸಂಗ್ರಹಿಸುವ ಕ್ಷೇತ್ರಕಾರ್ಯ ಖಂಡಿತಾ ಕಷ್ಟಕರವಾದುದು. ಈಗಾಗಲೇ ಸಂಗ್ರಹಿಸಿದ ಮಾಹಿತಿಯನ್ನೇ ಖಚಿತವೆಂದು ಬರೆಯಲು ಕುಂತರೆ ಅದಕ್ಕೆ ಸಂಬಂಧಿಸಿದಂತೆ ಅದರ ಆಪ್ತ ಒಡನಾಡಿಗಳು ಮತ್ತೊಂದು ಗಟ್ಟಿ ಸುಳಿವು ನೀಡುತ್ತಾರೆ. ಹೀಗೆ ಒಂದೊಂದು ಮಾಹಿತಿಗೆ ಹತ್ತಾರು ಆಯಾಮಗಳು ದಕ್ಕುತ್ತವೆ. ಅದನ್ನೆಲ್ಲ ತಾಳ್ಮೆಯಿಂದ ಕೇಳಿ ದಾಖಲಿಸುವ ಹರಸಾಹಸ. ಅಕ್ಷರ ಮಾತುಗಳಿಗೆ ನಿಲುಕದ್ದು.

ಸೋಕಾಲ್ಡ್ ಸುಶಿಕ್ಷಿತರೇ ಬಹಳ ಬಾರಿ ಎಡತಾಕಿಸಿದರು. ಅನಕ್ಷರಸ್ಥ ರಂಗಕರ್ಮಿಗಳು ಹಾಗೆ ಮಾಡದೇ "ಈ ಮಾಹಿತಿ ನೀಡಿದರೆ ನಮಗೇನು ಕೊಡುತ್ತೀರೆಂಬ" ಏಕೈಕ ವಾಂಛೆಯ 'ಒನ್ಸ್‌ಮೋರ್' ನಂತಹ ಸಮೂಹಗಾನ. ಮಾಹಿತಿ ಕಲೆ ಹಾಕಿದ ಮೇಲೆ ನಾನು ಮಾಡಿಕೊಂಡ ಟಿಪ್ಪಣಿಗಳನ್ನು ವಿಸ್ತರಿಸಿ ಬರೆಯುವ, ಕೆಲವನ್ನು ಕಡಿತಗೊಳಿಸುವ ಕೆಲಸ. ಹಾಗೆಯೇ ಕೆಲವರಿಗೆ ಮನವಿ ಮಾಡಿ, ಮಾಡಿ ಕೈ ಹಿಡಿದು ಬರೆಸಿದ ರಂಗ ಮಾಹಿತಿಗಳನ್ನು ಅಲ್ಲಲ್ಲಿ ನೀಟಾಗಿ ಟ್ರಿಮ್ ಮಾಡುವುದು, ಕೆಲವನ್ನು ನಾನೇ ಮುದ್ದಾಂ ಬರೆಯುವಂತಾಗಿದೆ. ಮಾಹಿತಿಗೆ ಸೂಕ್ತವೆನಿಸುವ ಫೋಟೋ ಸಂಗ್ರಹಿಸುವುದು. ಹೀಗೆ ಸಣ್ಣ ಹೈರಾಣದ ರಂಗ ಕೈಂಕರ್ಯ ದೊಡ್ಡ ಖುಷಿ ಕೊಟ್ಟಿತು.

ಕ್ಷೇತ್ರಕಾರ್ಯದಿಂದಾಗಿ ಅನೇಕ ರಂಗ ಸಂಗತಿಗಳ ನೇಪಥ್ಯದ ಸಾಕ್ಷಾತ್ಕಾರ

ನನಗಾಗಿದೆ. ಜಿಲ್ಲೆಯ ತುಂಬಾ ನಾಟಕದ ಮಾಸ್ತರುಗಳು ವೃತ್ತಿ–ವಿಲಾಸಿ ಎನ್ನುವ ಪ್ರಭೇದ ತಾಳದೇ ನೆರವಾಗಿದ್ದಾರೆ. ನಾನು ಭೆಟ್ಟಿ ಮಾಡಿದ ರಂಗಕರ್ಮಿಗಳಿಗಿಂತ ರಂಗಾಸಕ್ತರ ಪಟ್ಟಿಯೇ ದೊಡ್ಡದು. ಅವರೆಲ್ಲರ ಹೆಸರು ಬರೆದು ಕೃತಜ್ಞತೆ ಸಲ್ಲಿಸಲು ಇನ್ನೊಂದು ಪುಸ್ತಕವೇ ಬೇಕಾದೀತು. ಜಿಲ್ಲೆಯಲ್ಲದೇ ಬೇರೆಬೇರೆ ಊರುಗಳಿಂದ ನಾನು ಫೋನ್ ಮಾಡಿದಾಗ ಮಾಹಿತಿ ನೀಡಿ ಸಹಕರಿಸಿದವರಿಗೂ, ಲಿಖಿತ ರೂಪದಲ್ಲಿ ಮಾಹಿತಿ ನೀಡಿದವರಿಗೂ, ಡಿ.ಟಿ.ಪಿ. ಮಾಡಿಕೊಟ್ಟ ಶ್ರೀಮತಿ ವೀಣಾರವರಿಗೂ ಒಟ್ಟಿನಲ್ಲಿ ಈ ಕಾರ್ಯಕ್ಕೆ ನೆರವಾದ ಎಲ್ಲರಿಗೂ ಆಭಾರಿಯಾಗಿದ್ದೇನೆ.


ಇಂತಹದ್ದೊಂದು ರಂಗಮಣಿಹಕ್ಕೆ ಮಣಿಯಲು ಅವಕಾಶ ಮಾಡಿಕೊಟ್ಟ ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರಾದ ಶ್ರೀ ಎಲ್.ಬಿ. ಶೇಖ್ ಮಾಸ್ತರ, ರಿಜಿಸ್ಟ್ರಾರ್ ಶ್ರೀ ಸಿದ್ಧರಾಜು ಅವರಿಗೆ, ನಾಟಕ ಅಕಾಡೆಮಿಯ ಸಮಸ್ತ ಕುಟುಂಬಕ್ಕೆ ನನ್ನ ಅಂತಃಕರಣದ ರಂಗ ನೆನಹುಗಳು.

– ಮಲ್ಲಿಕಾರ್ಜುನ ಕಡಕೋಳ
ದಾವಣಗೆರೆ

# ಅಂತರಂಗ


| | | |
|---|---|---|
| 1. | ಹೀಗೊಂದು ನಾಂದಿ..... | vii |
| 2. | ದಾವಣಗೆರೆ ವೃತ್ತಿರಂಗಭೂಮಿ | 1 |
| 3. | ದಾವಣಗೆರೆ ಹವ್ಯಾಸಿ ರಂಗಭೂಮಿ | 11 |
| 4. | ದಾವಣಗೆರೆ ಜಿಲ್ಲೆ ಗ್ರಾಮೀಣ ರಂಗಭೂಮಿ ಒಂದು ಕಿರುನೋಟ | 16 |
| 5. | ದಾವಣಗೆರೆಯ ಪ್ರತಿಮಾಸಭಾ | 19 |
| 6. | ಚಿಂದೋಡಿ ಅವರ ಕೆ.ಬಿ.ಆರ್. ಡ್ರಾಮಾ ಕಂಪನಿ | 22 |
| 7. | 'ಭೂಮಿಕಾ' ವನಿತಾ ರಂಗವೇದಿಕೆ, ದಾವಣಗೆರೆ. | 27 |
| 8. | ನೀವು–ನಾವು | 29 |
| 9. | ಶ್ರೀ ಜಯಲಕ್ಷ್ಮಿ ನಾಟಕ ಸಂಘ ದಾವಣಗೆರೆ | 31 |
| 10. | ದಾವಣಗೆರೆ 'ಸಮುದಾಯ' ಒಂದು ಹೊರಳುನೋಟ | 37 |
| 11. | ವಿದ್ಯಾಸಾಗರ್ ಆರ್ಟ್ ಅಕಾಡೆಮಿ | 40 |
| 12. | ರಾಜ್ಯ ವೃತ್ತಿ ರಂಗಭೂಮಿ ಕಲಾವಿದರ ಸಂಘ ದಾವಣಗೆರೆ | 43 |
| 13. | ಧ್ವನಿವರ್ಧಕ –ರಂಗಸಜ್ಜಿಕೆ–ಬೆಳಕಿನ ಬೆರಗು | 44 |
| 14. | ಅಪರೂಪದ ರಂಗನಂಟು | 48 |
| 15. | ದಾವಣಗೆರೆ ಜಿಲ್ಲೆಯ ಪ್ರಶಸ್ತಿ ಪುರಸ್ಕೃತ ರಂಗಕರ್ಮಿಗಳು | 50 |
| 16. | ದಾವಣಗೆರೆ ಜಿಲ್ಲೆಯ ರಂಗಶಿಕ್ಷಣ ಪಡೆದ ರಂಗಕರ್ಮಿಗಳು | 52 |
| 17. | ದಾವಣಗೆರೆ ನಗರವಾಸಿ ವೃತ್ತಿ ರಂಗಭೂಮಿ ಕಲಾವಿದರು | 54 |
| 18. | ದಾವಣಗೆರೆ ಜಿಲ್ಲೆಯ ನಾಟಕಕಾರರು | 55 |
| 19. | ದಾವಣಗೆರೆ ಜಿಲ್ಲೆಯ ನಾಟಕ ಪ್ರದರ್ಶನದ ರಂಗಮಂದಿರಗಳು | 57 |
| 20. | ದಾವಣಗೆರೆ ಜಿಲ್ಲೆಯ ರಂಗ ನಿರ್ದೇಶಕರು | 58 |
| 21. | ಚನ್ನಗಿರಿ ತಾಲ್ಲೂಕು ರಂಗಭೂಮಿ | 60 |
| 22. | ಚನ್ನಗಿರಿಯ ಪ್ರಸಿದ್ಧ ನಾಟಕಕಾರ ಎಸ್. ಎನ್. ರಂಗಸ್ವಾಮಿ | 66 |
| 23. | 'ರಂಗಸೌರಭ' ಸೂಸಿದ ಪರಿಮಳ | 68 |
| 24. | ಹೊನ್ನಾಳಿ ತಾಲ್ಲೂಕು ಕುರಿತು ನಾಕುಮಾತು | 72 |

25. ಹೊನ್ನಾಳಿ ರಂಗಭೂಮಿ ಇತಿಹಾಸ 74
26. ಹೊನ್ನಾಳಿ ಬೀದಿನಾಟಕ ಪರಂಪರೆ 81
27. ಜಗಳೂರು ತಾಲ್ಲೂಕು ರಂಗಭೂಮಿ 83
28. ನಾಲಂದ ಕಲಾಭಾರತಿ ರಂಗತಂಡ 86
29. ಓಬಳೇಶ್ ಎಂಬ ರಂಗಸಂಪತ್ತು 87
30. ಹರಿಹರ ರಂಗಭೂಮಿ : ಒಂದು ಪಕ್ಷಿ ನೋಟ 92
31. ಶ್ರೀ ವೆಂಕಟೇಶ್ವರ ಡ್ರಾಮಾ ಸೀನ್ಸ್, ಡ್ರೆಸಸ್ ಮತ್ತು ಮೇಕಪ್, ಭಾನುವಳ್ಳಿ 98
32. ಹರಪನಹಳ್ಳಿ ರಂಗಸಂಸ್ಕೃತಿ ಕುರಿತು 101
33. ಹರಪನಹಳ್ಳಿ ತಾಲ್ಲೂಕು ರಂಗಭೂಮಿ 103
34. ಹರಪನಹಳ್ಳಿಯ ಸಮಸ್ತರು 109
35. ಗ್ರಂಥಋಣ / ಕೃತಜ್ಞತೆಗಳು 112


ದಾವಣಗೆರೆ ಜಿಲ್ಲೆ
ಹರಪನಹಳ್ಳಿ
ಹರಿಹರ
ದಾವಣಗೆರೆ
ಜಗಳೂರು
ಹೊನ್ನಾಳಿ
ಚನ್ನಗಿರಿ
N
W
E
S

# ದಾವಣಗೆರೆ ವೃತ್ತಿರಂಗಭೂಮಿ

ದಾವಣಗೆರೆಯೆಂಬ ಕನ್ನಡನಾಡಿನ ಹೃದಯಭೂಮಿ ವೃತ್ತಿರಂಗಭೂಮಿಗಾಗಿ ಕಳಕಳಿಯ ಕೆಲಸವನ್ನು ಬಲು ಹಿಂದಿನಿಂದಲೇ ಮಾಡುತ್ತಾ ಬಂದಿದೆ. ಈ ಊರಿನಲ್ಲಿ ವೃತ್ತಿ ನಾಟಕ ಕಂಪನಿ ಹುಟ್ಟುವ ಮುನ್ನವೇ ವೃತ್ತಿನಾಟಕಗಳು ವೈಭವದಿಂದ ಮೆರೆದಿವೆ. ಕೋಲ ಶಾಂತಪ್ಪನವರಂತಹ ಕವಿಗಳು ವೃತ್ತಿ ರಂಗಭೂಮಿಯ ಮೊಟ್ಟಮೊದಲ ಸಾಮಾಜಿಕ ನಾಟಕಕಾರರು ಎಂಬುದು ದಾವಣಗೆರೆಯ ದೊಡ್ಡ ಹೆಮ್ಮೆಯ ವಿಚಾರ. ಹಾಗೆ ನೋಡಿದರೆ ಗರುಡ ಸದಾಶಿವರಾಯರ ಶ್ರೀ ದತ್ತಾತ್ರೇಯ ಸಂಗೀತ ನಾಟಕ ಮಂಡಳಿ(ಗದಗ)ಯೇ ದಾವಣಗೆರೆಯಲ್ಲಿ ಕ್ಯಾಂಪು ಮಾಡಿದ ಮೊಟ್ಟ ಮೊದಲ ವೃತ್ತಿನಾಟಕ ಕಂಪನಿ. ಅಗ ಅವರು ಪ್ರಯೋಗಿಸಿದ ನಾಟಕ 'ಪಾದುಕಾ ಪಟ್ಟಾಭಿಷೇಕ.' 1922ರ ಸುಮಾರಿಗೆ ಈಗಿನ ವಸಂತ ಟಾಕೀಸ್ ಎದುರಿಗಿರುವ ಅಂದಿನ ಸಾವಳಗಿ ಥೇಟರ್‌ನಲ್ಲಿ ಗರುಡರ ಕಂಪನಿ ಬಿಡಾರ ಹೂಡಿತ್ತು. ಹಾಗೆಂದ ಮಾತ್ರಕ್ಕೆ ಈ ಊರಿಗೆ ರಂಗಭೂಮಿಯ ಪರಿಚಯ ಮಾಡಿಸಿಕೊಟ್ಟಿದ್ದು ಇದೇ ಕಂಪನಿ ಎಂದರ್ಥವಲ್ಲ. ಅದಕ್ಕೂ ಮುನ್ನ ಗ್ರಾಮೀಣ ರಂಗಭೂಮಿಯ ಮಾದರಿಯಲ್ಲೇ ಈ ಊರಲ್ಲಿ ಜನಪದ ರಂಗಭೂಮಿ, ವೃತ್ತಿರಂಗಭೂಮಿಯ ಕೆಲವು ಪ್ರಯೋಗಗಳು ಜರುಗಿದ್ದನ್ನು ಹಿರಿಯ ವೃತ್ತಿರಂಗಪ್ರೇಮಿ ತೊಂಭತ್ತು ವರುಷದ ಸಾರ್ಥಕ ಬದುಕನ್ನು ಬಾಳಿದ ಶ್ರೀ ಪುರಾಣಿಕ ಮಠದ ವೀರಬಸಯ್ಯನವರು ನೆನಪುಗಳ ವೃದ್ಧಾಪ್ಯವನ್ನು ಮೆಲುಕಾಡುತ್ತಿದ್ದರು. ಗರುಡರ ಕಂಪನಿ ಬಂದಾಗ ಅವರು ಹತ್ತು ವರ್ಷದ ಬಾಲಕ.

ಇಂದಿನ ಮಾರ್ಕೆಟ್ ಬಳಿ ಈ ಶತಮಾನದ ಆರಂಭದಲ್ಲೇ 'ಧನಲಕ್ಷ್ಮಿ ಥೇಟರ್' ಇತ್ತು. ಅಲ್ಲಿ ವೃತ್ತಿನಾಟಕಗಳು ಜರುಗುತ್ತಿದ್ದವು. ಹಾಗೆಯೇ ಈಗಿನ ಮೈಸೂರ್ ಬ್ಯಾಂಕ್ ಮುಖ್ಯ ಕಚೇರಿಯ ಜಾಗದಲ್ಲಿ, ಜನತಾಬಜಾರ್ ಜಾಗದಲ್ಲಿ, ದೊಗ್ಗಳ್ಳಿ ಕಾಂಪೊಂಡಿನಲ್ಲಿ, ಹೈಸ್ಕೂಲ್ ಮೈದಾನದಲ್ಲಿ ನಾಟಕ ಕಂಪನಿಗಳು ಬೀಡು ಬಿಡುತ್ತಿದ್ದವು. 1970ರ ಸುಮಾರಿಗೆ ಹಳೆಯ ಬಸ್‌ನಿಲ್ದಾಣದ ಎದುರಿಗೆ ಶ್ರೀನಿವಾಸ ಡ್ರಾಮಾ ಕಂಪನಿ ಹುಟ್ಟಿಕೊಂಡಿತು. ಆದರೆ ಅದಕ್ಕೆ ಮುನ್ನದ ಸಾವಳಗಿ ನಾಗಪ್ಪನವರ ಥೇಟರ್ ಸುಸಜ್ಜಿತವಾಗಿತ್ತು.

ಕರ್ನಾಟಕದ ಎಲ್ಲ ಹೆಸರಾಂತ ನಾಟಕ ಕಂಪನಿಗಳು ಸೇರಿದಂತೆ ಸಣ್ಣಪುಟ್ಟ ಕಂಪನಿಗಳೂ ಈ ಊರಿಗೆ ಬಂದು ಉದ್ಧಾರ ಆಗಿ ಹೋಗಿವೆ. ಎಲ್ಲಿಯೇ ನಷ್ಟವಾಗಲಿ ನಾಟಕಗಳಿಗೆ ಅಂದು ಈ ಊರಲ್ಲಿ 'ನಷ್ಟ' ಎಂಬುದೇ ಇರಲಿಲ್ಲ. ದಾವಣಗೆರೆ ಎಂದೊಡನೆ ಏನೆಲ್ಲವನ್ನೂ ತೂಗಿ, ಅಳೆದು ನೋಡುವ ಮಂದಿ ನಾಟಕಗಳನ್ನು ನೋಡುವಲ್ಲಿ ಮಾತ್ರ ಏನೊಂದೂ ಚೌಕಾಶಿಯ ನೋಟವಿಡುತ್ತಿರಲಿಲ್ಲ.

ಗಂಡ–ಹೆಂಡತಿ –ಮಕ್ಕಳು ಮನೆ ಮಂದಿಯೆಲ್ಲ ಅತ್ಯಂತ ಮಹತ್ವಾಕಾಂಕ್ಷೆಯಿಂದ ಕುಂತು ನಾಟಕ ನೋಡುತ್ತಿದ್ದರು. ಅಷ್ಟಕ್ಕೂ ಅಂದಿನ ನಾಟಕಗಳು ಎಲ್ಲರೂ ಕುಂತು ನೋಡುವಂತಿದ್ದವು ಕೂಡಾ. ಅಂತೆಯೇ ಆಗ ಎರಡೆರಡು ಕಂಪನಿಗಳು ತಿಂಗಳಾನುಗಟ್ಟಲೇ ತುಂಬಿದ ಪ್ರೇಕ್ಷಕರಿಂದ ನಡೆದಿವೆ. ಹಳ್ಳಿಗಳಿಂದಲೂ ಜನರು ಗಾಡಿ ಕಟ್ಟಿಕೊಂಡು ಬಂದು ಸಡಗರ, ಸಂಭ್ರಮದಿಂದ ಮನೆಮಂದಿಯೆಲ್ಲಾ ದಾವಣಗೆರೆಯ ವಿವಿಧ ಭಾಗಗಳಲ್ಲಿ ಹಾಕಿದ್ದ ಕಂಪನಿ ನಾಟಕಗಳನ್ನು ನೋಡಿ ಆನಂದಿಸುತ್ತಿದ್ದರು.



ನಾಟಕ ಅಕಾಡೆಮಿ ಏರ್ಪಡಿಸಿದ್ದ ರಂಗ ಸಮಾಗಮ ಕಾರ್ಯಕ್ರಮವನ್ನು ಏಣಗಿ ಬಾಳಪ್ಪ, ಎಚ್.ಎನ್. ಹೂಗಾರ ಅಂದಿನ ಜಿಲ್ಲಾ ಉಸ್ತುವಾರಿ ಮಂತ್ರಿ ಎಸ್.ಎಸ್. ಮಲ್ಲಿಕಾರ್ಜುನ ಅವರು ದಾವಣಗೆರೆಯ ಮೂವರು ಮಹತ್ವದ ನಾಟಕಕಾರರ ಫೋಟೋ ಅನಾವರಣಗೊಳಿಸಿದ್ದು.

ಬೇರೆ ಊರುಗಳಿಂದ ಹೆಸರಾಂತ ಕಂಪನಿಗಳು ಆಗಮಿಸಿ ಆಡುವ ನಾಟಕಗಳಷ್ಟೇ ಸ್ಥಳೀಯರು ಆಡುವ ವೃತ್ತಿನಾಟಕಗಳು ಅಷ್ಟೇ ಪರಿಣಾಮಕಾರಿ ಆಗಿರುತ್ತಿದ್ದವು. ಪುರಾಣಿಕ ಮಠದ ವೀರ ಬಸಯ್ಯನವರ ಸಂಚಾಲಕತ್ವದಲ್ಲಿ ಶ್ರೀ ಶಿವಯೋಗಿ ಬಕ್ಕೇಶ್ವರ ನಾಟಕ ಮಂಡಳಿ ಅಭಿನಯಿಸುತ್ತಿದ್ದ ಕಲ್ಯಾಣಕ್ರಾಂತಿ, ಅಕ್ಕಮಹಾದೇವಿ, ಶಿವಭಕ್ತ ಸಿರಿಯಾಳ

ನಾಟಕಗಳು ಎಷ್ಟೊಂದು ಪ್ರಭಾವೀ ಆಗಿದ್ದವೆಂದರೆ ಧಾರವಾಡದ ಮೃತ್ಯುಂಜಯ ಸ್ವಾಮಿಗಳು ಅಲ್ಲಿಗೇ ಕರೆಸಿಕೊಂಡು ತಿಂಗಳಾನುಗಟ್ಟಲೇ ನಾಟಕ ಆಡಿಸಿದ್ದಾರೆ. ಅಲ್ಲಮಪ್ರಭುವಿನ ಪಾತ್ರ ಕಂಡು ಮೃತ್ಯುಂಜಯ ಸ್ವಾಮಿಗಳು ಸ್ಟೇಜಿಗೆ ಧಾವಿಸಿ ಅಲ್ಲಮನಿಗೆ ನಮಿಸಿದ್ದನ್ನು ಪುರಾಣಿಮಠರು ನೆನಪಿಸಿಕೊಳ್ಳುತ್ತಿದ್ದರು. ನಲವತ್ತೈದು ತೊಲ ಬಂಗಾರದ ಮುಖಪದ್ಮ ಮತ್ತು ಕಿರೀಟವನ್ನು ಬಕ್ಕೇಶ್ವರ ಮೂರ್ತಿಗೆ ಮಾಡಿಸಿಕೊಟ್ಟ ಕೀರ್ತಿ ಈ ನಾಟಕ ಮಂಡಳಿಯ ಶ್ರಮಕ್ಕೆ ಸೇರುತ್ತದೆ.

ಯಾವುದೇ ಕಂಪನಿಗಳು ದಾವಣಗೆರೆಗೆ ಬರಲಿ ಪುರಾಣಿಕ ಮಠದ ವೀರಬಸಯ್ಯ, ಆರ್.ಜಿ. ಶಿವಕುಮಾರ್ ಸಹಕಾರದ ಅಗತ್ಯವಿರುತ್ತಿತ್ತು. ಅಂತಹ ಅನನ್ಯ ನೆರವು ಅವರಿಂದ ಸಿಗುತ್ತಿತ್ತು ಕೂಡಾ. ಅಂದಿನ ರಾಷ್ಟ್ರಪತಿಗಳಾಗಿದ್ದ ಡಾ. ಬಾಬು ರಾಜೇಂದ್ರ ಪ್ರಸಾದ ಅವರು ಕೋಲಶಾಂತಪ್ಪ ವಿರಚಿತ 'ಚಲ್ತಿದುನಿಯಾ' ನಾಟಕವನ್ನು (ನಿರ್ದೇಶನ : ಪುರಾಣಿಕ ಮಠದ ವೀರಬಸಯ್ಯ) ನೋಡಿ ತಮ್ಮ ಸಂತಸವನ್ನು ಹಂಚಿಕೊಂಡದ್ದು ಸ್ಥಳೀಯ ವೃತ್ತಿರಂಗಕ್ಕೆ ದೊಡ್ಡ ಹೆಮ್ಮೆಯ ವಿಷಯ. ಇಂತಹ ಹತ್ತಾರು ದಾಖಲೆ ಈ ಊರಿನ ವೃತ್ತಿರಂಗಕ್ಕಿದೆ.

ಮೂಲತಃ ರಾಣೇಬೆನ್ನೂರು ತಾಲ್ಲೂಕು ತುಮ್ಮಿನಕಟ್ಟೆಯ ಐರಣಿ ಮನೆತನದವರಾದ ಕೋಲ ಶಾಂತಪ್ಪನವರು (1860–1940) ಎಳಮೆಯಲ್ಲೇ ವ್ಯಾಪಾರಕ್ಕೆಂದು ಆಗಮಿಸಿ ದಾವಣಗೆರೆಯವರೇ ಆಗಿ ಹೋದರು. ಬ್ಯಾಡಗಿ ಮುಪ್ಪಯ್ಯನವರೊಂದಿಗೆ ಹಿಸ್ಸೆ ಮೇಲೆ ದಲ್ಲಾಳಿ ಅಂಗಡಿ ನಡೆಸುತ್ತಿದ್ದ ಅವರ ವೃತ್ತಿ ವ್ಯಾಪಾರವಾದರೆ, ಪ್ರವೃತ್ತಿ ಅಪ್ಪಟ ನಾಟಕರಚನೆ ಮತ್ತು ಅವುಗಳ ಸಮರ್ಥ ಪ್ರಯೋಗ. ಅವರ ನಾಟಕಗಳ ಹೆಸರೇ ಆಗಿನ ಕಾಲದಲ್ಲಿ ಅತ್ಯಾಧುನಿಕ. ಅವರ ಪ್ರಥಮ ನಾಟಕದ ಹೆಸರು ಬಿ.ಎ. ಅದು 1928ರಷ್ಟು ಹಿಂದೆಯೇ ಮುದ್ರಣ ಕಂಡು 2500 ಪ್ರತಿಗಳು ಆಗ ಪ್ರಕಟಗೊಂಡಿವೆ. 'ಸ್ತ್ರೀ' ಇದು ಅವರ ಎರಡನೇ ಅತ್ಯಂತ ಪ್ರಸಿದ್ಧ ನಾಟಕ. ಎಲ್‌ಎಲ್.ಬಿ., ಭಾಪುರೆ ಕರ್ಣ, ಮಿಠಾಯಿಬುಟ್ಟಿ ಹೀಗೆ ಒಟ್ಟು ಎಂಟು ಮಹತ್ವಪೂರ್ಣ ನಾಟಕ ರಚಿಸಿದ್ದಾರೆ. ಈ ಎಲ್ಲ ನಾಟಕಗಳು ಮುದ್ರಣಕ್ಕೆ ಮುನ್ನ ಹತ್ತಾರು ವರುಷಗಳಷ್ಟು ಹಿಂದೆಯೇ ರಚಿಸಿದ್ದು ಅವೆಲ್ಲ 1900 ಮತ್ತು ಅದಕ್ಕೂ ಮುನ್ನವೇ ಸ್ಟೇಜ್ ಆಗಿವೆ. ಈ ಎಲ್ಲ ಸಾಗ್ರಸಂಗೀತ ಸಚಿತ್ರ ನಾಟಕಗಳನ್ನು ಅಂದು ಅಧಿಕೃತವಾಗಿ ಎಂಬಂತೆ ಶ್ರೀ ಹಲಗೇರಿ ಹಾಲ ಸಿದ್ದೇಶ್ವರ ಪ್ರಾಸಾದಿಕ ಲೋಕಸೇವಕ ನಾಟಕ ಮಂಡಳಿ ಮಾಲೀಕರಾದ ಶ್ರೀ ಕುಡುಗೋಲು ಚಿಟ್ಟೆಪ್ಪನವರು ಪ್ರಕಾಶ ಪಡಿಸಿ ರಂಗಭೂಮಿಯಲ್ಲಿ ಪ್ರಯೋಗಿಸುತ್ತಿದ್ದುದ್ದು ಅತ್ಯಂತ ಗಮನಾರ್ಹ ಸಂಗತಿ.

'ಸ್ತ್ರೀ' ನಾಟಕ ಕೋಲ ಶಾಂತಪ್ಪನವರ ಬದುಕಿನ ಭೂಮತ್ತ್ವವನ್ನೇ ಹೆಚ್ಚಿಸಿದ ನಾಟಕ. ಕನ್ನಡನಾಡಿನ ಎಲ್ಲ ಹೆಸರಾಂತ ಕಂಪನಿಗಳು ಈ ನಾಟಕವನ್ನು

ತಿಂಗಳಾನುಗಟ್ಟಲೇ ಪ್ರದರ್ಶಿಸಿವೆ. ಚಿಂದೋಡಿ ಕಂಪನಿಯವರು 'ಹಳ್ಳಿ ಹುಡುಗಿ' ಹೆಸರಿನಿಂದ ಈ ನಾಟಕದ ಹತ್ತು ಸಾವಿರ ಪ್ರದರ್ಶನ ಪ್ರಯೋಗಿಸಿ ಸಾಕಷ್ಟು ಹಣ ಒಬ್ಬುಳಿ ಮಾಡಿಕೊಂಡದ್ದುಂಟು. ಅಂದು ಸಾವಳಗಿ ಥೇಟರಿನಲ್ಲಿ (ಹಲಗೇರಿ ಕಂಪನಿ) ಒಂದು ವರ್ಷ ಪೂರ್ತಿ 'ಸ್ತ್ರೀ' ನಾಟಕದ ಪ್ರಯೋಗಗಳು ತುಂಬಿದ ಜನರಿಂದ ಜರುಗಿವೆ. ಅಂದು, ದಿನವೊಂದಕ್ಕೆ 50 ರೂಪಾಯಿ ಗುತ್ತಿಗೆ ಹಿಡಿದು ಕೆಲಕಾಲ ಪ್ರಿಂಟಿಂಗ್ ಪ್ರೆಸ್ ಶಾಂತಪ್ಪನವರು ನಾಟಕ ಪ್ರದರ್ಶಿಸಿದ್ದಾರೆ. 1928 ರಲ್ಲಿ 'ಸ್ತ್ರೀ' ನಾಟಕದ ಎಂಟು ನೂರು ಪ್ರಯೋಗ ಲಕ್ಷ್ಮೇಶ್ವರ ಸ್ತ್ರೀ ನಾಟಕ ಮಂಡಳಿ ಜರುಗಿಸಿದೆ.

ಹೀಗೆ ದಾವಣಗೆರೆಯ ಶತಮಾನದ ವೃತ್ತಿರಂಗ ಭೂಮಿಯ ದಾಖಲೆಗಳಲ್ಲಿ ಟಿ.ಎ. ಕೋಲಶಾಂತಪ್ಪನವರಿಗೆ ವಿಶಿಷ್ಟ ಸ್ಥಾನ ದಕ್ಕುತ್ತದೆ. ಅಂತೆಯೇ ಮೈಸೂರು ಮಹಾರಾಜರು 1932ರಷ್ಟು ಹಿಂದೆಯೇ ಶಾಂತಪ್ಪನವರನ್ನು ಆಸ್ಥಾನಕ್ಕೆ ಕರೆಸಿ ಅದ್ದೂರಿಯಾಗಿ ಸನ್ಮಾನಿಸಿದ್ದಾರೆ. ಅರಮನೆಯಲ್ಲೇ ಇವರ ನಾಟಕಗಳ ಪ್ರದರ್ಶನಗಳೂ ಜರುಗಿವೆ.

ಅಂತಹ ಕೀರ್ತಿಗೆ ಭಾಜನರಾದ ಈ ಊರಿನ ಮತ್ತೋರ್ವ ಗಣ್ಯರೆಂದರೆ ಶ್ರೀ ಚಿಂದೋಡಿ ಶಾಂತವೀರಪ್ಪನವರು. 1928ರಲ್ಲಿ ಬಳ್ಳಾರಿ ಜಿಲ್ಲೆ ಕೊಟ್ಟೂರಿನಲ್ಲಿ ಶ್ರೀ ಕರಿಬಸವೇಶ್ವರ ನಾಟಕ ಮಂಡಳಿ ಆರಂಭಿಸಿ ನಾಡಿನಾದ್ಯಂತ ಕ್ಯಾಂಪು ಮಾಡಿ ಪ್ರಸಿದ್ಧಿ ಪಡೆದರು. ಗಾಯನಗಂಧರ್ವ ಬಿರುದಿನಿಂದ ಸನ್ಮಾನಿತರಾದರು. ಹೇಮರೆಡ್ಡಿ ಮಲ್ಲಮ್ಮ, ಗುಣಸಾಗರಿ, ಶಾಕುಂತಲ, ಸುಮಂಗಲಿ, ಹಳ್ಳಿ ಹುಡುಗಿ ನಾಟಕಗಳು ಆಗ ಹೆಸರು ಮಾಡಿದವು. ಅಂದು ಹಳ್ಳಿ ಹುಡುಗಿಯಾಗಿ ಅಮೋಘ ಅಭಿನಯ ನೀಡಿದ ಪದ್ಮಶ್ರೀ ಚಿಂದೋಡಿ ಲೀಲಾ ಪೋಲಿಸನ ಮಗಳಾಗಿ ಅಭಿನಯದ ಕ್ರಿಯಾಶೀಲತೆ ಉಳಿಸಿಕೊಂಡು ದಾಖಲೆ ಮಾಡಿದರು. ಚಿಂದೋಡಿ ಲೀಲಾ ಅವರು ಕೆ.ಬಿ.ಆರ್. ಡ್ರಾಮಾ ಕಂಪನಿಯ ಮಾಲಕಿಯಾಗಿ ಬೆಳಗಾಂನಂಥ ಮರಾಠಿ ಪ್ರಧಾನ ಪ್ರದೇಶದಲ್ಲಿ ಕನ್ನಡ ನಾಟಕ ಜಯಭೇರಿ ಬಾರಿಸಿದ್ದು ಈ ಶತಮಾನದ ದಾಖಲೆ.

ದಾವಣಗೆರೆಯ ನಾಟಕ ಕಂಪನಿಯೆಂದೇ ಪ್ರಸಿದ್ಧಿ ಪಡೆದ ಶ್ರೀ ಕಂಚಿಕೇರಿ ಕೊಟ್ಟೂರ ಬಸಪ್ಪನವರು 1921ರಲ್ಲಿ ಸ್ಥಾಪಿಸಿದ ಶ್ರೀ ಜಯಲಕ್ಷ್ಮಿ ಪ್ರಾಸಾದಿಕ ಸಂಗೀತ ನಾಟಕ ಮಂಡಳಿಯೂ ತನ್ನ ವೈಭವ ಮೆರೆದಿದೆ. ಧನಲಕ್ಷ್ಮಿ ಥೇಟರಿನಲ್ಲಿ ಈ ಕಂಪನಿಯ ಹೆಸರಾಂತ ನಾಟಕ 'ಹೇಮರೆಡ್ಡಿ ಮಲ್ಲಮ್ಮ' 1945ರ ಸುಮಾರಿಗೆ ಅದ್ದೂರಿಯಾಗಿ ಪ್ರದರ್ಶನ ನೀಡಿದೆ. ಅವರದೇ ಮತ್ತೊಂದು ಪ್ರಸಿದ್ಧ ನಾಟಕ 'ಭೌಮಾಸುರ' 1947 ರ ಸುಮಾರಿಗೆ ಬೀರಲಿಂಗೇಶ್ವರ ದೇವಸ್ಥಾನದ ಮೈದಾನದಲ್ಲಿ ಅವರದೇ ರಂಗಸಜ್ಜಿಕೆಯಲ್ಲಿ ಸುಸಜ್ಜಿತವಾಗಿ ಹಲವಾರು ಪ್ರಯೋಗಗಳ ಮೂಲಕ ಜನಮನ್ನಣೆ ಗಳಿಸಿತು. ಹೀಗೆ ಈ ಎರಡೂ ವೃತ್ತಿ ಕಂಪನಿಗಳು ದಾವಣಗೆರೆಯ

ರಂಗಭೂಮಿ ಚರಿತ್ರೆಗೆ ಚಾರಿತ್ರಿಕ ಕೀರ್ತಿಯನ್ನು ತಂದುಕೊಟ್ಟಿವೆ. 1925ರ ಸುಮಾರಿಗೆ ಎರಾಸಿಭರಮಪ್ಪನವರ 'ವಾಣಿ ವಿಲಾಸ ನಾಟಕ ಕಂಪನಿ' ಪ್ರದರ್ಶನ ನೀಡಿದೆ.

1939ರ ಸುಮಾರಿಗೆ (ಪ್ರಾಯಶಃ ಅದೇ ಮೊದಲ ಬಾರಿಯ ಆಗಮನ) ಕುಂಭ ಕೋಣಂನಿಂದ ನೇರವಾಗಿ ದಾವಣಗೆರೆಗೆ ರೈಲುವೆ ವ್ಯಾಗಿನುಗಳಲ್ಲಿ ಸರ್ಕಸ್ ಕಂಪನಿಯೊಂದು ಬಂದಿಳಿಯುವಂತೆ ಗುಬ್ಬಿ ಕಂಪನಿ ದಾವಣಗೆರೆಗೆ ಬಂತು. ಈಗಿನ ಮೈಸೂರು ಬ್ಯಾಂಕ್ (ಮುಖ್ಯ ಕಚೇರಿ) ಜಾಗದಲ್ಲಿ ಅದ್ದೂರಿಯಾಗಿ ಕಂಪನಿ ಹಾಕಲಾಗಿತ್ತು. ಅದು ಕುರುಕ್ಷೇತ್ರ (ಪ್ರಜಾವಾಣಿಯ ಪ್ರಥಮ ಸಂಪಾದಕ ಬಿ. ಪುಟ್ಟಸ್ವಾಮಯ್ಯ ಕೃತಿ) ನಾಟಕ. ಜೀವಂತ ಆನೆ, ಕುದುರೆಗಳನ್ನು ಸ್ಟೇಜ್ ಮೇಲೆ ತಂದ ದೊಡ್ಡ ಸೋಜಿಗ ಅದಾಗಿತ್ತು. ನೂರಿಪ್ಪತ್ತೈದು ಮಂದಿ ಕಲಾವಿದರು ಅಭಿನಯಿಸಿದ್ದ ಪವಾಡ ಸದೃಶವಾದ ನಾಟಕ ಅದಾಗಿತ್ತು. ಹಳ್ಳಿ ಹಳ್ಳಿಗಳಿಂದ ಜನ ಬುತ್ತಿರೊಟ್ಟಿ ಕಟ್ಟಿಕೊಂಡು ಬಂದು ನಾಟಕ ನೋಡುವುದೇ ಆಗ ಬಹುದೊಡ್ಡ ವರ್ತಮಾನವಾಗಿತ್ತು. ಆಗಿನ ಕಾಲದ ಅಗಾಧದ ವಿವರ ಇರುತ್ತಿತ್ತು ಗುಬ್ಬಿ ವೀರಣ್ಣನವರ ಚನ್ನಬಸವೇಶ್ವರ ಥಿಯೇಟ್ರಿಕಲ್ ಕಂಪನಿಯಲ್ಲಿ. ಅಂತೆಯೇ ಅದಕ್ಕೆ ದಕ್ಕಿದ ಮಾನ್ಯತೆಯೂ ವಿಶ್ವಮಟ್ಟದ್ದು. ಲವಕುಶ, ದಶಾವತಾರ ಮುಂತಾದ ಪೌರಾಣಿಕ ನಾಟಕಗಳು ಮನೆಮಾತಾಗಿದ್ದು. ಡಾ. ರಾಜ್‌ಕುಮಾರ್ ಆಗಿನ್ನೂ ಮುತ್ತುರಾಜ್, ಅವರಪ್ಪ ಪುಟ್ಟಸ್ವಾಮಯ್ಯ ಭೀಮನ ಪಾತ್ರಧಾರಿ. ಡಾ. ರಾಜ್ ಸಣ್ಣಪುಟ್ಟ ಬಾಲ ಪಾತ್ರಧಾರಿ.

ಆ ನಂತರ ಗುಬ್ಬಿ ಕಂಪನಿ ಮೂರ್‍ನಾಲ್ಕು ಬಾರಿ ಆಗಮಿಸಿ ಧನಲಕ್ಷ್ಮಿ ಥೇಟರಿನಲ್ಲಿ ಒಮ್ಮೆ ಪ್ರದರ್ಶನ ನೀಡಿದ್ದೂ ಉಂಟೆಂದು ಹಿರಿಯ ರಂಗಪ್ರೇಮಿ ಆರ್.ಜಿ. ಗೌರಿಶಂಕರ್ ಅಭಿಪ್ರಾಯ. ಡಾ. ರಾಜ್ ಆಗ ತುರುಬುಗೂದಲು ಬಿಟ್ಟುಕೊಂಡು ಓರ್ವ ಸಾಧಾರಣ ನಟನಂತೆ ಈ ಊರಿನ ಹತ್ತಾರು ಮಂದಿಯ ಒಡನಾಟದಲ್ಲಿದ್ದುದನ್ನು ಅನೇಕರು ಬಲು ಸಹಜವಾಗಿಯೇ ನೆನಪು ಮಾಡಿಕೊಳ್ಳುತ್ತಾರೆ. ಬೀಡಾ ಅಂಗಡಿಯ ಖಾದರ್ ಬಳಿ ಆಗ ರಾಜ್ ಪಾನ್‌ಬೀಡಾ ಹಾಕಿಕೊಳ್ಳುತ್ತಿದ್ದುದು, ತನ್ನ ಬಳಿ ಹನ್ನೆರಡಾಣೆಯ ಉದ್ರಿ ಮಾಡಿದ್ದನ್ನು ಹತ್ತಾರು ವರ್ಷಕಾಲ ರಾಜ್ ಸಹಿ ಮಾಡಿದ್ದ ಉದ್ರಿ ಸಿಗರೇಟು ಚೀಟಿಯನ್ನು ಆತ ದಾಖಲೆಯಂತೆ ಬಹಳಕಾಲ ಇಟ್ಟುಕೊಂಡಿದ್ದ. ಅವರೊಂದಿಗೆ ಆಗ ಜಿ.ವಿ. ಅಯ್ಯರ್, ಬಾಲಕೃಷ್ಣ, ಪಾಪಮ್ಮ, ಇಂದಿರಮ್ಮ, ಅಶ್ವಥ್ ಮುಂತಾದವರು ಸಹ ಕಲಾವಿದರಾಗಿ ದಾವಣಗೆರೆಯ ಆಪ್ತತೆ ಗಳಿಸಿಕೊಂಡವರಾಗಿದ್ದರು. ತದನಂತರದ ದಿನಗಳಲ್ಲಿ ಮದ್ರಾಸ್ ಕನ್ನಡ ಚಲನಚಿತ್ರ ಕಲಾವಿದರ ಸಂಘದ ವತಿಯಿಂದ ಈ ಎಲ್ಲಾ ಕಲಾವಿದರು ಇಲ್ಲಿಗೆ ಆಗಮಿಸಿ ಸಾಹುಕಾರ, ಬೇಡರ ಕಣ್ಣಪ್ಪ ಮತ್ತು ಎಚ್ಚಮನಾಯಕ ನಾಟಕಗಳನ್ನು ಪದರ್ಶಿಸಿದರು. ಅದೇ ಸಂದರ್ಭದಲ್ಲಿ ಪಂಡರಿಬಾಯಿಯವರ ಶ್ರೀ ಕೃಷ್ಣ ಚೈತನ್ಯ ನಾಟಕ ಸಭಾ ಮದ್ರಾಸಿನಿಂದ ಬಂದು

ಆಗ 'ಶಾಂತಿ ನಿವಾಸ' ನಾಟಕ ಅಭಿನಯಿಸಿದ್ದು ದೊಡ್ಡ ದಾಖಲೆ. ಅವರೊಂದಿಗೆ ಮೈನಾವತಿ, ಆದವಾನಿ ಲಕ್ಷ್ಮಿದೇವಿ, ರಮಾದೇವಿ, ಎಂ.ಎನ್. ಲಕ್ಷ್ಮಿ ಸಹ ಕಲಾವಿದರಾಗಿದ್ದರು.

ಗುಬ್ಬಿ ಕಂಪನಿಯ ಕಲಾವಿದರಿಗೆ ಭರತನಾಟ್ಯ ಕಲಿಸಲು ಹಂಸಭಾವಿಯ ಗುರುಕುಲ ಆಶ್ರಮದಿಂದ ನಾಟ್ಯಾಚಾರ್ಯ ಶ್ರೀನಿವಾಸ ಕುಲಕರ್ಣಿ ಈ ಊರಿಗೆ ಆಗಮಿಸಿ ಮುಂದೆ ಬಿ. ಓಬಳೇಶವರೆಗೂ ವೃತ್ತಿರಂಗಭೂಮಿಯು ನಾಟ್ಯದನಂಟು ಕುಲಕರ್ಣಿಯವರಿಗೆ ಬೆಳೆದು ಬಂತು. ಅದೇ ವೇಳೆಗೆ ಮದ್ರಾಸ್‌ನಿಂದ ಸುಪ್ರಸಿದ್ಧ ನಾಟ್ಯಕಲಾವಿದೆಯರಾದ ಉಷಾರಾಣಿ-ಗಜಲಕ್ಷ್ಮಿಯವರು ದಾವಣಗೆರೆ ಸೇರಿದಂತೆ ಕರ್ನಾಟಕದ 23 ಊರುಗಳಲ್ಲಿ ಭರತನಾಟ್ಯ ಕಂಪನಿ ಪ್ರದರ್ಶನ ನೀಡಿದ್ದು ಗಮನಾರ್ಹ ಸಂಗತಿ.

ಈಗಿನ ಅಶೋಕ ಟಾಕೀಸಿನ ಆಗಿನ ಹೆಸರು ವಿನೋದಾ. ಗುಬ್ಬಿಯವರು ಅಂದು ಸಿನಿಮಾ ತೋರಿಸಿದ್ದು ಇದೇ ಹೆಸರಿನ ಟಾಕೀಸಿನಲ್ಲಿ. ಮದ್ರಾಸ್ ನಾಟ್ಯ ಕಂಪನಿ ಕಲಾವಿದೆಯರನ್ನೂ ಆಗ ನಗರದ ಜನತೆಗೆ ಪರಿಚಯಿಸುವಲ್ಲಿ ಗುಬ್ಬಿ ಕಂಪನಿಯ ಶ್ರಮವಿತ್ತು. ಹಾಗೆಯೇ ನಾಟ್ಯ ಪ್ರವೀಣರ ನೆರವು ಕೂಡಾ ಅವರ ಕಂಪನಿಗೆ ಅಷ್ಟೇ ಅಗತ್ಯವೆನಿಸಿತ್ತು.

ಸುಬ್ಬಯ್ಯ ನಾಯ್ಡು (ಸಾಹಿತ್ಯ ಸಾಮ್ರಾಜ್ಯ ನಾಟಕ ಮಂಡಳಿ) ಕಂಪನಿ ಇಲ್ಲಿ ಮೊಕ್ಕಾಂ ಮಾಡಿ 'ಭಕ್ತ ಅಂಬರೀಶ' ನಾಟಕದಲ್ಲಿ ನಾಯ್ಡು ಅವರು ಅಂಬರೀಶ್ ಪಾತ್ರ ಮಾಡಿದರೆ ಡಾ. ರಾಜ್ ಆತನ ಸೋದರನ ಪಾತ್ರ ಮಾಡಿದ್ದುಂಟು. ಮಹ್ಮದ್ ಪೀರ್ ಅವರ ಚಂದ್ರಮೌಳೇಶ್ವರ ನಾಟಕ ಕಂಪನಿಯ ಗೌತಮ ಬುದ್ಧನ ಪಾತ್ರ ನೋಡಲು ಜನ ಸಂಭ್ರಮದಿಂದ ಕಾಯುತ್ತಿದ್ದರು. ಕೆಲಕಾಲ ಈಗಿನ ಹಳೆಯ ಆಸ್ಪತ್ರೆಯ ಜಾಗದಲ್ಲಿ ಎಸ್.ಎಲ್.ಎನ್. ಸಿಂಹ ಅವರು 'ಸಂಸಾರ ನೌಕೆ' ನಾಟಕವನ್ನು ಅದ್ದೂರಿಯಾಗಿ ಅಭಿನಯಿಸಿದ್ದಾರೆ.

ವಾಮನರಾಯ ಮಾಸ್ತರರ ವಿಶ್ವಗುಣಾದರ್ಶ ಸಂಗೀತ ನಾಟಕ ಮಂಡಳಿಯ ಸಂತ ತುಕಾರಾಂ ನಾಟಕ ಭಕ್ತಿಯ ಸೆಲೆ ಹರಿಸಿತ್ತು. ಶಿರಹಟ್ಟಿ ವೆಂಕೋಬರಾಯರ ಮಹಾಲಕ್ಷ್ಮಿ ಪ್ರಾಸಾದಿಕ ಸಂಗೀತ ನಾಟಕ ಮಂಡಳಿ ಉತ್ತರ ಕರ್ನಾಟಕದ ಬಹುದೊಡ್ಡ ಕಂಪನಿ, ಹೊರ ರಾಜ್ಯದಲ್ಲಿಯೂ ವೈಭವದಿಂದ ಬಾಳಿದ ಕಂಪನಿ ಇದು. ದಾವಣಗೆರೆಗೆ ಆಗಮಿಸಿ ನಾಟಕ ಪ್ರದರ್ಶಿಸಿದ ಬಗ್ಗೆ ಕೆಲವೇ ಕೆಲವರಲ್ಲಿ ಮಾತ್ರ ಮಾಹಿತಿಗಳು ಪ್ರಾಪ್ತವಾಗುತ್ತವೆ. ಅವರ ಕಂಪನಿಯಲ್ಲಿ ದುಡಿದ ತಾರಾಬಾಯಿ ಹಾಗೂ ಅನೇಕ ಕಲಾವಿದರು ನಗರದಲ್ಲಿ ಬದುಕು ಸವೆಸಿದ್ದರು.

ವೃತ್ತಿರಂಗದ ದಿಗ್ಗಜ ಹಂದಿಗನೂರ ಸಿದ್ರಾಮಪ್ಪನವರ ಶ್ರೀ ವಿಶ್ವಕಲಾ ರಂಜನ ನಾಟಕ ಮಂಡಳಿ ಈ ಊರಲ್ಲಿ ತನ್ನ ವೈಭವ ಮೆರೆದಿದೆ. ಕರ್ನಾಟಕದ ಷೇಕ್ಸ್‌ಪಿಯರ್ ಎಂದೇ ಹೆಸರಾದ ಕಂದಗಲ್ ಹಣಮಂತ್ರಾಯ ಅವರು ಮೈಸೂರ್ ಬ್ಯಾಂಕ್ ಬಳಿ ಜಾಗದಲ್ಲಿ (1945) ಅರವಿಂದ ನಾಟಕ ಮಂಡಳಿ ವತಿಯಿಂದ ತಾವೇ ನಿರ್ದೇಶಿಸಿ ಮಾತಂಗ ಕನ್ಯ ನಾಟಕ ಪ್ರದರ್ಶಿಸಿದರು. ಅದೇ ಸಂದರ್ಭದಲ್ಲಿ ಅವರ ಮತ್ತೊಂದು ಪ್ರಸಿದ್ಧ ನಾಟಕ 'ಬೆಳ್ಳಿಚುಕ್ಕಿ' ಪ್ರದರ್ಶನಗೊಂಡಿತು. ನಡೆದಾಡುವ ನಾಟಕ ವಿಶ್ವವಿದ್ಯಾಲಯವೆಂದೇ ಅನ್ವರ್ಥಕನಾಮ ಪಡೆದ ಗೋಕಾಕ ಬಸವಣ್ಣೆಪ್ಪನವರ ಶಾರದಾ ಸಂಗೀತ ಮಂಡಳಿ ಕಂದಗಲ್ಲರಾಯರ ಅನೇಕ ನಾಟಕಗಳನ್ನು ತಿಂಗಳುಗಟ್ಟಲೇ ಪ್ರಯೋಗಿಸಿ ದಾಖಲೆ ಸ್ಥಾಪಿಸಿದ್ದಾರೆ.

ಏಣಗಿ ಬಾಳಪ್ಪನವರ ಕಲಾವೈಭವ ನಾಟಕ ಸಂಘದ 'ಬಸವೇಶ್ವರ' ನಾಟಕದ ಬಾಳಪ್ಪನವರ 'ಬಸವಣ್ಣ' ಪಾತ್ರ ಇವತ್ತಿಗೂ ಅಚ್ಚ ಹಸಿರು. ಕಳೆದ ನಲವತ್ತು ವರುಷಗಳ ಹಿಂದೆ ಬೀರಲಿಂಗೇಶ್ವರ ಮೈದಾನದ ಜಾಗದಲ್ಲಿ ಕಾಕನೂರು ಯಲ್ಲಪ್ಪನವರ ಮಹಾಕೂಟೇಶ್ವರ ನಾಟಕ ಕಂಪನಿ ಏಳು ವರುಷಗಳ ಕಾಲ (1970–77) ಅತ್ಯಂತ ಸುದೀರ್ಘ ಅವಧಿವರೆಗೆ ಒಂದೇ ಒಂದು ಊರಿನಲ್ಲಿ ಬಿಡಾರ ಹೂಡಿ ನಾಟಕಗಳನ್ನು ಪ್ರಯೋಗಿಸಿದ್ದು ಅಕ್ಷರಶಃ ದಾಖಲೆ. ಅದಕ್ಕೂ ಮುಖ್ಯವಾಗಿ ಅದಕ್ಕೆ ಮುನ್ನ ಜಗಳೂರು ತಾಲ್ಲೂಕಿನ ಬಿದರಕೆರೆಯವರಾದ ಅಭಿಜಾತ ರಂಗನಟ ಬಿ. ಓಬಳೇಶ್ 'ಖಾದಿಸೀರೆ' ನಾಟಕದ ಮುಖಾಂತರ ಈ ಊರಿನ ವೃತ್ತಿರಂಗಭೂಮಿಗೆ ಹೊಸ ಆಯಾಮ ತಂದುಕೊಟ್ಟರು. ಓಬಳೇಶ್ ವೃತ್ತಿರಂಗ ಭೂಮಿ ತಾರೆಯಾಗಿ ಮೆರೆದರು.

ಓಬಳೇಶ್ ಡಾ. ರಾಜ್‌ಕುಮಾರ್ ಜೊತೆಗೆ ಎಚ್ಚಮನಾಯಕ ನಾಟಕದ ಚಾಂದಖಾನ್ ಪಾತ್ರ ಮಾಡಿ ಬಹಳಷ್ಟು ಹಿಂದೆಯೇ ರಾಜ್‌ಕುಮಾರ್ ಕೂಡ ಸೋಜಿಗಪಡುವಂತೆ ಅಭಿನಯಿಸಿದ್ದರು. ಹಿರಣ್ಣಯ್ಯ ಮಿತ್ರ ಮಂಡಳಿಯ ಮಕ್ಮಲ್ ಟೋಪಿ, ಲಂಚಾವತಾರ, ದೇವದಾಸಿ ನಾಟಕಗಳು ಇನ್ನೂ ನಿನ್ನೆ ಮೊನ್ನೆಯಷ್ಟೇ ಪ್ರದರ್ಶನಗೊಂಡ ಹುರುಪನ್ನು ಉಳಿಸಿಹೋಗಿವೆ.

1944ರಲ್ಲಿ ನ್ಯಾಮತಿ ಶಾಂತಪ್ಪನವರು 'ಶ್ರೀ ಮಹೇಶ ನಾಟ್ಯ ಸಂಘ'ವನ್ನು ಸ್ಥಾಪಿಸಿ 1974ರವರೆಗೆ ಕರ್ನಾಟಕದ ತುಂಬೆಲ್ಲಾ ಸಂಚರಿಸಿದ್ದಾರೆ. ಅವರ ಪತ್ನಿ ಕಮಲಮ್ಮನವರು ಬರೆದ 'ಮೂಲಾ ನಕ್ಷತ್ರ' ಎಂಬ ನಾಟಕ ಆಗ ಪ್ರಸಿದ್ಧಿ ಆಗಿತ್ತು. ಹೈದ್ರಾಬಾದ ಕರ್ನಾಟಕ ಪ್ರಾಂತ್ಯಗಳಲ್ಲಿ ಈ ಕಂಪನಿ ತನ್ನ ಕೀರ್ತಿ ಮೆರೆದಿದೆ.

ಇಂದು ಸಿನಿಮಾ ಜಗತ್ತಿನಲ್ಲಿ ತಾರಾಮೌಲ್ಯ ಗಳಿಸಿಕೊಂಡಿರುವ ಹಂಸಲೇಖ ಈಗಿನ ತ್ರಿಶೂಲ್ ಟಾಕೀಸ್ ಬಳಿ ಬಿಡಾರಹೂಡಿ 'ರೈತಜೀವಿ' ಪ್ರಯೋಗಿಸಿದ್ದು ಯಾರೂ

ಮರೆತಿಲ್ಲ. ಇತ್ತೀಚಿನ ದಶಕಗಳಲ್ಲಿ ಗುಡಗೇರಿ ಬಸವರಾಜರ 'ಸೂಳೇಮಗ' (1981–84) ಮತ್ತು 1996ರ ಕಡೆಯ ಭಾಗದಲ್ಲಿ ಎರಡನೇ ಬಾರಿಗೆ ಭೀಮಣ್ಣ ಅರಿಶಿಣಗೋಡಿಯವರ "ಸೊಸೆ ಹಾಕಿದ ಸವಾಲ್" ದೊಡ್ಡಸವಾಲಿನಂತೆ ದುಡ್ಡು ಬಾಚಿಬಿಟ್ಟಿತು. ಎರಡನೇ ಬಾರಿಗೆ ಕ್ಯಾಂಪು ಮಾಡಿದ ಕುಮಾರೇಶ್ವರ ನಾಟಕ ಸಂಘ ಚಿತ್ರದುರ್ಗದ ಬಿ. ಕುಮಾರಸ್ವಾಮಿಯವರ 'ದೇವಿ ಮಹಾತ್ಮೆ' ಬಸವಲಿಂಗ ಶಾಸ್ತ್ರಿಗಳ ಸತ್ವಶಾಲಿ ಸಂಭಾಷಣೆಯಿಂದ ಸಾಹಿತ್ಯಿಕ ಮೌಲ್ಯ ಧರಿಸಿ ನಿಂತಿತ್ತು. ಈ ನಾಟಕ ಹಣ ಮಾಡಲಿಲ್ಲ ಮಾತ್ರವಲ್ಲ ಕಲಾವಿದರ ಹೊಟ್ಟೆ ಕೂಡಾ ತುಂಬಿಸಲಿಲ್ಲ ಎಂಬುದು ಖರೇ. 1999ರಲ್ಲಿ ಚಿಂದೋಡಿಲೀಲಾ ಅವರು ನಗರಸಭಾ ರಂಗಮಂದಿರದಲ್ಲಿ ಪೋಲೀಸನ ಮಗಳು ಪ್ರದರ್ಶಿಸಿದರು. ಅವರ ಪ್ರದರ್ಶನಗಳು ದಾಖಲೆಗೆ ಲೆಕ್ಕ ಒಪ್ಪಿಸಿದವು.

2004ರಲ್ಲಿ ಮಂಡಲಗಿರಿ ವೀರಯ್ಯನವರ ಶ್ರೀ ಗುರು ತೋಂಟದಾರ್ಯ ನಾಟ್ಯ ಸಂಘವು ಹೊಸ ನಿಲ್ದಾಣದ ಬಳಿ ಒಂಭತ್ತು ತಿಂಗಳ ಕಾಲ ನಿರಂತರ ಮೊಕ್ಕಾಮಿನಲ್ಲಿ ಅವರ ಕಂಪನಿಯ ಎಲ್ಲಾ ಹೆಸರಾಂತ ನಾಟಕಗಳನ್ನು ಪ್ರದರ್ಶಿಸಿದರು. ಇಂದು ಸಿನಿಮಾ ಲೋಕದಲ್ಲಿ ಹೆಸರು ಮಾಡಿರುವ ರಾಜು ತಾಳಿಕೋಟೆ ಇವರ ಶ್ರೀ ಖಾಸಗತೇಶ್ವರ ನಾಟ್ಯ ಸಂಘವು ಇದೇ ಜಾಗದಲ್ಲಿ (2005) ಆರೇಳು ತಿಂಗಳು ಕಾಲ ನಾಟಕ ಪ್ರದರ್ಶಿಸಿದರು. ಕಳೆದ ಹತ್ತು ವರುಷಗಳ ಅವಧಿಯಲ್ಲಿ ಜೇವರ್ಗಿ ರಾಜಣ್ಣನವರ ಕಂಪನಿ ಎರಡು ಬಾರಿ ಮೊಕ್ಕಾಂ ಮಾಡಿ ಹಣ ಬಾಚಿಕೊಂಡಿತು. ಅವರ 'ಕುಂಟಕೋಣ ಮೂಕಜಾಣ' ನಾಟಕ ನಾಲ್ಕು ನೂರಾ ಐವತ್ತು ಪ್ರಯೋಗ ಮಾಡಿ ದಾಖಲೆ ಸ್ಥಾಪಿಸಿತು. ತದ ನಂತರ ಅಯ್ಯಣ್ಣ ಸ್ವಾಮಿ ಕಂಪನಿ, ಪ್ರೇಮಾ ಗುಳೇದಗುಡ್ಡ ಕಂಪನಿ ಇದೀಗ ಮಾಲತಿಸುಧೀರ್ ಅವರ ಕರ್ನಾಟಕ ಕಲಾ ವೈಭವ ನಾಟಕ ಕಂಪನಿ 'ಮುದುಕನ ಮದುವೆ' ನಾಟಕವನ್ನು ಅದ್ದೂರಿಯಾಗಿ ಪ್ರಯೋಗಿಸುತ್ತಿದೆ.

ದೇಶಭಕ್ತಿ, ನೀತಿಬೋಧೆ, ಅವಿಭಕ್ತ ಕುಟುಂಬ ಪ್ರೇಮ, ಉತ್ಕೃಷ್ಟ ಹಾಸ್ಯ, ಉನ್ನತ ಸಾಮಾಜಿಕ ಪ್ರಜ್ಞೆ ಮುಂತಾದ ವಸ್ತು ವಿಷಯಗಳುಳ್ಳ ನಾಟಕಗಳು ಅಂದು ವೃತ್ತಿರಂಗದ ಮೂಲದ್ರವ್ಯಗಳಾಗಿ ಅಸ್ತಿತ್ವ ಹಾಗೂ ಒಟ್ಟು ಬೆಳವಣಿಗೆಗೆ ಕಾರಣಗಳಾಗಿದ್ದವು. ಗೌಡ್ರಗದ್ಲ ನಾಟಕದ ನಂತರ ಇಡೀ ವೃತ್ತಿರಂಗಭೂಮಿಯ ಮನ್ವಂತರವೇ ಬದಲಾಗಿದೆ. ಅದು ಅಶ್ಲೀಲ ನಟನೆ ಮತ್ತು ಸಂಭಾಷಣೆಯ ಮೂಲಬಂಡವಾಳವಾಗಿ ಇನ್ನರ್ಥ ಸಿನಿಮಿಯವಾಗಿ ಅದುವೇ ನಾಟಕದ ಒಳಜೀವಾಳವಾಗಿರುವುದು ರಂಗ ದುರಂತ. ಕರ್ನಾಟಕದಲ್ಲಿ ಅಂದು ನೂರರಷ್ಟು ಕಂಪನಿಗಳು (ಹಂಗಾಮಿ ಸೇರಿ) ಕ್ರಿಯಾಶೀಲಗೊಂಡಿದ್ದರೆ ಇಂದು ಹತ್ತು–ಹದಿನೈದು ಕಂಪನಿಗಳು ಅಸ್ತಿತ್ವದಲ್ಲಿವೆ.

ಹಗಲು ಹೊತ್ತೆಲ್ಲ ಮಲಗಿ, ರಾತ್ರಿಯೆಲ್ಲಾ ಎಚ್ಚರವಿರುವ ವೃತ್ತಿ ಕಲಾವಿದರಿಗೆ

ಹಗಲು ಜಗತ್ತಿನ ಪರಿಚಯವಿಲ್ಲದೇ ಅಶಿಸ್ತು, ಹೆಣ್ಣು, ಹೆಂಡ ಮತ್ತು ಮಿತಿಮೀರಿದ ಸಿಳ್ಳು ಚಪ್ಪಾಳೆಗಳ ಭರದಲ್ಲಿ ವೈಯಕ್ತಿಕ ಬದುಕು ಬರ್ಬಾದ ಆಗುವುದು ಗೊತ್ತೇ ಆಗಿರುವುದಿಲ್ಲ. ಮುಪ್ಪಿನಲ್ಲಿ ಅದರ ಅರಿವು ಮೂಡಿರುವಾಗ ಅರಿವಿನ ಪ್ರಯೋಜನವು ಬರ್ಬಾದ್ ಆಗಿ ಬಿಡುತ್ತದೆ. ಅಂಥವರಿಗೆ ಅಕಾಡೆಮಿಗಳು ನೀಡುವ ಪ್ರಶಸ್ತಿಗಳಿಂದ ಸಿಗುವ ಫಾಯದೆಗೆ ಅರ್ಥವಿಲ್ಲ.

ಪಾರ್ಸಿ ನೆಲೆಯಲ್ಲಿ ಬೆಳೆಯುತ್ತ ಬಂದ ವೃತ್ತಿರಂಗಭೂಮಿ ನೂರೈವತ್ತು ವರುಷಗಳ ಇತಿಹಾಸದಲ್ಲಿ ವೃತ್ತಿಕಂಪನಿಗಳಲ್ಲಿ ತನ್ನ ಗಟ್ಟಿನೆಲೆಯನ್ನು ಕಂಡುಕೊಂಡರೂ ಇವತ್ತು ಗ್ರಾಮೀಣರೇ ಅಧಿಕ ಮೊತ್ತದಲ್ಲಿ ಅದರ ಅಸ್ತಿತ್ವಕ್ಕೆ ಕಾರಣರಾಗಿದ್ದಾರೆ. ಹೊಸ ಅಲೆಗೆ ಪ್ರಾಪ್ತವಾದ ಪ್ರೋತ್ಸಾಹ ಮತ್ತು ಪ್ರಯೋಗಶೀಲತೆ ವೃತ್ತಿರಂಗಕ್ಕೆ ಪ್ರಾಪ್ತವಾಗಲಿಲ್ಲ. ರಂಗ ಸಜ್ಜಿಕೆಯಿಂದ ಹಿಡಿದು ಅದರ ಎಲ್ಲ ಮಗ್ಗಲುಗಳಲ್ಲಿ ಆಗಿರುವ ಆವಿಷ್ಕಾರವೆಂದರೆ ಸಿನಿಮಾದ ಹೇರಳ ಪ್ರಭಾವ. ಜೊತೆಗೆ ಅಡ್ಡಡ್ಡ ಬೆಳವಣಿಗೆ ಎಂಬಂತೆ ದ್ವಂದ್ವಾರ್ಥಗಳ ಯಥೇಚ್ಛ ಬಳಕೆ.

ಹೊಸ ಹೊಸ ವೃತ್ತಿನಾಟಕಕಾರ(ಕವಿಗಳು)ರು ಬರಲಿಲ್ಲ. ಬದಲಾದ ಸಾಮಾಜಿಕ ಮೌಲ್ಯಗಳಿಗನುಗುಣವಾಗಿ ನಾಟಕದ ಬರವಣಿಗೆ ರೂಪುಗೊಳ್ಳಲಿಲ್ಲ. ಸೆಟಲಾಯಿಟ್ ಜಗತ್ತಿನ ಮುಂಚೂಣಿಯಲ್ಲಿ ಒಂದು ನ್ಯೂಕ್ಲಿಯರ್ ಕುಟುಂಬ ಕುಂತು ನೋಡಬೇಕಾದ ವೃತ್ತಿನಾಟಕಗಳು ಹೇಗಿರಬೇಕೆಂಬ ಸವಾಲುಗಳ ನಡುವೆ ವೃತ್ತಿನಾಟಕ ರೂಪುಗೊಂಡು ತನ್ನ ಅಸ್ತಿತ್ವ ಹಾಗೂ ಬೆಳವಣಿಗೆ ಕಂಡುಕೊಳ್ಳುವುದು ಸಣ್ಣ ಸವಾಲು ಅಲ್ಲ.

ಅಂತಹ ಸವಾಲುಗಳು ಈ ದಾವಣಗೆರೆ ನಗರದಲ್ಲಿರುವ ನೂರಕ್ಕೂ ಹೆಚ್ಚು ಕಲಾವಿದರು ಸೇರಿದಂತೆ ನಮ್ಮೆಲ್ಲರ ಬದುಕಿನ ಸಾಂಸ್ಕೃತಿಕ ಸವಾಲು ಕೂಡಾ ಅದಾಗಿರುತ್ತದೆ. ಈ ಎಲ್ಲ ಸಂಕೀರ್ಣತೆ ನಡುವೆ ವೃತ್ತಿರಂಗಭೂಮಿ ಬದುಕಿ ಬಾಳಬೇಕು. ಈ ಹಿನ್ನೆಲೆಯೆಂಬಂತೆ 2007ರ ಸೆಪ್ಟೆಂಬರ್ ತಿಂಗಳಲ್ಲಿ ಕರ್ನಾಟಕ ನಾಟಕ ಅಕಾಡೆಮಿಯು ಅಖಿಲ ಭಾರತ ಮಟ್ಟದ ಕನ್ನಡ ವೃತ್ತಿರಂಗಭೂಮಿ ಸಮ್ಮೇಳನವನ್ನು ಏರ್ಪಡಿಸಿ ರಂಗಭೂಮಿಗೆ ಹೊಸ ಆಯಾಮ ನಿರ್ಮಿಸಿತು.

# ದಾವಣಗೆರೆ ಹವ್ಯಾಸಿ ರಂಗಭೂಮಿ

ವೃತ್ತಿ ಕಂಪನಿ ನಾಟಕಗಳಷ್ಟು ರೋಚಕವಾದ ಇತಿಹಾಸ ಇಲ್ಲದಿದ್ದರೂ ದಾವಣಗೆರೆಯ ಹವ್ಯಾಸಿ ರಂಗಭೂಮಿಯ ಕ್ರಿಯಾಶೀಲ ಚಟುವಟಿಕೆಗಳು ದಾಖಲಾರ್ಹ. ಈ ಊರಿನ ವರ್ತಕರು, ವಕೀಲರು, ವೈದ್ಯರು, ಉಪನ್ಯಾಸಕರು, ಇಂಜಿನಿಯರು, ರಾಜಕಾರಣಿಗಳು.... ಹೀಗೆ ತರಹೇವಾರಿ ಮಂದಿಯಲ್ಲಿನ ಇನ್‌ಸ್ಟಂಟ್ ರಂಗಪ್ರಜ್ಞೆ ಪ್ರತಿಭಾಶಾಲಿಯಾದುದು. ಅವರು ಕುಂತ ಕುಂತಲ್ಲೇ ಆಯಾ ಕಾಲದ ಸಮಸ್ಯೆ, ರೋಚಕ ಸಂಗತಿಗಳ ಮೇಲೆ ದಿಢೀರನೆ ಅನ್ನುವಂತೆ ಒಂದೊಂದು ಪಾತ್ರಧಾರಿಗಳಾಗಿ ಹಲವಾರು ಪ್ರಹಸನಗಳನ್ನು ಪ್ರದರ್ಶಿಸಿದ್ದುಂಟು. ಪ್ರತಿಮಾಸಭಾಕ್ಕೆ ಮೊದಲು ಹತ್ತು ಹಲವು ಅಂತಹ ರಂಗಯತ್ನಗಳಾಗಿವೆ. 1950ರ ಸುಮಾರಿಗೆ "ದಾವಣಗೆರೆ ಯುವಕರ ಸಂಘ" ಹೆಸರಿನಲ್ಲಿ ಕೆಲವು ರಂಗ ಪ್ರದರ್ಶನಗಳಾಗಿವೆ. ವಕೀಲ ಚನ್ನಪ್ಪನವರು, ಭೂಸನೂರು ಜಯಣ್ಣ, ಸಾ.ಮ. ಸದಾಶಿವಯ್ಯ, ಸಾ.ಮ. ಹಾಲಯ್ಯ, ಟಿ.ಎಸ್. ಫಕೀರಪ್ಪ, ಟಿ.ಎಚ್. ತೆಲ್ಕರ್, ಪಿ.ಎಂ. ರುದ್ರಯ್ಯ ಮುಂತಾದವರು ರಾಜ್ಯಮಟ್ಟದ ನಾಟಕ ಸ್ಪರ್ಧೆಗಳನ್ನು ಏರ್ಪಡಿಸಿರುವುದುಂಟು.

ಅದೇ ಸುಮಾರಿಗೆ ಆರ್ಟಿಸ್ಟ್ ಕಂಬೈಂಡ್ ಸಂಸ್ಥೆಯವರ ಅಖಿಲ ಕರ್ನಾಟಕ ಕೈಲಾಸಂ ನಾಟಕ ಸ್ಪರ್ಧೆ, ಹಿರಣ್ಣಯ್ಯ ಸ್ಮಾರಕ ಏಕಾಂಕ ನಾಟಕಗಳ ಸ್ಪರ್ಧೆ ಏರ್ಪಡಿಸಿದವರು ನಾಗೇಂದ್ರರಾವ್. ತದನಂತರ "ಸಾಮಸ" ಕಲಾ ವೃಂದದ ಗೆಳೆಯರು (ಸಾಮಸ–ಸಾಲಿಮಠದ ಸದಾಶಿವಯ್ಯ) ಹತ್ತಾರು ವರ್ಷಕಾಲ ದಾಶರಥಿ ದೀಕ್ಷಿತ್, ಪರ್ವತವಾಣಿ, ಎ.ಎಸ್. ಮೂರ್ತಿಯವರ ಇನ್ನು ಅನೇಕರ ಹಲವಾರು ನಾಟಕಗಳನ್ನು ಪ್ರದರ್ಶಿಸಿದ್ದಾರೆ.

ಇದಕ್ಕೂ ಮುನ್ನ ಕಲಾಜ್ಯೋತಿ ನಾಟಕ ಬಳಗದವರು ಮದುವೆ ಹುಚ್ಚು, ಚಲನಪ್ರಪಂಚ, ಪತ್ರ ಪ್ರಸಂಗ, ಜಾರಿದ ಜಗದ್ಗುರು, ಮಾನವತಿ, ನಾಟಕಗಳನ್ನು ಪ್ರದರ್ಶಿಸಿದ್ದಾರೆ. 'ಸಾಮಸ' ಬಳಗದ "ವಗ್ಗರಣಿಸುಬ್ಬಣ್ಣಿ" ಎಂಬ ಹಾಸ್ಯ ನಾಟಕ ಹಾವೇರಿ, ಹುಬ್ಬಳ್ಳಿಗಳಲ್ಲೂ ಪ್ರದರ್ಶನ ಕಂಡಿದೆ. ಎಂ.ಸಿ. ಶರ್ಮ, ನೀಲಕಂಠರಾವ್, ಜಿ. ಕೊಟ್ರೇಶ್, ಅನಂತರಾವ್ ಸಿಂಧೆ, ರಾಜಶೇಖರಯ್ಯ, ಶ್ರೀಕಂಠಮೂರ್ತಿ, ಅಣಬೂರು ಪುಟ್ಟಯ್ಯ, ಚಿದಂಬರರಾವ್, ಆರ್.ಟಿ.ರಮಾ, ಆರ್.ಟಿ. ಪ್ರಭಾ, ಇವರೆಲ್ಲರೂ ಹವ್ಯಾಸಿ

ರಂಗಸಂಘಟನೆಗಳ ಕಲಾವಿದರು. 1975ರ ಸುಮಾರಿಗೆ ರಾಜಾರಾಂ ಗಿರಿಯನ್ ಅವರು ದಾವಣಗೆರೆಗೆ ಸರ್ಕಾರಿ ಉದ್ಯೋಗಿಯಾಗಿ ಬಂದು "ಸ್ನೇಹಸಂಪದ" ಎಂಬ ರಂಗತಂಡಕಟ್ಟಿ ಶ್ರೀರಂಗರ ಹಾಗೂ ಕಂಬಾರರ ಅನೇಕ ನಾಟಕಗಳನ್ನು ರಂಗಕ್ಕೆ ತಂದವರು. "ನಾಯಿಕತೆ" ಆ ಕಾಲದ ಅವರ ಪ್ರಸಿದ್ಧ ನಾಟಕವಾಗಿತ್ತು. 'ಕನ್ನಡ ನಾಡ ಕಲಾವಿದರ ಸಂಘ' ಹತ್ತು ವರ್ಷಕಾಲ ರಂಗ ಚಟುವಟಿಕೆ ಮೆರೆದಿದೆ. ಫ್ರೆಂಡ್ಸ್ ಯೂನಿಯನ್ ಕೆಲವು ನಾಟಕಗಳನ್ನು ಪ್ರದರ್ಶಿಸಿದೆ. ವಿಷಜ್ವಾಲೆ, ಬೇಲೂರು ಕೃಷ್ಣ ಮೂರ್ತಿ ಯವರ ಕಂಬನಿ, ಮಂಗಳಾ ನನ್ನ ಅತ್ತಿಗೆಯಲ್ಲಿ ಎ. ಭದ್ರಪ್ಪನವರ ಪಾತ್ರ ಹೆಸರು ಮಾಡಿತು. ಎ, ಭದ್ರಪ್ಪನವರು ಸ್ಥಾಪಿಸಿದ (1984 ಅಕ್ಟೋಬರ್) ಶ್ರೀ ಸರ್ವಮಂಗಳ ನಾಟ್ಯ ಸಂಘವು ಹದಿನೈದು ತಿಂಗಳ ಕಾಲ ನಡೆದು ಬೀರೂರು ಕ್ಯಾಂಪ್‌ನಲ್ಲಿ ಅಗ್ನಿಗೆ ಆಹುತಿಯಾಯಿತು.

ಸಾಕ್ರೆಟಿಸ್‌ನ 'ತೀರ್ಪು' ಎಂಬ ನಾಟಕವನ್ನು ಮಲ್ಲಿಕಾರ್ಜುನ ಜಾಧವ್ 'ಸಾಮಸ' ತಂಡಕ್ಕೆ ಸಿದ್ಧಪಡಿಸಿಕೊಟ್ಟಿದ್ದರು. 'ಶ್ರದ್ಧಾಂಜಲಿ' ಎಂಬ ಅವರ ಇನ್ನೊಂದು ನಾಟಕ ಆ ಕಾಲಕ್ಕೆ ಹೆಚ್ಚು ಗಮನಸೆಳೆದಿತ್ತು. ದಾವಣಗೆರೆ ಹವ್ಯಾಸಿ ಕಲಾವಿದರ ತಂಡ (ದಾಹಕ) ವು ಇದೇ ಸಂದರ್ಭದಲ್ಲಿ ನಗರ ಹಾಗೂ ಬೇರೆ ಊರುಗಳಲ್ಲಿಯೂ ರಂಗ ಪ್ರದರ್ಶನಗಳನ್ನು ನೀಡಿದೆ.

ನಾಟಕಪ್ರೇಮ ಆ ಕಾಲದ ಹೇಮಾಹೇಮಿ ರಾಜಕಾರಣಿಗಳನ್ನು ಹರಿಗಡಿಯದೇ ಕಾಡಿತ್ತು. "ಅಖಿಲ ಕರ್ನಾಟಕ ಕ್ಷಾಮ ನಿವಾರಣಾ ಸಮ್ಮೇಳನ" ಎಂಬ ನಾಟಕವನ್ನು ಈ ಊರಿನವರಾದ ಬಿ.ಟಿ. ಸೋಮಣ್ಣ (ಬಿ.ಡಿ.ಎ. ಅಧ್ಯಕ್ಷ) ಸಿ. ಕೇಶವಮೂರ್ತಿ (ದಾವಣಗೆರೆ ನಗರಾಭಿವೃದ್ಧಿ ಮಂಡಳಿ ಪ್ರಥಮ ಅಧ್ಯಕ್ಷ), ವಕೀಲ ಚೆನ್ನಪ್ಪ, ಖ್ಯಾತ ಸಾಹಿತಿ ಡಾ. ಸಾ.ಶಿ. ಮರುಳಯ್ಯ ಈ ಎಲ್ಲರೂ ಕೂಡಿ "ದಾಹಕ" ತಂಡದಿಂದ ಕರ್ನಾಟಕದ ಬೇರೆ ಬೇರೆ ಪ್ರಾಂತ್ಯದ (ಹೈದ್ರಾಬಾದ್ ಕರ್ನಾಟಕ, ಮುಂಬೈ ಹಾಗೂ ಮೈಸೂರು ಕರ್ನಾಟಕ) ರಾಜಕಾರಣಿ ವೇಷಗಳನ್ನು ಹಾಕಿ ಜನಮಾನಸ ಗೆದ್ದ ರಂಗಕೀರ್ತಿ ಇವರದಾಗಿತ್ತು. ಈ ನಾಟಕ ಬಾಗಲಕೋಟೆ, ಗದಗ ಬೆಳಗಾವಿಗಳಲ್ಲೂ ಪ್ರದರ್ಶನ ಕಂಡಿದೆ. 1967ರಲ್ಲಿ ಭಾರತಿ ಕನ್ನಡ ಕಲಾ ಸಂಘವೆಂಬುದನ್ನು 1977ರಲ್ಲಿ ಎ.ವೈ. ಕೃಷ್ಣಮೂರ್ತಿ ಸಾರಥ್ಯದಲ್ಲಿ 'ರಂಗಕ್ಷಿತಿಜ' ಎಂದು ಪುನರ್ ನಾಮಕರಣಗೊಂಡು ಐರಣಿ ಪ್ರದೀಪ್, ಶ್ರೀನಿವಾಸ ಸುತ್ರಾವೆ, ರಂಗನಾಥ ಅನೇಕರು ಶ್ರಮಿಸಿದ್ದಾರೆ. "ರಂಗಕ್ಷಿತಿಜ" ತಂಡ ಚಂಪಾ ಅವರ ಕೆಲವು ನಾಟಕಗಳನ್ನು ಪ್ರಯೋಗಿಸಿ ಸೈ ಎನಿಸಿಕೊಂಡಿತ್ತು.

1984ರಲ್ಲಿ ಸುಮಾರಿಗೆ ಮಲ್ಲಿಕಾರ್ಜುನ ಕಡಕೋಳ ಸ್ಥಾಪಿಸಿದ "ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ" ರಂಗ ಸಂಸ್ಕೃತಿಯನ್ನು ಮೆರೆಯುವಲ್ಲಿ ಹಿಂದೆ ಬೀಳಲಿಲ್ಲ. ಸಾಮಾಜಿಕ

ಕಳಕಳಿಯ ಕಾರ್ಯಕ್ರಮಗಳೊಂದಿಗೆ ಕೈಗೊಂಡ ರಂಗ ಕೈಂಕರ್ಯ ಕಡಿಮೆ ಏನಲ್ಲ. "ಕ್ರಾಂತಿಸೂರ್ಯ" ಎಂಬ ಎಡಪಂಥೀಯ ಒಲವಿನ ನಾಟಕ, 'ತಾಯಿ' ಹಾಗೂ 'ಕಲ್ಯಾಣಿ' ಎಂಬ ನಾಟಕಗಳನ್ನು ಅಕಾಡೆಮಿ ನೆರವಿನಿಂದ ಕುಕ್ಕವಾಡ, ದಾವಣಗೆರೆ ಹಾವೇರಿಯಲ್ಲಿ ಪ್ರದರ್ಶಿಸಿದರು. ಮೊದಲ ಬಾರಿಗೆ ದೊಡ್ಡಾಟದ ನವೀನ ಶೈಲಿಯಲ್ಲಿ ಏಕಲವ್ಯ ಹಾಗೂ ಬಸವವಿಜಯ, ಕಿತ್ತೂರು ಚೆನ್ನಮ್ಮ ಪ್ರದರ್ಶನಗಳನ್ನು ದಾವಣಗೆರೆ ರಂಗಾಸಕ್ತರಿಗೆ ನೀಡಿದ ಹಿರಿಮೆ "ಅಭಿವ್ಯಕ್ತಿ ಸಾಂಸ್ಕೃತಿಕ" ವೇದಿಕೆಗೆ ದಕ್ಕುತ್ತದೆ.

ನೀನಾಸಂ ಶಿಕ್ಷಣ ಪಡೆದು ಬಂದ ಎಸ್.ಎಸ್. ಸಿದ್ದರಾಜು ಕಟ್ಟಿದ ನೀವು ನಾವು ರಂಗ ತಂಡ, ದಾವಣಗೆರೆ ನಗರಸಭೆ ಉದ್ಯೋಗಿ ರುದ್ರಮುನಿ ಅವರ ರಾಘವೇಂದ್ರ ಕಲಾತಂಡದಿಂದ ಅನೇಕ ರಂಗ ಪ್ರಯೋಗಗಳನ್ನು ಯಶಸ್ವಿಯಾಗಿ ನೀಡಿದ್ದಾರೆ. 'ನೀವು–ನಾವು ರಂಗ' ಪಂಚಮಿ ನಾಟಕೋತ್ಸವದೊಂದಿಗೆ, ರಂಗಶಂಕರ, ನಾಟಕೋತ್ಸವ ಆಪ್ತರಂಗಭೂಮಿಯ ಪರಿಚಯ, ನೀನಾಸಂ ತಿರುಗಾಟ–ಮರು ತಿರುಗಾಟ ಪ್ರದರ್ಶನಗಳಿಗೆ ಅವಕಾಶ ಮಾಡಿಕೊಟ್ಟಿದೆ. ದಶಕ ಪೂರೈಸಿದ ನೆಮ್ಮದಿ 'ನೀವು–ನಾವು' ತಂಡಕ್ಕೆ.

1978–79ರಲ್ಲಿ 'ಸಮುದಾಯದ' ಜಾಥಾ ಹಾಗೂ ಹಲವಾರು ನಾಟಕ ಪ್ರದರ್ಶನಗೊಂಡಿವೆ. (ಸಮುದಾಯ ಕುರಿತು ಪ್ರತ್ಯೇಕ ಲೇಖನವಿದೆ.) 'ಯುವರಂಗ' ನಾಲ್ಕು ವರ್ಷಗಳಕಾಲ ರಂಗ ಚಟುವಟಿಕೆಗಳನ್ನು ಮೆರೆದಿದೆ. ಹುಣಸೆಕೋಟೆ ಶೇಷಗಿರಿಯಪ್ಪನ ಕೊಲೆ ಪ್ರಕರಣ ಕುರಿತಾದ 'ಅವಶೇಷ' ಎಂಬ ಬೀದಿ ನಾಟಕ ಹಾಗೂ 'ಬೆಂಕಿ' ಎಂಬ ಸ್ಟೇಜ್ ಡ್ರಾಮಾ ಪ್ರದರ್ಶಿಸಿದ್ದಾರೆ. ಫೋಟೋ ವಿಜಿ ಕೆಲಕಾಲ 'ಸ್ಪಂದನ' ಎಂಬ ಬೀದಿ ನಾಟಕ ತಂಡ ಕಟ್ಟಿದ್ದರು.

ಇದೇ ಸುಮಾರಿಗೆ ಪತ್ರಕರ್ತ ಸೀನೋಜಿರಾವ್ ರಚಿಸಿದ 'ಗಂಡನ ಮಡದಿ ನಡೆ ಮುಂದೆ' ನಾಟಕದಲ್ಲಿ ಪದ್ಮಾಕುಮಟಾ ಅಭಿನಯಿಸಿದ್ದು ನೆನಪಿಡುವಂತಹದ್ದು. ವಿವೇಕ (ವಿರಾಮ ವೇಳೆಯ ವೃತ್ತಿ ನಿರತ ಹವ್ಯಾಸಿ ಕಲಾವಿದರು) ಎಂಬ ರಂಗ ತಂಡ ಕೊಡೆಗಳು, ಕಡೇ ಮನೆ, ಕಡೇಗಲ್ಲಿ ರಂಗ ಪ್ರದರ್ಶನಗಳನ್ನು ನೀಡಿದೆ. ಇದೇ ತಂಡದಿಂದ 1977ರಲ್ಲಿ ಈಗಿರುವ ತ್ರಿಶೂಲ್ ಕಲಾಭವನ ಜಾಗದಲ್ಲಿ ಸಿನಿಮಾ ಲೋಕದ ಸಂಗೀತ ತಾರೆ ಹಂಸಲೇಖ (ಅಂದು ಗಂಗರಾಜು ಹೆಸರಿತ್ತು) 'ರೈತಜೀವಿ' ಎಂಬ ನಾಟಕವನ್ನು ಒಂಬತ್ತು ತಿಂಗಳ ಕಾಲ ನಿರಂತರ ಪ್ರದರ್ಶನ ನೀಡಿದ್ದಾರೆ.

ಇವತ್ತು ಈಟಿವಿಯಲ್ಲಿ ಖ್ಯಾತನಾಮರಾಗಿರುವ ಎಸ್. ಸುರೇಂದ್ರನಾಥ ದಾವಣಗೆರೆಯವರು. ಆ ಕಾಲದಲ್ಲೇ ಅವರು ಎನ್.ಎಸ್.ಡಿ. ಪದವೀಧರರು. 'ನೀಲಿ ಕುದುರೆ' ಎಂಬ ಮಕ್ಕಳ ನಾಟಕವನ್ನು ನಿರ್ದೇಶಿಸಿ ರಾಜ್ಯಮಟ್ಟದಲ್ಲಿ ಬಹುಮಾನ

ಪಡೆಯುತ್ತಾರೆ. ಪ್ರತಿಮಾಸಭಾಕ್ಕೆ 'ಹಯವದನ' ಮಾಡಿಕೊಟ್ಟ ಹೆಗ್ಗಳಿಕೆ ಸುರೇಂದ್ರನಾಥ್ ಅವರಿಗೆ ಸಲ್ಲುತ್ತದೆ.

ದಾವಣಗೆರೆಯ 'ಇಪ್ಟಾ' ಕಲಾವಿದರ ತಂಡದವರು ಜನಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಹಲವಾರು ಬೀದಿನಾಟಕಗಳನ್ನು ಅಭಿನಯಿಸುತ್ತಲೇ ಬಂದಿದ್ದಾರೆ. ಕೊಂಡಜ್ಜಿಯಲ್ಲಿ ರಂಗ ಸಂಗೀತ ಕುರಿತಾದ ಶಿಬಿರವನ್ನು ಸ್ಥಳೀಯ ಇಪ್ಟಾ ತಂಡ 2011ರ ಜುಲೈ ತಿಂಗಳಲ್ಲಿ ಜರುಗಿಸಿತು. 'ನೀಶಾಶ್ವತವಲ್ಲ ನೀ ಮಾಡಿದ ಸೇವೆ ಶಾಶ್ವತ' ಎಂಬ ಧ್ಯೇಯವಾಕ್ಯದೊಂದಿಗೆ ಸ್ಫೂರ್ತಿ ಸೇವಾಬಳಗವು ತಂಡವಾಗಿ ಬೆಳೆಯದಿದ್ದರೂ ವೃತ್ತಿಕಂಪನಿ ನಾಟಕಗಳಿಗೆ, ಕಲಾವಿದರಿಗೆ, ಪ್ರೋತ್ಸಾಹ ನೀಡುತ್ತಾ ಬಂದಿದೆ.

ಮೈಸೂರಿನ ರಂಗಾಯಣ ಅಸ್ತಿತ್ವಕ್ಕೆ ಬರುವಲ್ಲಿ ದಾವಣಗೆರೆಯ ಪಾತ್ರ ನಿರ್ಣಾಯಕದಂತಿದೆ. ಪ್ರಥಮ ತಂಡದ ಅಂತಿಮ ಆಯ್ಕೆಯ ಪ್ರಕ್ರಿಯೆಗಳು ವಾರಗಟ್ಟಲೇ ದಾವಣಗೆರೆಯ ಗುಂಡಿಛತ್ರ, ಕೊಂಡಜ್ಜಿ ಬೆಟ್ಟದಲ್ಲಿ ಬಿ.ವಿ. ಕಾರಂತರ ಸಾರಥ್ಯದಲ್ಲಿ ಜರುಗಿದ್ದು ರಂಗೇತಿಹಾಸ.

ರಾಜ್ಯ ಮಟ್ಟದಲ್ಲಿ ತನ್ನ ರಂಗಖ್ಯಾತಿಯನ್ನು ಗಳಿಸಿರುವ ಸಾಣೇಹಳ್ಳಿಯ ಶ್ರೀ ಪಂಡಿತಾರಾಧ್ಯರ ರಂಗಸಾರಥ್ಯದ ಶಿವಸಂಚಾರವು ಕಳೆದ ಹದಿನೇಳು ವರುಷಗಳಿಂದಲೂ ತಪ್ಪದೇ ದಾವಣಗೆರೆಯ ವಿವಿಧ ಭಾಗಗಳಲ್ಲಿ ರಂಗ ಸಂಚಾರ ಮಾಡಿ ವೈವಿಧ್ಯಮಯವಾದ ನಾಟಕಗಳನ್ನು ಪ್ರದರ್ಶಿಸಿದೆ. ಅಷ್ಟೇ ಅಲ್ಲದೇ ದಾವಣಗೆರೆಯಲ್ಲಿ ಅಖಿಲ ಭಾರತ ಮಟ್ಟದ ನಾಟಕೋತ್ಸವವನ್ನು ನಿರ್ವಹಿಸಿದ ಯಶಸ್ಸು ಶಿವಕುಮಾರ ಕಲಾಬಳಗಕ್ಕೆ ಸಲ್ಲುತ್ತದೆ. ಚಿತ್ರದುರ್ಗದ ಜಮುರಾ ಕಲಾ ತಂಡವು ಈ ಊರಲ್ಲಿ ಹೊಸ ಅಲೆಯ ನಾಟಕಗಳನ್ನು ಪ್ರದರ್ಶಿಸಿ ಮೆಚ್ಚುಗೆ ಗಳಿಸಿದೆ. ನಗರ ಮಾತ್ರವಲ್ಲದೇ ಜಿಲ್ಲೆಯ ಬೇರೆ ಬೇರೆ ಊರುಗಳಲ್ಲಿ ಜಮುರಾ ತಂಡವು ಪ್ರದರ್ಶನ ನೀಡುತ್ತದೆ. ಸಿನಿಮಾದಲ್ಲಿ ಹೆಸರು ಮಾಡಿ ಆತ್ಮಹತ್ಯೆಗೆ ಮೊರೆಹೋದ ಈ ಊರಿನ ಇಂದೂಧರ ಮೊದಲು ರಂಗಭೂಮಿಯಲ್ಲಿ ಹೆಸರು ಮಾಡಿದ್ದರು.

ಡಾ॥ ಬಿ.ಟಿ. ಅಚ್ಚುತ್, ಮುರಿಗೇಶ್‌ಬಾಬು, ಎಸ್. ಚಿದಾನಂದ, ಆರ್.ಟಿ. ಅರುಣಕುಮಾರ್, ಕೊಂಡಜ್ಜಿ ಜಯಪ್ರಕಾಶ್ ಇನ್ನೂ ಅನೇಕ ರಂಗಮಿತ್ರರು ಕೂಡಿಕಟ್ಟಿದ "ಅಭಿಯಂತರರಂಗ" (1988ರಲ್ಲಿ) ಹೊಸ ಅಲೆಯ ರಂಗನಾಟಕಗಳನ್ನು ಪ್ರಸ್ತುತ ಪಡಿಸುತ್ತಲೇ ಬಂದಿದೆ. ಅಕ್ಕಮಹಾದೇವಿ ಬದುಕಿನ ಸುತ್ತ ಹೆಣೆದ 'ದಿವ್ಯಾಂಬರಿ' ಹೊಸತನಕ್ಕೆ ಹಂಬಲಿಸಿದ ನಾಟಕ. ಆರ್.ಟಿ. ಅರುಣಕುಮಾರ್ ಅಭಿನಯದ 'ತದ್ರೂಪಿ'



ಅಪಾರ ಜನಮನ್ನಣೆ ಗಳಿಸಿದ 'ಬಾ ಅತಿಥಿ' ಕಾರ್ಯಕ್ರಮದ ತಿಂಗಳ ಅತಿಥಿಯಾಗಿ ಸಿ. ಬಸವಲಿಂಗಯ್ಯ ಮಲ್ಲಿಕಾರ್ಜುನ ಕಡಕೋಳ ಮತ್ತು ಪ್ರೊ. ಬಿ.ವಿ. ವೀರಭದ್ರಪ್ಪ.

ಇಂದಿಗೂ ಎಲ್ಲರ ಮನದಲ್ಲುಳಿದ ನಾಟಕ. ಹೀಗೊಂದು ಕಥೆ ಕೇಳಿ, ಕೆರೆಗೆ ಹಾರ, ಸಿರಿಸಂಪಿಗೆ, ಇತ್ತೀಚೆಗೆ ಒಂದು ಕೊಲೆಯ ಸುತ್ತ, ರಾಜ್ಯದಾಹ ಮಹತ್ವದ ನಾಟಕಗಳನ್ನು ಅಭಿಯಂತರರಂಗ ನೀಡಿದೆ.

ಚಿತ್ರ ನಿರ್ದೇಶಕ ರಾಧಾಕೃಷ್ಣ ಪಲ್ಲಕ್ಕಿ ಅವರು ಮುರ್‍ನಾಲ್ಕು ವರ್ಷಗಳ ಕಾಲ ದಾವಣಗೆರೆಯಲ್ಲಿ ಗಿಡ್ಡೋಬ ಬರ್ತಾನೆ, ಬಾವಿ ಮುಂತಾದ ನಾಟಕಗಳನ್ನು ತಮ್ಮ ತರಬೇತಿ ಶಾಲೆಯಲ್ಲಿ ಕಲಿಸಿ ಪ್ರದರ್ಶನ ನೀಡಿದ್ದಾರೆ. ಇತ್ತೀಚೆಗೆ ಹೊಳೆಸಿರಿಗೆರೆ ಮಂಜುನಾಥ ಬೇಸಿಗೆ ಶಿಬಿರಗಳನ್ನು ನಡೆಸಿ ಮಕ್ಕಳ ರಂಗಭೂಮಿ ಬೆಳವಣಿಗೆಯಲ್ಲಿ ಪಾಲುದಾರರು. ನೀವು ನಾವು ತಂಡ ಈ ಯತ್ನ ಮಾಡುತ್ತಿದೆ. ವಿದ್ಯಾಸಾಗರ ಆರ್ಟ್ ಅಕಾಡೆಮಿ ಮಕ್ಕಳ ರೆಪರ್ಟರಿ ಆಗಿಯೇ ಪರಿವರ್ತನೆಗೊಳ್ಳುತ್ತಿರುವುದು ಸಂತಸದ ಸಂಗತಿ. ಶಾಲಾ ಕಾಲೇಜುಗಳಲ್ಲಿ ವಾರ್ಷಿಕೋತ್ಸವ ಸಂದರ್ಭಗಳಲ್ಲಿ ಕೆಲವೆಡೆ ಉತ್ತಮ ನಾಟಕಗಳು ಪ್ರದರ್ಶನಗೊಳ್ಳುವುದು ರಂಗಭೂಮಿಯ ಪರ್ಯಾಯ ಸಮಾಧಾನಗಳೇ ಹೌದು. "ಯಕ್ಷರಂಗ" ಎಂಬ ಸ್ಥಳೀಯ ರಂಗಸಂಘಟನೆ ಆಗಾಗ ಬಡಗು-ತೆಂಕುತಿಟ್ಟುಗಳ ಯಕ್ಷಗಾನಗಳನ್ನು ಪ್ರದರ್ಶಿಸುತ್ತದೆ. ರಂಗಭೂಮಿ ಕುರಿತಾಗಿ ನಾಟಕ ಅಕಾಡೆಮಿ, ಕೇಂದ್ರ ಸಾಹಿತ್ಯ ಅಕಾಡೆಮಿ ಆಗಾಗ ಅರ್ಥಪೂರ್ಣ ವಿಚಾರ ಸಂಕಿರಣ ಏರ್ಪಡಿಸುವ ಮೂಲಕ ರಂಗಭೂಮಿಯ ಅಕಾಡೆಮಿಕ್ ಆಯಾಮಗಳನ್ನು

ಅದರ ಕ್ಷಿತಿಜಗಳನ್ನು ವಿಸ್ತರಿಸುತ್ತಲಿದೆ. ಮಲ್ಲಿಕಾರ್ಜುನ ಕಡಕೋಳ "ಬಾ ಅತಿಥಿ" ಎಂಬ ಅಪರೂಪದ ಮಾಸಿಕ ಕಾರ್ಯಕ್ರಮಗಳನ್ನು ಏರ್ಪಡಿಸುವ ಮೂಲಕ ರಾಜ್ಯದ ಗಮನ ಸೆಳೆದ ರಂಗದಾಖಲೆ ಈ ಊರಿಗೆ ಸೇರುತ್ತದೆ. ಎಂ.ಎಸ್. ಸತ್ಯು, ಮೇಕಪ್ ನಾಣಿ, ಏಣಾಗಿ ಬಾಳಪ್ಪ, ಮುದೇನೂರ ಸಂಗಣ್ಣ, ಸಿ.ಬಸವಲಿಂಗಯ್ಯ, ಅರಿಶಿಣಗೋಡಿ, ಎಂ.ಪಿ. ಪ್ರಕಾಶ್, ಸಿ.ಜಿ.ಕೆ., ಉಮಾಶ್ರೀ ಇನ್ನು ಅನೇಕ ಹೆಸರಾಂತ ರಂಗಕರ್ಮಿಗಳು ಮಾಸಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದು 'ಬಾ ಅತಿಥಿ' ದಾಖಲೆ ಮಾಡಿದೆ.

ಹೀಗೆ ದಾವಣಗೆರೆಯ ಹವ್ಯಾಸಿರಂಗಭೂಮಿ ಚಟುವಟಿಕೆಗಳು ಚಿಂತನಶೀಲ ಹಾಗೂ ಪ್ರಯೋಗಶೀಲ ಒಳನೋಟಗಳೊಂದಿಗೆ ಕ್ರಿಯಾಶೀಲತೆಯನ್ನು ಕಾಪಾಡಿಕೊಂಡು ಬಂದಿವೆ. ಕನ್ನಡ ರಂಗಭೂಮಿಯ ದಂತಕತೆಯಾದ ಗುಬ್ಬಿ ವೀರಣ್ಣನವರ ನಾಟಕ ಕಂಪನಿ ಮಧ್ಯದಲ್ಲಿ ನಿಂತು ಹೋಗಿದ್ದಾಗ ಅದಕ್ಕೆ ಪುನರ್ ಚಾಲನೆ ನೀಡಿದವರು ಈ ಊರ ಮಂದಿ. ವೃತ್ತಿ ಹಾಗೂ ಹವ್ಯಾಸಿ ಕಂದರ ಮುಚ್ಚುವ ಪ್ರಯತ್ನದ ಕಾರ್ಯಕ್ರಮವೊಂದನ್ನು ನಾಟಕ ಅಕಾಡೆಮಿ ಆಗ ಕ್ಯಾಂಪ್ ಮಾಡಿದ್ದ ಗುಬ್ಬಿ ಕಂಪನಿಯಲ್ಲೇ ಪ್ರಯೋಗಿಸಿತಾದರೂ ಯಶಸ್ಸು ಕಾಣಲಿಲ್ಲ. ಒಂದರ್ಥದಲ್ಲಿ ಹವ್ಯಾಸಿ ರಂಗಭೂಮಿಯ ಬೇರುಗಳು ವೃತ್ತಿರಂಗ ಭೂಮಿಯಲ್ಲೇ ಇರುವುದನ್ನು ಈ ಊರಿನ ಮಟ್ಟಿಗೂ ಅಲ್ಲಗಳೆಯಲಾಗದ ರಂಗಸತ್ಯ.

## ರಂಗಭೂಮಿ ಕುರಿತಾದ ವಿಶೇಷ ಪ್ರಕಟಣೆಗಳು

ರಂಗಸುನೇರಿ : ಮಲ್ಲಿಕಾರ್ಜುನ ಕಡಕೋಳ

ರಂಗನಾಟಕ ಪ್ರಯೋಗ ಸಾರ್ಥಕತೆ : ಗುಡಿಹಳ್ಳಿ ನಾಗರಾಜ

ರಂಗ ಸೆಲೆ (ವ್ಯಕ್ತಿ ಚಿತ್ರಗಳು) : ಗುಡಿಹಳ್ಳಿ ನಾಗರಾಜ

ರಂಗ ಕಂಕಣ : ಮಲ್ಲಿಕಾರ್ಜುನ ಕಡಕೋಳ

ಚಿಂದೋಡಿಲೀಲಾ : ಗುಡಿಹಳ್ಳಿ ನಾಗರಾಜ

ಡಾ॥ ಲಕ್ಷ್ಮಣದಾಸ್ : ಗುಡಿಹಳ್ಳಿ ನಾಗರಾಜ

ಛುತ್ತರಗಿಯವರ ಆಯ್ದ ನಾಟಕಗಳು : (ಸಂ) ಗುಡಿಹಳ್ಳಿ ನಾಗರಾಜ

ಹುನಗುಂದ ಬಾಬಣ್ಣ : ಡಾ. ಎಂ.ಜಿ. ಈಶ್ವರಪ್ಪ

ಚಿಂದೋಡಿ ವೀರಪ್ಪ : ಬಸವರಾಜ ಐರಣಿ.

ರಂಗ ವೈಭವ (ಪಾಕ್ಷಿಕ) : ಸಂಪಾದಕ : ಸಿ.ಎಲ್. ಚಂದ್ರಧರ

ಕಲಾ ಸೇವಕ (ಪಾಕ್ಷಿಕ) ಸಂಪಾದಕ : ಐರಣಿ ಬಸವರಾಜ

# ಗ್ರಾಮೀಣ ರಂಗಭೂಮಿ ಒಂದು ಕಿರುನೋಟ

ದಾವಣಗೆರೆ ಜಿಲ್ಲೆಯ ಪ್ರತಿಯೊಂದು ಹಳ್ಳಿಯಲ್ಲೂ ವರ್ಷಕ್ಕೊಂದಾದರೂ ನಾಟಕಗಳು ಪ್ರದರ್ಶನಗೊಳ್ಳುತ್ತವೆ. ಕೆಲವು ಊರುಗಳಲ್ಲಿ ದೊಡ್ಡಾಟಗಳು (ಜಾನಪದ ರಂಗಭೂಮಿ) ಕೂಡಾ ಜರುಗುತ್ತವೆ. ಹರಿಹರ ತಾಲ್ಲೂಕಿನ ಕೊಂಡಜ್ಜಿ, ಬೆಳ್ಳೂಡಿ ಗ್ರಾಮಗಳಲ್ಲಿ ಅನೇಕ ಮಂದಿ ದೊಡ್ಡಾಟ ಕಲಾವಿದರಿದ್ದಾರೆ. ಕೊಂಡಜ್ಜಿಯ ಖ್ಯಾತ ಕಲಾವಿದ ಅಜ್ಜಪ್ಪ ಮತ್ತು ಪಾಪಣ್ಣ, ಶಾಮನೂರಿನ ರೇವಣಸಿದ್ದಪ್ಪ ಯಕ್ಷಗಾನ–ಜಾನಪದ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು. ಹಳ್ಳಿಯ ನಾಟಕಗಳು ಸಾಮಾನ್ಯವಾಗಿ ಕಂಪನಿ ನಾಟಕಗಳ ಶೈಲಿಯಲ್ಲೇ ಪ್ರಯೋಗಗೊಳ್ಳುತ್ತವೆ. ಹಳ್ಳಿ ನಾಟಕಗಳಿಗೆ ದಾವಣಗೆರೆಯಿಂದ ರಂಗ ನಟಿಯರನ್ನು ಕರೆಸಿ ಪಾತ್ರ ಮಾಡಿಸುವುದು. ಸಿನಿಮಾ ಮಾದರಿಯ ನೃತ್ಯ ಮಾಡಿಸುವುದು ಮಾಮೂಲು. ಹೀಗೆ ಪ್ರದರ್ಶನಗೊಳ್ಳುವ ಸ್ಥಳೀಯ ಸಂಘಸಂಸ್ಥೆಯ ಕೆಲವರು ಅಚ್ಚುಕಟ್ಟಾಗಿ ಪ್ರತಿವರುಷವೂ ತಪ್ಪದೇ ರಂಗನಾಟಕಗಳನ್ನು ಪ್ರದರ್ಶಿಸುತ್ತಾರೆ. ಯಾವುದೇ ವೃತ್ತಿಪರ ಕಲಾವಿದರಿಗೆ ಕಮ್ಮಿ ಇಲ್ಲದಂತೆ ಪಾತ್ರ ಪೋಷಣೆ ಮಾಡುವ ಕಲಾವಿದರು ಗ್ರಾಮಾಂತರ ಪ್ರದೇಶಗಳಲ್ಲಿ ಯಥೇಚ್ಛವಾಗಿ ದೊರಕುತ್ತಾರೆ. ಹರಪನಹಳ್ಳಿ ತಾಲ್ಲೂಕಿನ ಬಾಗಳಿ ಎಂಬ ಶಾಸನಗಳ ಸುಪ್ರಸಿದ್ದ ಹಳ್ಳಿಯಲ್ಲಿ "ಗೋಣಿ ಬಸವೇಶ್ವರ" ಎಂಬ ಪೌರಾಣಿಕ ನಾಟಕವನ್ನು ಕಳೆದ 45 ವರುಷಗಳಿಂದ ವರ್ಷಕ್ಕೊಮ್ಮೆ ನಿರಂತರ ನಾಲ್ಕು ಪ್ರಯೋಗಗಳ ಪ್ರದರ್ಶನ ನೀಡುತ್ತಾರೆ. ಅರವತ್ತರ ದಶಕದಲ್ಲಿ ಎಲೆಬೇತೂರಿನ ಬಸವೇಶ್ವರ ನಾಟಕ ತುಂಬಾ ಪ್ರಸಿದ್ಧಿಯಾದುದು.

ಹೀಗೆಯೇ ಜಿಲ್ಲೆಯ ಬಹುಪಾಲು ಹಳ್ಳಿಗಳು ರಂಗಭೂಮಿ ಚಟುವಟಿಕೆಗಳಿಂದ ಹೊರತಾಗಿಲ್ಲ. ಜಾತ್ರೆ, ಗಣೇಶ ಉತ್ಸವ, ಇತರೆ ಸಾಂಸ್ಕೃತಿಕ ಸಂದರ್ಭಗಳಲ್ಲಿ ಖಂಡಿತವಾಗಿಯೂ ನಾಟಕಗಳ ಪ್ರದರ್ಶನಗಳಿರುತ್ತವೆ. ಅಂತೆಯೇ ಪ್ರತೀ ಹಳ್ಳಿಯಲ್ಲೂ ನಾಟಕ ಕಲಿಸುವ ಸಂಗೀತ ಮಾಸ್ತರರುಗಳಿರುತ್ತಾರೆ. ಅವರು ಕಲಿಸುವ ನಾಟಕಗಳಿಗೆ ಏಕತಾನತೆಯ, ಅನುಕರಣಶೀಲತೆಯೇ ಬಂಡವಾಳ. ಈ ಎಲ್ಲ ನಾಟಕಗಳಿಗೆ ದಾವಣಗೆರೆ, ಹರಿಹರ, ಜಗಳೂರು ಕಡೆಗಳಲ್ಲಿರುವ ಡ್ರಾಮಾ ಸೀನ್ಸ್‌ಗಳ ರಂಗಸಜ್ಜಿಕೆಯೇ ಆಗಬೇಕು. ಇನ್ನು ಗ್ರಾಮಾಂತರ ಶಾಲಾ ಕಾಲೇಜುಗಳಲ್ಲಿ ವಾರ್ಷಿಕೋತ್ಸವ ಸಂದರ್ಭಗಳಲ್ಲಿ, ಮಕ್ಕಳ ಬೇಸಿಗೆ ಶಿಬಿರಗಳಲ್ಲಿ ಆಯಾ ಶಾಲಾ ಕಾಲೇಜು

ಉಪಾಧ್ಯಾಯರು, ಉಪಾಧ್ಯಾಯಿನಿಯರು ಕಲಿಸಿ ಆಡಿಸುವ ರೂಪಕಗಳು ಯಥೇಚ್ಛ. ಇತ್ತೀಚೆಗೆ ಇಂತಹ ಶಿಬಿರಗಳನ್ನು ಕೆಲವು ಸಂಸ್ಥೆಗಳವರು ನಡೆಸುತ್ತಲೂ ಬಂದಿದ್ದಾರೆ. ವಿಶೇಷವಾಗಿ "ವಿದ್ಯಾಸಾಗರ ಆರ್ಟ್ ಅಕಾಡೆಮಿ"ಯು ತಮ್ಮ ಶಾಲೆಯಲ್ಲಿ ರೆಪರ್ಟರಿ ಮಾದರಿಯಲ್ಲೇ ಮಕ್ಕಳ ರಂಗಭೂಮಿಯನ್ನು ಅತ್ಯಂತ ಅರ್ಥಪೂರ್ಣವಾಗಿ ನಡೆಸಿಕೊಂಡು ಬರುತ್ತಿದೆ.

ನೀವು ನಾವು, ಹೊಳೆಸಿರಿಗೆರೆ ಮಂಜುನಾಥ ಸಾರಥ್ಯದ ಚಿಗುರು, ದಿವಂಗತ ಪ್ರಸನ್ನ ನಡೆಸುತ್ತಿದ್ದ ಸಪ್ತಸ್ವರ ಸಂಘಟನೆಯ ರಂಗ ಚಟುವಟಿಕೆಗಳು ದಾಖಲೆಗೆ ಸೇರುತ್ತವೆ. ಜತೆಗೆ ಕಲಾಕುಂಚ ಸಾಂಸ್ಕೃತಿಕ ಸಂಘಟನೆ ರಂಗಾಸಕ್ತಿ ಹೊಂದಿದೆ. ಕೆಲವು ಕಾಲ ದೊಗ್ಗಳ್ಳಿ ಪುಟ್ಟರಾಜು ಮಕ್ಕಳ ಬೇಸಿಗೆ ಶಿಬಿರ ನಡೆಸಿ ಗ್ರಾಮ ಮಟ್ಟದಲ್ಲಿ ರಂಗ ಚಟುವಟಿಕೆಗಳನ್ನು ಮಕ್ಕಳಿಗೆ ಪರಿಚಯಿಸಿಕೊಟ್ಟಿದ್ದಾರೆ. ಶಾಮನೂರಿನ ವಿನಾಸಂ (ವಿಘ್ನೇಶ್ವರ ನಾಟ್ಯ ಸಂಘ) ಕಳೆದ ಮುವತ್ತೈದು ವರ್ಷಗಳಿಂದ ಜಾತ್ರೆ, ಗಣೇಶ ಉತ್ಸವಗಳಲ್ಲಿ ಸಾಮಾಜಿಕ ನಾಟಕ ಪ್ರದರ್ಶಿಸುತ್ತಿವೆ. ಶಿರಮಗೊಂಡನಹಳ್ಳಿಯ ಆವಿನ ಭೀಮಣ್ಣ ಪೌರಾಣಿಕ ನಾಟಕಗಳನ್ನು ದಶಕಗಳಿಂದಲೂ ಪ್ರದರ್ಶಿಸಿದ್ದಾರೆ. ಶಾಮನೂರಿನ ಲಲಿತಕಲಾ ಸಂಘವು ಹೇಮರೆಡ್ಡಿ ಮಲ್ಲಮ್ಮ (1950 ರಿಂದ ) ನೂರು ಪ್ರಯೋಗ ಪ್ರದರ್ಶಿಸಿದ ದಾಖಲೆ ಇವೆ. ಕುಂದವಾಡ, ದೊಡ್ಡ ಬಾತಿ, ನಾಗನೂರು, ಹದಡಿ, ಮಾಯಕೊಂಡ, ಕೊಡಗನೂರು ಈ ಎಲ್ಲಾ ಹಳ್ಳಿಗಳಲ್ಲಿ ವರುಷಕ್ಕೊಮ್ಮೆ ವೃತ್ತಿ ಮಾದರಿ ನಾಟಕಗಳು ಜರುಗುತ್ತವೆ.

ದಿ॥ ಪ್ರಸನ್ನ ಮುಖವಾಡ ತಯಾರಿಕೆಯ ಪ್ರಾತ್ಯಕ್ಷಿಕೆಗಳನ್ನು ಆಯಾ ಶಾಲಾ ಕಾಲೇಜುಗಳಲ್ಲಿ ನಡೆಸಿಕೊಟ್ಟಿದ್ದಾರೆ. ಮಲ್ಲಿಕಾರ್ಜುನ ಕಡಕೋಳ ನಡೆಸುತ್ತಿದ್ದ 'ಬಾ ಅತಿಥಿ' ಕಾರ್ಯಕ್ರಮಕ್ಕೆ ಆಮಂತ್ರಿತರಾದ ಮೇಕಪ್‌ನಾಣಿ ಅವರಿಂದ ಮೇಕಪ್ ಕಾರ್ಯಾಗಾರ ಜರುಗಿಸಿದ್ದು ಸ್ಥಳೀಯ ರಂಗಾಸಕ್ತರಿಗೆ ಉಪಯುಕ್ತವೆನಿಸಿತ್ತು. ಈ ಊರಿನ ಹಿರಿಯ ಮೇಕಪ್ ಕಲಾವಿದ ಚಿದಂಬರರಾವ್ ಸೇರಿದಂತೆ ಅನೇಕರು ಭಾಗವಹಿಸಿದ್ದರು. ಈ ಕಾರ್ಯಕ್ರಮದಲ್ಲಿ ಭಾರ್ಗವಿ ನಾರಾಯಣ ಕೂಡಾ ಭಾಗವಹಿಸಿದ್ದರು.

### *ಮಾನವಧರ್ಮ ವಿಜಯೀಭವ ಕಲಾ ಬಳಗ ಮಾಗಾನಹಳ್ಳಿ*

ಇದೊಂದು ಗ್ರಾಮೀಣ ರಂಗಸಂಸ್ಥೆ. ದಾವಣಗೆರೆ ತಾಲ್ಲೂಕಿನ ಮಾಗಾನಹಳ್ಳಿ ಗ್ರಾಮದ ಫಕ್ಕೀರಪ್ಪ ಬಸಪ್ಪ ಶಾಲೆಮನೆ ಅವರಿಗೆ ರಂಗಭೂಮಿಯ ದೊಡ್ಡ ಹುಚ್ಚು. ಮೊದಲು 'ವೆಂಕಟೇಶ್ವರ ನಾಟ್ಯ ಸಂಘ' ಕಟ್ಟಿ ಅದನ್ನೇ 'ಮಾನವ ಧರ್ಮ ವಿಜಯೀಭವ ಕಲಾಬಳಗ'ವೆಂದು 4-11-1983ರಲ್ಲಿ ಸುಸಜ್ಜಿತವಾಗಿ ಕಂಪನಿ ಕಟ್ಟಿದರು. ಅದಕ್ಕಾಗಿ

ಅಪ್ಪ ಬಸಪ್ಪ ಮಾಡಿಟ್ಟ ಆಸ್ತಿಯನ್ನೆಲ್ಲ ಮಾರಿ ಫಕ್ಕೀರಪ್ಪ ರಾಣೇಬೆನ್ನೂರು ಬಳಿ ಗುತ್ತಲದಲ್ಲಿ ಕ್ಯಾಂಪು ಶುರು ಮಾಡಿ ಹುಬ್ಬಳ್ಳಿ, ದೊಡ್ಡಬಳ್ಳಾಪುರ, ಹರಪನಹಳ್ಳಿ, ಹಂಸಭಾವಿ, ತುಮ್ಮಿನಕಟ್ಟೆ, ರಟ್ಟೀಹಳ್ಳಿ, ದೂರದ ಬೀದರ ಜಿಲ್ಲೆಯ ರಾಜೇಶ್ವರ, ರಾಯಚೂರು ಜಿಲ್ಲೆಯ ಅನೇಕ ಪಟ್ಟಣಗಳಲ್ಲಿ ಪ್ರಜಾಸರ್ಕಾರ, ಸೋತು ಗೆದ್ದ ಸಾಧ್ವಿ, ಶಾಯಿಕರುಳು, ಖಾನಾವಳಿ ಚೆನ್ನಿ, ಚನ್ನಪ್ಪ ಚನಗೌಡ, ತಾವೇ ಬರೆದ ಹುಂಬರ ದೊಂಬರಾಟ, ಸೂಳೆಯಾರು? ಮೊದಲಾದ ನಾಟಕಗಳನ್ನು ಪ್ರದರ್ಶಿಸಿದ್ದಾರೆ.



**ಚನ್ನಪ್ಪ ಚನಗೌಡ ನಾಟಕದಲ್ಲಿ ಚನಗೌಡನಾಗಿ ಪಿ.ಬಿ. ಶಾಲೆಮನೆ**

ಬನಹಟ್ಟಿ ವಾಸುದೇವ ಕೋಪರ್ಡೆ, ಅಯ್ಯನಗೌಡ, ಎಸ್.ಟಿ. ರೆಡ್ಡಿ, ಗುಬ್ಬಿಗಂಗಾಧರ, ನಾ.ದೇ. ನರಸಿಂಹಮೂರ್ತಿ, ಮರೋಳ್ ಗುಡ್ಡಪ್ಪ, ಅನ್ನಪೂರ್ಣ ಸಾಗರ, ಗೀತಾ ಆನವಟ್ಟಿ, ಹುಬ್ಬಳ್ಳಿ ತನುಜಾ, ಜಯಲಕ್ಷ್ಮಿ ಪಾಟೀಲ, ಶಾಂತಮ್ಮ ಶಿಗ್ಗಾಂವಿ ಈ ಎಲ್ಲಾ ಹೆಸರಾಂತ ಕಲಾವಿದರು ಕೆಲವು ಕಾಲ ಇವರ ಕಂಪನಿಯಲ್ಲಿ ಅಭಿನಯಿಸಿರುವುದು ಹೆಗ್ಗಳಿಕೆ. ಅವರೇ ಹೇಳುವಂತೆ ಹತ್ತು ವರುಷಗಳ ಕಾಲ ಕಂಪನಿ ನಡೆಸಿ ವ್ಯವಹಾರ ಜ್ಞಾನದ ಕೊರತೆಯಿಂದಾಗಿ ಕಂಪನಿ ನಿಲ್ಲಿಸಬೇಕಾಯಿತು.

ದಾವಣಗೆರೆ ಪರಿಸರದಲ್ಲಿ ಓಬಳೇಶ ಅವರ ಶ್ರೀ ಓಂಕಾರೇಶ್ವರ ನಾಟ್ಯ ಸಂಘ. ಶ್ರೀ ಎಡೆಯೂರು ಸಿದ್ದಲಿಂಗೇಶ್ವರ ನಾಟ್ಯ ಸಂಘ, ಸತ್ಯ ನಾರಾಯಣ ಕನ್ನಡ ಕಲಾ ಬಳಗ, ಕಲಾ ವಿಕಾಸ ನಾಟಕ ಸಂಘ ಆಗಾಗ ರಂಗ ಪ್ರದರ್ಶನ ನೀಡುತ್ತವೆ. ಈ ಮೂರು ತಂಡಗಳಿಗೆ ಮಹಿಳೆಯರದೇ ಸಾರಥ್ಯ. ಈ ಊರಲ್ಲಿ ಕಲಾವಿದೆಯರ ಹೆಸರಿಲ್ಲದ ಮಹಿಳಾ ತಂಡವಿದ್ದು, ಅವರು ಗ್ರಾಮಾಂತರ ಪ್ರದೇಶಗಳಲ್ಲಿ ಆಗಾಗ ರಂಗಪ್ರದರ್ಶನ ಮಾಡುತ್ತಾರೆ.

ಮುಸ್ಟೂರು, ಜಗಳೂರು, ಬಾನುವಳ್ಳಿ, ದಾವಣಗೆರೆ ಸೇರಿದಂತೆ ಜಿಲ್ಲೆಯಲ್ಲಿ ಹತ್ತು ಡ್ರಾಮಾ ಸೀನ್ಸ್ (ರಂಗಸಜ್ಜಿಕೆ) ಗಳಿವೆ. ಪ್ರತಿಯೊಂದು ಡ್ರಾಮಾ ಸೀನ್ಸ್ ಪ್ರತಿ ವರ್ಷ 50-60 ಗ್ರಾಮೀಣ ನಾಟಕಗಳಿಗೆ ರಂಗಸಜ್ಜಿಕೆ ಒದಗಿಸುತ್ತದೆ. ಅಂದರೆ ಜಿಲ್ಲೆಯ ಗ್ರಾಮಾಂತರ ಪ್ರದೇಶಗಳಲ್ಲಿ ವರ್ಷಕ್ಕೆ 450 ರಿಂದ 500 ನಾಟಕಗಳು ಪ್ರದರ್ಶನಗೊಳ್ಳುತ್ತವೆ.

***********

# ಪ್ರತಿಮಾಸಭಾ

● ಬಾ.ಮ. ಬಸವರಾಜಯ್ಯ

ದಾವಣಗೆರೆ ಸಂದರ್ಭದಲ್ಲಿ ಹವ್ಯಾಸಿ ರಂಗಭೂಮಿ ಹೆಸರು ಪ್ರಸ್ತಾಪವಾದರೆ ತಟ್ಟನೆ ನೆನಪಿಗೆ ಬರುವುದು 'ಪ್ರತಿಮಾ ಸಭಾ' ಸಾಂಸ್ಕೃತಿಕ ಸಂಸ್ಥೆ. ಸುಮಾರು ಮೂರು ದಶಕಗಳಿಗೂ ಹೆಚ್ಚುಕಾಲ ಪ್ರತಿಮಾಸಭಾ ದಾವಣಗೆರೆಯಲ್ಲಿ ಹವ್ಯಾಸಿ ರಂಗಭೂಮಿಯ ಜೀವನಾಡಿಯಾಗಿ ಕೆಲಸ ಮಾಡಿದೆ. ಸಾಹಿತ್ಯ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ರಾಜ್ಯಾದ್ಯಂತ ತನ್ನದೇ ಆದ ಹೆಸರು ಗಳಿಸಿ–ಉಳಿಸಿಕೊಂಡು ಬಂದ ಕೀರ್ತಿ ಪ್ರತಿಮಾಸಭಾದ ಹೆಗ್ಗಳಿಕೆ.

ಧ.ರಾ.ಮ. ಕಾಲೇಜಿನಲ್ಲಿ ಪ್ರಾಧ್ಯಾಪಕರಾಗಿದ್ದ ಪ್ರೊ.ಎಸ್. ಹಾಲಪ್ಪ, ಪ್ರೊ.ಬಿ.ಜಿ. ನಾಗರಾಜ ಹಾಗೂ ಕಥೆಗಾರ ಎ.ಎನ್. ಪ್ರಸನ್ನ, ಸತ್ಯಮೂರ್ತಿ, ಬಾಲಕೃಷ್ಣ, ಕಾ.ನಾ. ಶ್ರೀನಿವಾಸ ಅವರು ಹವ್ಯಾಸಿ ನಾಟಕಗಳನ್ನು ಆಡುವ ಗೀಳಿನಿಂದ 1970–71ರಲ್ಲಿ ಬೆಂಗಳೂರಲ್ಲಿದ್ದ ರಂಗಸಂಪದ, ನಟರಂಗ ಮಾದರಿಯಲ್ಲಿ 'ಪ್ರತಿಮಾಸಭಾ' ಸಂಸ್ಥೆಯನ್ನು ಹುಟ್ಟಿಹಾಕಿದ್ದಲ್ಲದೇ ಎನ್.ಆರ್. ಮಾಸೂರು ಅವರು ಶ್ರೀರಂಗರ ನಾಟಕಗಳನ್ನು ಪ್ರದರ್ಶಿಸಿದರು. 1969ರಲ್ಲಿ ಪ್ರತಿಮಾ ಕಲ್ಚರಲ್ ಅಂಡ್ ಸ್ಪಿರಿಚ್ಯುಯಲ್ ಸೊಸೈಟಿ ಎಂಬ ಸಾಂಸ್ಕೃತಿಕ ಸಂಘಟನೆ ಇತ್ತು. ಈ ಸಂಘಟನೆಯ ಪ್ರದರ್ಶನಗಳು ವಿಶೇಷವಾಗಿ ಶೈಕ್ಷಣಿಕ ವಲಯದಲ್ಲಿ ಆಸಕ್ತಿ ಮೂಡಿಸಿದವು. ವೃತ್ತಿ ರಂಗಭೂಮಿಯಲ್ಲಿ ಅಪಾರ ಯಶಸ್ಸು ಕಂಡಿದ್ದ ದಾವಣಗೆರೆ ನಗರದಲ್ಲಿ ಹವ್ಯಾಸಿ ರಂಗಭೂಮಿಗೂ ವೇದಿಕೆ ಕಲ್ಪಿಸಿಕೊಟ್ಟಿದ್ದು ಈ ಭಾಗದ ಜನರ ರಂಗಾಸಕ್ತಿಗೆ ಅದ್ಭುತ ಸಾಕ್ಷಿ.

ಪ್ರತಿಮಾಸಭಾ ಪ್ರಾರಂಭವಾದ ಒಂದೆರಡು ವರ್ಷಗಳಲ್ಲಿ ಪ್ರೊ.ಹಾಲಪ್ಪ, ಪ್ರೊ. ಬಿ.ಜಿ. ನಾಗರಾಜ್ ಅವರ ಜೊತೆಗೆ ಹೊಸದಾಗಿ ಕನ್ನಡ ಅಧ್ಯಾಪಕರಾಗಿ ಬಂದ ಎಂ.ಜಿ. ಈಶ್ವರಪ್ಪ, ಡಾ. ಶ್ಯಾಮಲಾಂಬಿಕಾ ಪ್ರವೇಶವಾಯಿತು. ಅಲ್ಲದೇ ಹೋಟೆಲ್ ಮಾಲೀಕ ಪಿ.ಜೆ. ರಂಗನಾಥ್ ಮುಂತಾದ ಆಸಕ್ತರ ಪ್ರವೇಶ ಆಯಿತು. ಅಲ್ಲದೇ ಪ್ರೊ.ಬಿ.ವಿ. ವೀರಭದ್ರಪ್ಪ, ಪ್ರೊ.ಎಸ್.ಎಚ್. ಪಟೇಲ್ ಮುಂತಾದವರು ಪ್ರೋತ್ಸಾಹಕ್ಕೆ ನಿಂತರು.

ಎಪ್ಪತ್ತರ ದಶಕದಲ್ಲಿ ಅತ್ಯಂತ ಜನಪ್ರಿಯವಾಗಿದ್ದ ಚಂಪಾ ಅವರ 'ಕೊಡೆಗಳು', ಕುಂಟಾ ಕುಂಟಾ ಕುರುವತ್ತಿ, ಲಂಕೇಶರ 'ತೆರೆಗಳು' ಮುಂತಾದ ಅಸಂಗತ ನಾಟಕಗಳನ್ನು

ಎಂ.ಜಿ. ಈಶ್ವರಪ್ಪ, ಬಿ.ಜಿ. ಸತ್ಯಮೂರ್ತಿ ಎಸ್. ಪ್ರಕಾಶ್ ಮುಂತಾದವರು ರಂಗದ ಮೇಲೆ ತಂದು ಪ್ರದರ್ಶಿಸುವ ಮೂಲಕ ಪ್ರತಿಮಾಸಭಾದ ರಂಗಚಟುವಟಿಕೆ ಚುರುಕುಗೊಂಡಿತು. ಅಲ್ಲದೆ 'ಅಪ್ಪ', 'ಸಿದ್ಧತೆ' ಮುಂತಾದ ನಾಟಕಗಳು, ಬೆಳಗೆರೆ ಕೃಷ್ಣಶಾಸ್ತ್ರಿ ಅವರ 'ಹಳ್ಳಿ ಮೇಷ್ಟ್ರು', 'ಹಳ್ಳಿ ಚಿತ್ರ' ಮುಂತಾದ ನಾಟಕಗಳನ್ನು ಪ್ರತಿಮಾಸಭಾ ಆಡಿ ಯಶಸ್ವಿಗೊಳಿಸಿತು.

ಈ ಮಧ್ಯೆ ಎನ್.ಎಸ್.ಡಿ. ಪದವಿ ಪಡೆದುಕೊಂಡು ಬಂದಿದ್ದ ಎಸ್. ಸುರೇಂದ್ರನಾಥ್ ಅವರು ಸರ್ಕಾರಿ ಪ್ರೌಢಶಾಲೆ ಒಳ ಆವರಣ ಬಳಸಿಕೊಂಡು ಕಾರ್ನಾಡರ ಹಯವದನ ಹಾಗೂ ಶಿವಯೋಗಿ ಮಂದಿರದ ಕಟ್ಟಡ ಬಳಸಿಕೊಂಡು ತುಘಲಕ್ ನಾಟಕ ಪ್ರದರ್ಶಿಸಿ ಒಂದು ಹೊಸ ಅನುಭವ ನೀಡಿದರು. ಅಲ್ಲದೆ 1974–75ರ ವೇಳೆಗೆ ಉತ್ಸಾಹಿಗಳ ದಂಡೇ ಪ್ರತಿಮಾಸಭಾ ಸಂಘಟನೆಯಲ್ಲಿ ಹುಟ್ಟಿಕೊಂಡಿತು. ಬಾ.ಮ. ಬಸವರಾಜಯ್ಯ, ಪ್ರಕಾಶ್ ಬೆಳಗಾವಿ, ಸೋಮನಾಥ್, ಪ್ರೊ.ರೇವಣಸಿದ್ದಪ್ಪ, ಪ್ರೊ.ವೃಷಭೇಂದ್ರಪ್ಪ, ಡಾ.ಪಂಚಣ್ಣ ಮುಂತಾದವರು ಸಂಘಟನೆಯೊಳಗೆ  ಬಂದರು.

ಬೆಂಗಳೂರಿನ ನಟ ಲೋಕೇಶ್ ಅವರ ರಂಗಸಂಪದ, ಸಿ.ಆರ್.ಸಿಂಹ ಅವರ ನಟರಂಗ, ಹೆಗ್ಗೋಡಿನ ನೀನಾಸಂ ಮುಂತಾದ ತಂಡಗಳನ್ನು ದಾವಣಗೆರೆಗೆ ಕರೆಸಿ ಗುಂಡಿ ಮಹದೇವಪ್ಪ ಕಲ್ಯಾಣ ಮಂದಿರ ಮತ್ತು ವೃತ್ತಿರಂಗಭೂಮಿಯವರು ನಿರ್ಮಿಸಿದ ಥೇಟರ್‌ಗಳಲ್ಲಿ ಪ್ರದರ್ಶಿಸಿತು. ದೊಡ್ಡಪ್ಪ, ಉದ್ಭವ, ತಾಮ್ರಪತ್ರ, ಸಂದರ್ಭ, ಹ್ಯಾಮ್ಲೆಟ್, ಹದ್ದು ಮೀರಿದ ಹಾದಿ, ನಾಯಿಕಥೆ, ಘಾಸಿರಾಂ ಕೊತ್ವಾಲ್, ಮುದೇನೂರು ಸಂಗಣ್ಣ ಅವರ ಲಕ್ಷಾಪತಿ ರಾಜನಕಥೆ ಮುಂತಾದ ಹೆಸರಾಂತ ನಾಟಕಗಳನ್ನು ಪ್ರದರ್ಶಿಸುವ ಮೂಲಕ ಪ್ರತಿಮಾಸಭಾ ದಾವಣಗೆರೆ ಜನರ ಹವ್ಯಾಸಿ ರಂಗಭೂಮಿಯ ಶ್ರೀಮಂತಿಕೆಯನ್ನು ಹೆಚ್ಚಿಸುವಲ್ಲಿ ಯಶಸ್ವಿಯಾಯಿತು ಅಂದರೆ ಖಂಡಿತಾ ಉತ್ಪ್ರೇಕ್ಷೆಯಾಗಲಾರದು. ನಟ–ನಿರ್ದೇಶಕ ಸಿ.ಆರ್. ಸಿಂಹ ಮಾತುಗಳಲ್ಲಿ ಹೇಳುವುದಾದರೆ, ದಾವಣಗೆರೆ ಪ್ರೇಕ್ಷಕವರ್ಗ ಅತ್ಯಂತ ಸದಭಿರುಚಿಯುಳ್ಳವರು, ನಾಟಕಗಳ ಸನ್ನಿವೇಶಗಳಿಗೆ ಅವರು ಪ್ರತಿಕ್ರಿಯಿಸುವ ರೀತಿ ಅದ್ಭುತ, ಬೆಂಗಳೂರು ಪ್ರೇಕ್ಷಕರಲ್ಲಿ ಇದನ್ನು ನಾವು ಕಾಣುವುದಿಲ್ಲ ಅನ್ನುತ್ತಿದ್ದರು.

ರಂಗ ಪ್ರದರ್ಶನಕ್ಕೆ ಸೀಮಿತವಾಗದೇ ಪ್ರತಿಮಾಸಭಾ ರಂಗಸಂವಾದ, ಕಥಾ ಕಮ್ಮಟ ನಾಟಕ ರಚನಾ ಶಿಬಿರ ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬಂತು. ಕೊಂಡಜ್ಜಿಯಲ್ಲಿ ನಡೆಸಿದ ನಾಟಕ ರಚನಾ ಶಿಬಿರದಲ್ಲಿ ಅನೇಕ ಉದಯೋನ್ಮುಖ ನಾಟಕಕಾರರು ಹೊರಬಂದರು. ಹೂಲಿಶೇಖರ್ ಅಂತ ಪ್ರತಿಭಾವಂತರು ಇಲ್ಲಿ ತಯಾರಾದರು.

ಬಿ.ವಿ. ಕಾರಂತ, ಗಿರೀಶ ಕಾರ್ನಾಡ್, ಪಿ. ಲಂಕೇಶ್, ಚಂದ್ರಶೇಖರ ಕಂಬಾರ, ಚಂಪಾ, ಸಿ.ಆರ್. ಸಿಂಹ, ಕೆ.ವಿ. ಸುಬ್ಬಣ್ಣ, ಲೋಕೇಶ್, ಬಿ.ವಿ. ವೈಕುಂಠರಾಜು, ಆರ್. ನಾಗೇಶ್ ಸೇರಿದಂತೆ ಅನೇಕ ರಂಗ ದಿಗ್ಗಜರು ಪ್ರತಿಮಾಸಭಾದ ಆಶ್ರಯದಲ್ಲಿ ನಡೆದ ಸಂವಾದ ಹಾಗೂ ಗೋಷ್ಠಿಗಳಲ್ಲಿ ಬಂದು ಭಾಗವಹಿಸಿದ್ದಾರೆ.

ಪ್ರತಿವರ್ಷ ಅನೇಕ ತಂಡಗಳನ್ನು ಕರೆಸಿ ನಾಟಕ ಪ್ರದರ್ಶಿಸುತ್ತಿದ್ದ ಪ್ರತಿಮಾಸಭಾ ಸ್ವತಃ ನಾಟಕ ಅಭಿನಯಿಸುವಲ್ಲಿ ಯಶಸ್ವಿಯಾಯಿತು. ಎನ್. ಎಸ್. ಡಿ. ಪದವೀಧರ ಅಶೋಕ ಬಾದರದಿನ್ನಿ ಅವರನ್ನು ಕರೆಸಿ ಅವರ ನಿರ್ದೇಶನದಲ್ಲಿ ಪಿ.ಲಂಕೇಶರ 'ಸಂಕ್ರಾಂತಿ' ನಾಟಕ ಪ್ರದರ್ಶಿಸಿತು. ಸಂಕ್ರಾಂತಿ ನಾಟಕ ಅಂದಿನ ದಾವಣಗೆರೆ ಸೇರಿದ ಅವಿಭಜಿತ ಚಿತ್ರದುರ್ಗ ಜಿಲ್ಲೆಯಲ್ಲಿ ಹವ್ಯಾಸಿ ರಂಗಭೂಮಿಗೆ ಒಂದು ಹೊಸ ಸಂವೇದನೆಯನ್ನು ಹುಟ್ಟುಹಾಕಿತು ಅಂದರೆ ತಪ್ಪಾಗಲಾರದು. ಬೆಂಗಳೂರು, ಸಿರಿಗೆರೆ, ಹೂವಿನಹಡಗಲಿ, ಸಂಡೂರು, ಚಿಗಟೇರಿ, ಹೆಗ್ಗೋಡು, ಮೈಸೂರುಗಳಲ್ಲಿ ಈ ನಾಟಕ ಪ್ರದರ್ಶನಗೊಂಡಿತು. ಇದರ ಸ್ಫೂರ್ತಿಯಿಂದ ಜಿಲ್ಲೆಯಲ್ಲಿ ಅನೇಕ ಹವ್ಯಾಸಿ ರಂಗಸಂಸ್ಥೆಗಳು ಹುಟ್ಟಿಕೊಂಡವು.

ಪ್ರತಿಮಾಸಭಾದ ಆಶ್ರಯದಲ್ಲಿ ರಂಗಪಂಚಮಿ ಒಂದು ಸ್ಮರಣೀಯ ಕಾರ್ಯಕ್ರಮ. ಎಂಭತ್ತರ ದಶಕದಲ್ಲಿ ನಡೆದ ಈ ರಂಗಪಂಚಮಿಯಲ್ಲಿ ಐದು ನಾಟಕಗಳು ಏಕಕಾಲದಲ್ಲಿ ಐದು ಜನ ನಿರ್ದೇಶಕರಿಂದ ನಿರ್ದೇಶನಗೊಂಡು ಪ್ರದರ್ಶಿಸಲ್ಪಟ್ಟವು. ಪ್ರತಿಮಾಸಭಾ ಸದಸ್ಯರಿಂದ 'ಸಜುವಾನಿನ ಸಾಧ್ವಿ', ಕಾರ್ಮಿಕರಿಂದ 'ತಾಯಿ', ಸರ್ಟಿಫೈಡ್ ಶಾಲಾ ಮಕ್ಕಳಿಂದ 'ಹೆಡ್ಡಾಯಣ', ಅನುಭವ ಮಂಟಪ ಶಾಲಾ ಮಕ್ಕಳಿಂದ 'ಅಲಿಬಾಬಾ ಮತ್ತು ನಲವತ್ತು ಕಳ್ಳರು' ಹಾಗೂ ಶಾಮನೂರು ಗ್ರಾಮಸ್ಥರಿಂದ 'ಚೋರಚರಣದಾಸ' ನಾಟಕಗಳು ಪ್ರದರ್ಶನಗೊಂಡವು. ಖ್ಯಾತ ನಿರ್ದೇಶಕರಾದ ಜಂಬೆ, ಕೆ.ವಿ. ಅಕ್ಷರ, ವಾಲ್ಟರ್ ಡಿಸೋಜ ಮುಂತಾದವರು ಈ ನಾಟಕಗಳನ್ನು ನಿರ್ದೇಶಿಸಿದ್ದರು. ಆಶ್ಚರ್ಯದ ಸಂಗತಿ ಅಂದರೆ ಎಪ್ಪತ್ತು ಮತ್ತು ಎಂಭತ್ತರ ದಶಕಗಳಲ್ಲಿ ಪ್ರತಿಮಾಸಭಾದ ಸದಸ್ಯತ್ವಕ್ಕೆ ಅಪಾರ ಬೇಡಿಕೆ ಇತ್ತು. ಅಪಾರ ಪ್ರೇಕ್ಷಕ ವರ್ಗವಿತ್ತು. ವರ್ಷಕ್ಕೆ ಐದುನೂರು ಸದಸ್ಯತ್ವವನ್ನು ಮಾತ್ರ ನೋಂದಣಿ ಮಾಡಲಾಗುತಿತ್ತು. ಸದಸ್ಯತ್ವ ದೊರೆಯದಿದ್ದವರು ಸಭಾದ ಕಾರ್ಯಕಾರಿ ಸದಸ್ಯರ ಮೇಲೆ ಸಿಟ್ಟಾಗುತ್ತಿದ್ದದ್ದೂ ಉಂಟು!

ಪ್ರತಿಭಾಸಭಾ ತೊಂಭತ್ತರ ದಶಕದವರೆಗೆ ಅನೇಕ ನಾಟಕಗಳನ್ನು ಆಡಿ-ಆಡಿಸಿ ಮೆಚ್ಚುಗೆಗೆ ಪಾತ್ರವಾಯಿತು. ದಾವಣಗೆರೆ ನಗರದಲ್ಲಿ ಮಾತ್ರವಲ್ಲದೇ ಬೇರೆ ಊರುಗಳಲ್ಲೂ ಪ್ರದರ್ಶನ ನೀಡಿದ ಕೀರ್ತಿ ಪ್ರತಿಮಾಸಭಾಕ್ಕೆ ಸಲ್ಲುತ್ತದೆ.

# ಚಿಂದೋಡಿ ಅವರ ಕೆ.ಬಿ.ಆರ್. ಡ್ರಾಮಾ ಕಂಪನಿ

ಕನ್ನಡ ವೃತ್ತಿರಂಗಭೂಮಿಯ ಇತಿಹಾಸ ದಾಖಲೆಯ ಸಂದರ್ಭದಲ್ಲಿ ದಾವಣಗೆರೆಯ ಚಿಂದೋಡಿಯವರ ಕೆ.ಬಿ.ಆರ್. ಡ್ರಾಮಾ ಕಂಪನಿ ಹೆಸರು ಉಲ್ಲೇಖಿಸದೇ ಹೋದರೆ ಚರಿತ್ರೆ ಅಪೂರ್ಣವಾದೀತು. ಅಂತಹ ಅಪೂರ್ವ ಹಿನ್ನೆಲೆಯುಳ್ಳ ವೃತ್ತಿ ನಾಟಕ ಕಂಪನಿ ಚಿಂದೋಡಿ ಮನೆತನದ್ದು.



ಗಾಯನಗಂಧರ್ವ ಚಿಂದೋಡಿ ವೀರಪ್ಪ

ಚಿಂದೋಡಿ ಅನ್ನೋದು ಮನೆತನದ ಹೆಸರಲ್ಲ. ಅವರದು ಅಣ್ಣಿಗೇರಿ ವೀರಪ್ಪನವರ ಮನೆತನ. ಅಣ್ಣಿಗೇರಿ ವೀರಪ್ಪನವರು ಶರಣ ಸಂಪನ್ನರು. ಅವರು ಸಂಸ್ಕೃತಿ, ಸಂಗೀತ ಪ್ರೇಮಿಗಳು. ವೀರಪ್ಪನವರು 1928ರ ಸುಮಾರಿಗೆ ಶ್ರೀ ಕೆ.ಬಿ.ಆರ್. ಡ್ರಾಮಾ ಕಂಪನಿಯೊಂದನ್ನು ಸ್ಥಾಪಿಸುತ್ತಾರೆ. ಮೈಸೂರು ಆಸ್ಥಾನದಲ್ಲಿ ತಮ್ಮ ರಂಗಸಂಗೀತ ಪ್ರತಿಭೆ ಮೆರೆದದ್ದಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರು ಇವರನ್ನು ಗೌರವಿಸಿ ಚಿನ್ನದ 'ತೋಡೆ' ನೀಡಿ ಗಾನಗಂಧರ್ವ ಎಂಬ ಬಿರುದು ಪಾಲಿಸುತ್ತಾರೆ. ತೋಡೆ ಎಂಬ ಬಿರುದು ಬರಬರುತ್ತಾ ಜನರ ಬಾಯಲ್ಲಿ ಸಂಸ್ಕೃತೀಕರಣಗೊಂಡು ಚಿನ್ನದ ತೋಡೆವು ಬಾಯಿಂದ, ಬಾಯಿಂದ ಬಾಯಿಗೆ ವರ್ಗಾವಣೆ ಗೊಂಡು "ಚಿಂದೋಡಿ" ಆಗಿಬಿಡುತ್ತದೆ.

ಚಿಂದೋಡಿ ವೀರಪ್ಪನವರು ಮಹಾನ್ ಪ್ರತಿಭಾಶಾಲಿಗಳು, ಅಭಿನಯ, ನಾಟಕ ರಚನೆ, ನಾಟಕ ಪರಿಷ್ಕಾರ, ರಂಗಸಂಗೀತ ಹೀಗೆ ಅವರದು ಬಹುಮುಖ ಪ್ರತಿಭೆ. ಅವರ ಪ್ರತಿಭೆಯಿಂದಾಗಿ ಕೆ.ಬಿ.ಆರ್. ಡ್ರಾಮಾ ಕಂಪನಿಯ ಪ್ರತಿಷ್ಠೆ ನಾಡಿನಾದ್ಯಂತ ಪ್ರಚುರಗೊಳ್ಳುತ್ತದೆ. ಚಿಂದೋಡಿ ಸೋದರ ಸಂಬಂಧಿಗಳೆಲ್ಲರೂ ರಂಗಭೂಮಿ ಕಲಾವಿದರು. ಹಾಗೆ ನೋಡಿದರೆ ಚಿಂದೋಡಿ ಲೀಲಾ ಸೇರಿದಂತೆ ಅವರ ಮನೆತನದಲ್ಲೇ ಹತ್ತತ್ತಿರ ಐವತ್ತು ಮಂದಿ ಕಲಾವಿದರಿದ್ದಾರೆ. ಲೀಲಾ ಅವರಿಗೆ ನಟನೆ ಅನ್ನೋದು



ಪದ್ಮಶ್ರೀ ಚಿಂದೋಡಿಲೀಲಾ

ಜನ್ಮದತ್ತ ಎಂಬಂತೆ ಲೀಲಾಜಾಲವಾಗಿ ಒಲಿದು ಬಂದಿತ್ತು. ಹಾಗೆಯೇ ರಂಗ ಸಂಘಟನೆಯ ಚಾತುರ್ಯವೂ ಅವರಿಗೆ ಕರಗತವಾಗಿತ್ತು.

ಅವರು ಕಂಪನಿಯ ಸಾರಥ್ಯ ವಹಿಸಿಕೊಂಡಾದ ಮೇಲೆ ಯಶಸ್ಸಿನ ಗೌರೀಶಂಕರ ಏರಿದರು. ಅಷ್ಟೇ ಪ್ರಮಾಣದಲ್ಲಿ ಹೇಳಲಾಗದ, ಹೇಳದಿರಲಾಗದ ನೋವುಗಳನ್ನು ನುಂಗಿಕೊಂಡು 'ವೃತ್ತಿರಂಗಭೂಮಿಯ ಕಿತ್ತೂರು ಚೆನ್ನಮ್ಮ' ಎನಿಸಿಕೊಂಡರು. ಕಂಪನಿ ನಾಟಕಗಳ ಪರಂಪರೆಗೆ ತಾರಾ ಮೆರುಗು ದಕ್ಕಿಸಿಕೊಟ್ಟ ಕೀರ್ತಿ ಲೀಲಾ ಅವರಿಗೆ ಸಲ್ಲುತ್ತದೆ. ರಾಜ್ಯ, ರಾಷ್ಟ್ರದಾಚೆಗೂ ತಮ್ಮ ಕಂಪನಿಯ ಪ್ರದರ್ಶನಗಳನ್ನು ನೀಡಿದ ಹೆಗ್ಗಳಿಕೆ. ಅವರ ಕಲಾಸೇವೆಗಾಗಿ ಪದ್ಮಶ್ರೀ, ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ, ಕನ್ನಡ ರಾಜ್ಯೋತ್ಸವ, ಗುಬ್ಬಿ ವೀರಣ್ಣ ಪ್ರಶಸ್ತಿಗಳು ಬಂದಿವೆ. ರಂಗಸೇವೆಗೆ ಸಲ್ಲುವ ಎಲ್ಲ ಗೌರವ ಅವರಿಗೆ ಸಲ್ಲಿಕೆಯಾಗಿವೆ.

2009ರಲ್ಲಿ ಕೆ.ಬಿ.ಆರ್. ಡ್ರಾಮಾ ಕಂಪನಿಗೆ ಎಂಬತ್ತು ಸಂವತ್ಸರಗಳು ತುಂಬಿದ ಅಮೃತ ಮಹೋತ್ಸವ. ಮಾಜಿ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್‌ಕಲಾಂ ಅವರು ಈ ಶುಭ ಸಮಾರಂಭದಲ್ಲಿ ಸಕ್ರಿಯ ಪಾಲ್ಗೊಂಡು ಹರಸಿದ್ದಾರೆ. ಓರ್ವ ಹೆಣ್ಣುಮಗಳು ಅದೂ ವೃತ್ತಿರಂಗಭೂಮಿಯಂತಹ ಎಲ್ಲ ದಿನಮಾನದ ಸಂಕೀರ್ಣ ಸಂದರ್ಭಗಳ ನಡುವೆಯೂ ರಂಗ ಸಂಘಟನೆಯ ಕ್ರಿಯಾಶೀಲತೆ ಅದೆಷ್ಟು ಜಾಣತನದಿಂದ ಉಳಿಸಿ ಬೆಳೆಸಿಕೊಂಡು ಹೋಗಬೇಕೆನ್ನುವಲ್ಲಿ ಲೀಲಾ ಅವರಿಗೆ ಮಾತ್ರ ಸಾಧ್ಯವಾಗಿತ್ತು. ಹಳ್ಳಿ ಹುಡುಗಿ, ಗುಣಸಾಗರಿ, ಪೋಲಿಸನ ಮಗಳು ನಾಟಕಗಳು ದಾಖಲೆ ಪಟ್ಟಿಗೆ ಸೇರಿವೆ. ಅವರು ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದಾರೆ. ಅವರು ಮತ್ತು ಅವರ ಬಂಧುಗಳು ಸಿನಿಮಾ ಜಗತ್ತಿಗೂ ಪ್ರವೇಶ ಪಡೆದು "ಗಾನಯೋಗಿ ಪಂಚಾಕ್ಷರ ಗವಾಯಿ"ಗಳಂಥ ಮಹಾನ್ ವ್ಯಕ್ತಿತ್ವ ಕುರಿತು ಚಿತ್ರ ತಯಾರಿಸಿ ಯಶಸ್ಸು ಪಡೆದಿದ್ದಾರೆ.

ಲೀಲಾ ಅವರು ತಮ್ಮ ಬದುಕಿನ ಕಡೇ ಘಳಿಗೆಯಲ್ಲಿ ಬೆಳಗಾವಿ ಹಾಗೂ ದಾವಣಗೆರೆ ಶಹರಗಳಲ್ಲಿ ಕಟ್ಟಿಸಿದ ರಂಗಮಂದಿರಗಳು ವೃತ್ತಿ ಹಾಗೂ ಹವ್ಯಾಸಿ ನಾಟಕಗಳ ಪ್ರದರ್ಶನಗಳಿಗೆ ಸೂಕ್ತವಾಗಿವೆ. ಕಡಿಮೆ ವೆಚ್ಚದಲ್ಲಿ ಜಿಲ್ಲೆಗೊಂದು ಇಂತಹ ರಂಗಮಂದಿರಗಳಿದ್ದರೇ ವೃತ್ತಿ ನಾಟಕ ಕಂಪನಿಗಳಿಗೆ "ಏಕಗವಾಕ್ಷಿ" ಅನುಮತಿ ಪೀಡೆಯ ಬೇಡಿಕೆ ಬೇಡವೇ ಬೇಡ. ಅವರು ಇನ್ನಷ್ಟು ಕಾಲ ನಮ್ಮ ನಡುವೆ ಬದುಕ ಬೇಕಿತ್ತು ರಂಗಬಾಳು ಬಾಳಬೇಕಿತ್ತು.

ಲೀಲಾ ಅವರ ತರುವಾಯ ಅವರ ಏಕೈಕ ಸುಪುತ್ರ ಸಿ.ಎಲ್. ಚಂದ್ರಧರ ಅವರು ಕಂಪನಿಯ ಮಾಲೀಕತ್ವ ವಹಿಸಿಕೊಂಡು ಮುನ್ನಡೆಯುತ್ತಿದ್ದಾರೆ. ಕಂಪನಿಯ ಶಾಖೆಗಳು ಕೂಡಾ ಪ್ರದರ್ಶನ ನೀಡುತ್ತಿವೆ. ಕಂಪನಿ ನಾಟಕಗಳ ಎಲ್ಲ ರಂಗಸಾಧ್ಯತೆಗಳ ಸಾಧನೆಯ ಪ್ರತೀಕವಾಗಿ ಚಿಂದೋಡಿಯವರ ಕೆ.ಬಿ.ಆರ್. ಡ್ರಾಮಾ ಕಂಪನಿಯು ರಂಗೇತಿಹಾಸಕ್ಕೊಂದು ಜೀವಂತ ನಿದರ್ಶನವಾಗಿ ನಿಲ್ಲುತ್ತದೆ. ಚಿಂದೋಡಿ ಕುಟುಂಬ



ಕೆ.ಬಿ.ಆರ್. ಡ್ರಾಮಾ ಕಂಪನಿಯ 80ನೇ ವರ್ಷದ ಅಮೃತ ಮಹೋತ್ಸವ ಸಮಾರಂಭವನ್ನು ಮಾಜಿ ರಾಷ್ಟ್ರಪತಿಗಳಾದ ಡಾ॥ ಎ.ಪಿ.ಜೆ. ಅಬ್ದುಲ್ ಕಲಾಂ ಅವರು ಜ್ಯೋತಿ ಬೆಳಗಿಸಿ, ಉದ್ಘಾಟಿಸಿದ ಸಂದರ್ಭ.



ಶಾಕುಂತಲ ನಾಟಕದಲ್ಲಿ ಚಿಂದೋಡಿ ಲೀಲಾ ಮತ್ತು ಚಿಂದೋಡಿ ವೀರಪ್ಪ



'ದುಡುಕಿ ಹೋದ ಮಗ ಹುಡುಕಿ ಬಂದ ಸೊಸೆ', ನಾಟಕದಲ್ಲಿ ಇಂಡಿ ವೀರೇಶ್ ಮತ್ತು ಚಿಂದೋಡಿ ಲೀಲಾ

ವ್ಯಕ್ತಿತ್ವದ ಮೂಲಸ್ಥಾಯಿಯಾಗಿ ಕಂಪನಿ ನಾಟಕ ಪರಂಪರೆ ತನ್ಮೂಲಕ ಮುಂದುವರೆದುಕೊಂಡು ನಡೆಯುತಿದೆ. ಇನ್ನೇನು ಹದಿನೈದು ವರುಷ ಕಳೆದರೆ ಶತಮಾನದ ದಾಖಲೆಗೆ ಭಾಜನವಾಗಬಲ್ಲದು.

*ಕೆ.ಬಿ.ಆರ್. ಡ್ರಾಮಾ ಕಂಪನಿಯ ಪ್ರಮುಖ ನಾಟಕಗಳು :*

ಕೊಟ್ಟೂರೇಶ್ವರ ಚರಿತ್ರೆ, ಗುಲೇಬಕಾವಲಿ, ಚಿತ್ರಾಂಗದ, ಲಂಕಾದಹನ, ಬಬ್ರುವಾಹನ, ಕಡ್ಲೀಮಟ್ಟಿ ಕಾಶೀಬಾಯಿ, ಶಕುಂತಲಾ, ಗುಣಸಾಗರಿ, ಹೆಣ್ಣಿಗೆ ಹಠ ಗಂಡಿಗೆ ಚಟ, ಸೂಳೆಗೆ ಗಂಡ ಯಾರು ?, ಶ್ರೀ ಕರಿಬಸವೇಶ್ವರ ಮಹಾತ್ಮೆ, ಎಷ್ಟು ನಗ್ತಿ ನಗು, ಸಂಪತ್ತಿಗಿಂತಲೂ ಮಾಂಗಲ್ಯ ದೊಡ್ಡದು, ಧರ್ಮದ ದೌರ್ಜನ್ಯ, ಸೂಳೆ ಕಾಪಾಡಿದ ಸತ್ಯ, ಪೋಲಿಸನ ಮಗಳು, ಹಳ್ಳಿ ಹುಡುಗಿ, ದುಡುಕಿ ಹೋದ ಮಗ ಹುಡುಕಿ ಬಂದ ಸೊಸೆ, ಪಾದುಕ ಪಟ್ಟಾಭಿಷೇಕ, ಹೇಮರೆಡ್ಡಿ ಮಲ್ಲಮ್ಮ, ಪ್ರಭುಲಿಂಗಲೀಲೆ, ರಕ್ತರಾತ್ರಿ ಇನ್ನೂ ಮುಂತಾದವು.

## ಕೆ.ಬಿ.ಆರ್. ಡ್ರಾಮಾ ಕಂಪನಿಯ ಪ್ರಮುಖ ಕಲಾವಿದರು

* ಚಿಂದೋಡಿ ವೀರಪ್ಪ
* ಚಿಂದೋಡಿ ಸಣ್ಣ ಕರಿಬಸಪ್ಪ
* ಚಿಂದೋಡಿ ಶಾಂತರಾಜ್
* ಎಚ್.ಎಸ್. ವೆಂಕುಬಾಯಿ ಹರಿಹರ
* ಹಲಗೇರಿ ಜಟ್ಟಪ್ಪ
* ಅಡಿವೆಪ್ಪ ಅಂಕಲಗಿ
* ರತ್ನಮ್ಮ ಶಿರಾಳಕೊಪ್ಪ
* ಚಿಂದೋಡಿ ದೊಡ್ಡಕರಿಬಸಪ್ಪ
* ಚಿಂದೋಡಿ ಶಿವರಾಜ್
* ಚಿಂದೋಡಿ ಲೀಲಾ
* ಲೀಲಾವತಿ
* ಮಣ್ಣೇರಿ ಬಸವನಗೌಡರು
* ಒಡ್ಡನ ಗೌರಮ್ಮ,
* ಕೊಟ್ಟೂರು ಶಾರದಮ್ಮ

* ಕಾಶೀಬಾಯಿ ಬಾಗಲಕೋಟೆ
* ನಳಿನಿ ಜಯಂತಿ
* ಪ್ರಮೀಳಾ ಚಿತ್ರದುರ್ಗ
* ಸಿ.ಕೆ. ಕಲಾವತಿ
* ಹನುಮಂತಪ್ಪ
* ವಿನೋದಮ್ಮ
* ದುಗ್ಗಪ್ಪ ಮಾಸ್ಟರ್ ಕುಂದಾಪುರ
* ನಾ. ರೇವಣ್ಣ
* ಚಿಂದೋಡಿ ಚಂದ್ರಧರ
* ಚಿಂದೋಡಿ ಮಧುಕೇಶ್
* ಚಿಂದೋಡಿ ರಾಜಶೇಖರ್
* ಚಿಂದೋಡಿ ಸಿದ್ದರಾಜ್
* ಸಿ.ಬಿ. ಸಾವಿತ್ರಮ್ಮ
* ಸಿ.ಎಸ್. ನಿರ್ಮಲ
* ಕಿಶೋರ ಚಿಂದೋಡಿ
* ಸಿ.ವಿ. ದೀಪ
* ಇಂಡಿ ವೀರೇಶ್
* ಲೀಲಾ ಜಯಂತಿ
* ರಾಮಣ್ಣ ಬೆಂಗಳೂರು
* ಬಿ.ಎನ್. ಸರೋಜಾ ಧುತ್ತರಗಿ
* ಜಿ. ಲಕ್ಷ್ಮಮ್ಮ
* ಎಸ್.ಆರ್. ರಾಧ
* ತಬಲಾಜಿ ಸೋಮಣ್ಣ
* ನರಸಿಂಹ ರಾಯಚೂರು
* ಆರ್.ವಿ. ಗುರುಪಾದ
* ಚಿಂದೋಡಿ ಬಂಗಾರೇಶ್
* ಚಿಂದೋಡಿ ಶ್ರೀಕಂಠೇಶ್
* ಚಿಂದೋಡಿ ಮಡಿರಾಜ್
* ಚಿಂದೋಡಿ ಶಂಭುಲಿಂಗಪ್ಪ
* ಸಿ.ಎಸ್. ಅಂಜನಿ
* ಚಿಂದೋಡಿ ವಿಜಯಕುಮಾರ್
* ಸಿ.ಕೆ. ಮಂದಾಕಿನಿ
* ಸಿ.ವಿ. ಹೇಮಾ.
* ಮೌಲಾಸಾಬ

# 'ಭೂಮಿಕಾ' ವನಿತಾ ರಂಗವೇದಿಕೆ, ದಾವಣಗೆರೆ

● ಅನುರಾಧಾ ಬಕ್ಕಪ್ಪ

ದಾವಣಗೆರೆಯ ವನಿತಾ ಸಮಾಜದ ಅಂಗಸಂಸ್ಥೆಯಾದ 'ಭೂಮಿಕಾ' ವನಿತಾ ರಂಗವೇದಿಕೆ ಸಮಾನ ಮನಸ್ಕ ಕ್ರಿಯಾಶೀಲ ಮಹಿಳೆಯರೇ ಇರುವಂತಹ ಒಂದು ಸಂಸ್ಥೆ. ರಂಗಭೂಮಿ ಚಟುವಟಿಕೆಗಳಲ್ಲಿ ಭಾಗವಹಿಸಲು ಈಗಲೂ ಮಡಿವಂತಿಕೆ ತೋರುವ ಮಹಿಳೆಯರು ಹೆಚ್ಚಿರುವ ದಾವಣಗೆರೆಯಂತಹ ಊರಿನಲ್ಲಿ ರಂಗಭೂಮಿ ಬಗ್ಗೆ ಆಸಕ್ತಿ ಮೂಡಿಸುವ ಹತ್ತು ಹಲವು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಲೇ,



ಬಿ. ಜಯಶ್ರೀ ರಂಗ ಸಂಗೀತ ಸಾರಥ್ಯದಲ್ಲಿ 'ಭೂಮಿಕಾ' ತಂಡಕ್ಕೆ ತರಬೇತಿ ಶಿಬಿರ

ಪ್ರಗತಿಪರ ಧೋರಣೆಯ ಉತ್ತಮ ಅಭಿರುಚಿಯನ್ನು ಮೂಡಿಸುವಲ್ಲಿ ಪ್ರಾಮಾಣಿಕ ಪ್ರಯತ್ನ ಮಾಡುತ್ತಿದೆ 'ಭೂಮಿಕಾ'.

2003ರಲ್ಲಿ 'ಭೂಮಿಕಾ' ರಂಗವೇದಿಕೆ ಸುಧಾಮೂರ್ತಿಯವರಿಂದ ಉದ್ಘಾಟನೆಗೊಂಡು, 'ಮುನಿಸಿಪಾಲಿಟಿ ಮೆಂಬರ್' ನಾಟಕದ ಪ್ರದರ್ಶನದೊಂದಿಗೆ ತನ್ನ ರಂಗ ಚಟುವಟಿಕೆಗಳನ್ನು ಪ್ರಾರಂಭ ಮಾಡಿತು.

'ಭೂಮಿಕಾ' ಪ್ರತಿವರ್ಷವೂ ರಂಗ ತರಬೇತಿ ಶಿಬಿರಗಳನ್ನು ಹಮ್ಮಿಕೊಂಡು, ದಾವಣಗೆರೆಯ ರಂಗಾಸಕ್ತ ಮಹಿಳೆಯರನ್ನು ಒಗ್ಗೂಡಿಸಿ ಉತ್ತಮ ರಂಗ ಪ್ರದರ್ಶನಗಳನ್ನು ನೀಡುವುದರ ಮೂಲಕ ರಂಗಭೂಮಿಯ ಬಗ್ಗೆ ಅರಿವು, ಆಸಕ್ತಿ ಮತ್ತು ಒಲವನ್ನು ಮೂಡಿಸುವಲ್ಲಿ ಸತತ ಶ್ರಮವಹಿಸುತ್ತಿದೆ.

'ಭೂಮಿಕಾ' ವನಿತಾ ರಂಗವೇದಿಕೆಯಲ್ಲಿ ಮೂಡಿಬಂದ ನಾಟಕಗಳು ಹಲವಾರು. 2003ರಲ್ಲಿ 'ಬಾರಮ್ಮ ಭಾಗೀರಥಿ' 2004ರಲ್ಲಿ 'ಕುಂಟಾ ಕುಂಟಾ ಕುರವತ್ತಿ', 2005ರಲ್ಲಿ ಲಂಕೇಶ್ ಅವರ 'ಅವ್ವ' ಕವನವನ್ನಾಧರಿಸಿದ ನೃತ್ಯ ರೂಪಕ, 2006ರಲ್ಲಿ ಬಿ. ಜಯಶ್ರೀ ಅವರ ನೇತೃತ್ವದಲ್ಲಿ ರಂಗಗೀತೆಗಳ ಕಾರ್ಯಕ್ರಮ ಮತ್ತು 2008ರಲ್ಲಿ 'ರೆಕ್ಕೆ ಕಟ್ಟುವಿರಾ'? ಹಲವಾರು ಪ್ರದರ್ಶನಗಳನ್ನು ಕಂಡ 'ರೆಕ್ಕೆ ಕಟ್ಟುವಿರಾ?" ಭೂಮಿಕಾ ರಂಗವೇದಿಕೆಯ ಪ್ರಯಾಣದಲ್ಲಿ ಒಂದು ಉತ್ತಮ ಮೈಲಿಗಲ್ಲು.

ಈ ಮಧ್ಯೆ 'Mad mad mad world', 'Star value' 'ಬಾವಿಯಲ್ಲಿ ಬವಣಿ' ಮುಂತಾದ ಕಿರುನಾಟಕಗಳನ್ನು ಭೂಮಿಕಾ ಪ್ರದರ್ಶಿಸಿದೆ. ಹೆಸರಾಂತ ರಂಗ ತಂಡಗಳಿಂದ ಉತ್ತಮ ನಾಟಕಗಳನ್ನು ಪ್ರಸ್ತುತ, ಪಡಿಸುವಲ್ಲಿ ಕೂಡ ಭೂಮಿಕಾ ಯಶಸ್ವಿಯಾಗಿದೆ. 2005ರಲ್ಲಿ ಪ್ರದರ್ಶನಗೊಂಡ 'ಕೂಡಲ ಸಂಗಮ' ನೃತ್ಯ ರೂಪಕ ಮತ್ತು 2010ರಲ್ಲಿ ಪ್ರದರ್ಶನಗೊಂಡ 'Overcoat' ರಂಗಾಸಕ್ತರ ಉತ್ತಮ ಪ್ರತಿಕ್ರಿಯೆಗೆ ಪಾತ್ರವಾದವು.

ನಾಟಕಗಳಷ್ಟೇ ಅಲ್ಲದೇ ರಂಗಭೂಮಿಗೆ ಸಂಬಂಧಪಟ್ಟ ವಿಷಯಗಳ ಕುರಿತು ತಜ್ಞರಿಂದ ಉಪನ್ಯಾಸಗಳು ಪ್ರಾತ್ಯಕ್ಷಿಕೆಗಳು ಮತ್ತು 'Book Talk'ಗಳು ಭೂಮಿಕಾದಿಂದ ಮೂಡಿಬಂದ ಕಾರ್ಯಕ್ರಮಗಳು.

2008ರಲ್ಲಿ ರಂಗಕೋಲಾಟ ಪ್ರದರ್ಶನ ನೀಡಿ, ನೂತನ ಪ್ರಯೋಗಗಳನ್ನು ಮಾಡುವಲ್ಲಿ ಯಶಸ್ವಿಯಾಯಿತು. ಸುಮಾರು 80 ಮಹಿಳೆಯರ ಸದಸ್ಯತ್ವವನ್ನು ಹೊಂದಿರುವ 'ಭೂಮಿಕಾ' ವನಿತಾ ರಂಗವೇದಿಕೆ ನಾಗಮ್ಮ ಕೇಶವಮೂರ್ತಿಯವರ ಹಿರಿತನದಲ್ಲಿ, ಅಧ್ಯಕ್ಷರಾದ ಅನುರಾಧ ಬಕ್ಕಪ್ಪನವರ ನೇತೃತ್ವದಲ್ಲಿ ಬಿ.ಟಿ. ಜಾಹ್ನವಿಯವರ ಕಾರ್ಯದರ್ಶಿತ್ವದಲ್ಲಿ ರಂಗ ಚಟುವಟಿಕೆಗಳನ್ನು ಮಾಡಿಕೊಂಡು ದಾವಣಗೆರೆಯ ರಂಗಭೂಮಿ ವಾತಾವರಣವನ್ನು ಉತ್ತಮಗೊಳಿಸುವತ್ತ ಪುಟ್ಟ ಪ್ರಯತ್ನ ಮಾಡುತ್ತಾ ಸಾಗುತ್ತಿದೆ.

# ನೀವು–ನಾವು.........

● ಎಸ್.ಎಸ್. ಸಿದ್ಧರಾಜು

ಇದೇನು? ಎಂಥ ನಾಟಕ ಕಂಪನಿ! ಎಂದು ಅಚ್ಚರಿಕೂಡ ಆಗಬಹುದು. ಹೌದು, ಅದಕ್ಕಾಗಿಯೇ ಈ ತಂಡಕ್ಕೆ, ಸಂಸ್ಥೆಗೆ, ಟ್ರಸ್ಟ್‌ಗೆ, ಕಂಪನಿಗೆ ಹೆಸರಿಗಾಗಿಯು ಪದಾಧಿಕಾರಿಗಳು ಇಲ್ಲ. ನಮಗೆ ಖುಷಿ ಅನಿಸಿದ್ದನ್ನು ತಂದು ನಿಮಗೆ ತೋರಿಸುವುದು. ನೀವು ಖುಷಿ ಪಡುವುದನ್ನು ನೋಡಿ ನಾವು ಖುಷಿ ಪಡುತ್ತೇವೆ. "ನೀವು – ನಾವು" ಸೇರಿಕೊಂಡೇ ರಂಗಭೂಮಿಯ ಕುರಿತು ಗಂಭೀರ ಚಿಂತನೆ ಹಾಗೂ ಪ್ರಯೋಗಗಳನ್ನು ನಡೆಸುವ ಅದಮ್ಯ ಹಂಬಲ ನಮ್ಮ ನಿಮ್ಮದು. 30–11–1997ರಂದು ದಾವಣಗೆರೆಯಲ್ಲಿ ಚಿತ್ರನಟ ರಮೇಶ್ ಇಂತಹ ಕನಸಿನ ತಂಡ ಉದ್ಘಾಟಿಸಿದರು.

ಜನರಿಗೆ ಆರೋಗ್ಯಕರ ರಂಜನೆ ಕೊಡುವುದರ ಜೊತೆಗೆ ಅವರಲ್ಲಿ ಹೊಸ ಬಗೆಯ ಸಾಂಸ್ಕೃತಿಕ ಎಚ್ಚರವನ್ನು ಮೂಡಿಸುವುದು, ರಂಗ ಮಾಧ್ಯಮದ ಮೂಲಕ ಜನರಲ್ಲಿ ಸಾಮಾಜಿಕ ಅರಿವು, ಜವಾಬ್ದಾರಿಯನ್ನು ಬೆಳಸಿ ಅವರ ವ್ಯಕ್ತಿತ್ವ ಹಾಗೂ ಕಲ್ಪನಾಶಕ್ತಿಯನ್ನು ವಿಸ್ತಾರಗೊಳಿಸಬೇಕೆಂಬುದು 'ನೀವು – ನಾವು' ತಂಡದ ಅಭಿಲಾಷೆ.

ಈ ತಂಡದ ಮೊದಲ ಪ್ರದರ್ಶನ 1997ರಲ್ಲಿ ಗಿರೀಶ್ ಕಾರ್ನಾಡರ 'ನಾಗಮಂಡಲ' ನಾಟಕ ನಿರ್ದೇಶನ ಎಸ್.ಎಸ್. ಸಿದ್ದರಾಜು. 6–5–1999ರಲ್ಲಿ ಹಮ್ಮಿಕೊಂಡ ರಂಗಪಂಚಮಿ ನಾಟಕೋತ್ಸವದಲ್ಲಿ ಪ್ರಸಿದ್ಧ ನಾಟಕ ತಂಡಗಳು ಪ್ರದರ್ಶನ ನೀಡಿದವು. ಆ ತಂಡಗಳಲ್ಲಿ ಸಿನಿಮಾ ಕಿರುತೆರೆ ಕಲಾವಿದರೂ ಅಭಿನಯಿಸಿದ್ದರು. ಫೆಬ್ರವರಿ 2000ರಲ್ಲಿ ಬೆಂಗಳೂರಿನ "ನಟರಂಗ" ತಂಡದಿಂದ ಸಿ.ಆರ್. ಸಿಂಹ ನಿರ್ದೇಶಿಸಿದ 'ಕಾಕನಕೋಟೆ' ನಾಟಕ ಸಾದರ ಪಡಿಸಿತು. ಈ ತಂಡದ 2ನೇ ಪ್ರದರ್ಶನ 29–12–2000ದಂದು ಡಾ॥ ಚಂದ್ರಶೇಖರ ಕಂಬಾರರ 'ಜೈಸಿದ್ನಾಯ್ಕ' ಎಂಬ ನಾಟಕವನ್ನು ಶರಶ್ಚಂದ್ರ, ವಿ. ಅಯ್ಯನಗೌಡರ್ ನಿರ್ದೇಶನದಲ್ಲಿ ಅಭಿನಯಿಸಿದೆ. ನಾವು–ನೀವು ಸಾಂಸ್ಕೃತಿಕ ಸಂಘಟನೆ ತುಮಕೂರು ಇವರಿಂದ 7–1–02 ಪು.ತಿ.ನ. ಅವರ "ಗೋಕುಲ ನಿರ್ಗಮನ" (ಜಿ.ಕೆ. ಸುಷ್ಮಾ ನಿರ್ದೇಶನ) ನಾಟಕ ಪ್ರದರ್ಶನ ನೀಡಲಾಯಿತು.

ಹದಿನೈದು ದಿನಗಳ ಕಾಲ ರಾಷ್ಟ್ರೀಯ ನಾಟಕ ಶಾಲೆಯ ಪ್ರಾದೇಶಿಕ ಸಂಪನ್ಮೂಲ ಕೇಂದ್ರ ಬೆಂಗಳೂರು ಸಹಯೋಗದೊಂದಿಗೆ ರಂಗ–ಅಭಿನಯ ಕಾರ್ಯಾಗಾರದ

ಹೊಣೆಯನ್ನು ಹೊತ್ತ "ನೀವು–ನಾವು" ತಂಡ ಯಶಸ್ವಿ ಹೆಜ್ಜೆ ಹಾಕಿದೆ. ಇತ್ತೀಚೆಗೆ ನೀನಾಸಂ ತಿರುಗಾಟ, ಮರುತಿರುಗಾಟಕ್ಕು ಅವಕಾಶ ಮಾಡಿದೆ. 'ನೀವು–ನಾವು' ತಂಡಕ್ಕೆ ವರ್ಷಕ್ಕೊಂದಾದರೂ 'ನಾಟಕ' ಆಡಿಸುವ ಕನಸು.

**ನೀವು ನಾವು ತಂಡದ ಕಲಾವಿದರು :**

| | |
|---|---|
| ನಿರಂಜನ ಕುಮಾರ್ ಕೆ.ಸಿ. | ಗಿರೀಶ್. ಡಿ. ಜತ್ತಿ. |
| ಚಂದ್ರಶೇಖರ. ಎಸ್. ಉಮಚಗಿ. | ಪ್ರಹ್ಲಾದ್. ಎಸ್. ಭಟ್. |
| ಡಾ. ಬಿ.ಟಿ. ಅಚ್ಯುತ್/ ಶರಣಬಸಪ್ಪ ಪಾಟೀಲ್. | ಹರ್ಷ. ಜಿ. ಸೂಗೂರ. |
| ಬಾಬುರಾವ್. ಎಚ್. | ಪರಶುರಾಮ್ |
| ಸಿದ್ದೇಶ್ ಕಡ್ಲೆಬಾಳು. | ಜಯಲಕ್ಷ್ಮಿ ಹೆಗಡೆ. |
| ಸುಜಾತ. ಎನ್. ಐರಣಿ. | ಪ್ರದೀಪ್. ನಾ. ರೇವನ್. |
| ವೀರೇಶ್. ಎಂ.ಪಿ.ಎಂ. | ಪ್ರಕಾಶ್. ಆರ್./ ಶ್ರೀಧರ್. |
| ಸಿದ್ದೇಶಪ್ಪ. / ಎನ್.ಟಿ. ಮಂಜುನಾಥ್. | ದುಶ್ಯಂತ್. / ಲಿಂಗರಾಜೇಗೌಡ. |

**ತಾಂತ್ರಿಕ ವರ್ಗ :**

| | |
|---|---|
| ಬೆಳಕು | : ಶಶಿಧರ ಎಂ., ಗೋಪಾಲಕೃಷ್ಣ. ಕೆ.ಎನ್. ಕೀರ್ತಿಕುಮಾರ್ ಡಿ.ಎನ್., ಚಂದ್ರಶೇಖರ್ ಉಮಚಗಿ, ಶರಣಬಸಪ್ಪ ಪಾಟೀಲ್. |
| ಪ್ರಸಾದನ | : ರಾಮಕೃಷ್ಣ ಬೆಳ್ತೂರು. |
| ವೇಷಭೂಷಣ | : ಸುಜಾತಾ. ಎನ್. ಐರಣಿ, ಜಯಲಕ್ಷ್ಮಿ ಹೆಗಡೆ, ಪ್ರಕಾಶ್. ಆರ್. |
| ರಂಗ ಪರಿಕರ | : ವೀರೇಶ್. ಎಂ.ಪಿ.ಎಂ., ಹರ್ಷ .ಜಿ. ಸೂಗೂರು, ಪರಶುರಾಮ. |
| ರಂಗಸಜ್ಜಿಕೆ | : ಗಿರೀಶ್ ಡಿ. ಜತ್ತಿ., ಸಿದ್ದೇಶ್ ಕಡ್ಲೆಬಾಳು, ನಿರಂಜನ್–ಕುಮಾರ್.ಕೆ.ಸಿ., ಪ್ರದೀಪ್ ರೇವನ್. |
| ವಸ್ತ್ರ ವಿನ್ಯಾಸ | : ಜಯಂತಿ ಮರುಳಸಿದ್ದಪ್ಪ, ಬೆಂಗಳೂರು. |
| ಮೇಳ | : ನಾಗೇಂದ್ರ ಹಾವೇರಿ (ಕೀ ಬೋರ್ಡ್ ಪ್ಲೇಯರ್), ಅನಿಲ್ ರಾಮಧ್ಯಾನಿ (ತಬಲ), ಮಾಧವಿ. ಡಿ.ಕೆ. ಪ್ರತಿಭಾ ಭಟ್, ಗಣೇಶಯ್ಯ ಕೆ.ಪಿ.ಎಂ. ವೀರೇಶ್ ಎಂ.ಪಿ.ಎಂ. ಅಯ್ಯನಗೌಡರು. |
| ಸಂಗೀತ ನಿರ್ದೇಶನ | : ಬಸವಲಿಂಗಯ್ಯ ಹಿರೇಮಠ. |
| ರಂಗವಿನ್ಯಾಸ/ಕಲೆ | : ಬಾಬುರಾವ್.ಹೆಚ್. |
| ಹಣಕಾಸು | : ನಾಗರಾಜ್. ಹೆಚ್.ಕೆ. |
| ರಂಗನಿರ್ವಹಣೆ | : ಗೋಪಾಲಕೃಷ್ಣ. ಕೆ.ಎನ್. / ಮಲ್ಲಿಕಾರ್ಜುನ ಕಡಕೋಳ. |
| ನಿರ್ದೇಶನ | : ಶರಶ್ಚಂದ್ರ, ವಿ. ಅಯ್ಯನಗೌಡರ್. |

# ಶ್ರೀ ಜಯಲಕ್ಷ್ಮಿ ನಾಟಕ ಸಂಘ ದಾವಣಗೆರೆ

● ಕಂಚಿಕೇರಿ ಶಿವಣ್ಣ

13–11–1921ರಲ್ಲಿ "ಶ್ರೀ ಜಯಲಕ್ಷ್ಮಿ ಪ್ರಸಾದಿಕ ಸಂಗೀತ ನಾಟಕ ಮಂಡಳಿ, ದಾವಣಗೆರೆ, ಎಂಬ ನಾಟಕ ಕಂಪನಿ ಶ್ರೀ ಬಕ್ಕೇಶ್ವರ ಸ್ವಾಮಿ ಮಠದ ಹಿಂಭಾಗದಲ್ಲಿರುವ ಚಾರ್ಮನಿ ಬಸವಲಿಂಗಪ್ಪನವರ ಗೋದಾಮಿನಲ್ಲಿ, ಕೊಟ್ಟೂರ ಬಸಪ್ಪ ವಿರಚಿತ 'ತ್ರಿಕೋಟಿ ಲಿಂಗ ಪ್ರತಿಸ್ಥಾಪನೆ' ನಾಟಕದೊಂದಿಗೆ ಅಸ್ತಿತ್ವಕ್ಕೆ ಬಂತು. ವಾರಕ್ಕೆ ಮೂರುದಿನ ಮಾತ್ರ ನಾಟಕ ಪ್ರದರ್ಶಿಸುತ್ತಿದ್ದ ಕಾಲ. ಕೆಲವು ತಿಂಗಳು ಕಾಲ ಹಾಕಿ ಮಾಡಿದ ಸಾಲ ತೀರಿಸಿ ಸಂಘ ಸಂಚಾರ ಪ್ರಾರಂಭಿಸಿತು. 1918ರಲ್ಲೇ ಹಡಗಲಿಯಲ್ಲಿ ಕಂಪನಿ ಆರಂಭಿಸಿ ನಿಲ್ಲಿಸಿತ್ತು.



ಕಂಚಿಕೇರಿ ಕೊಟ್ರಬಸಪ್ಪ

1925ರಲ್ಲಿ ಬಾಗಲಕೋಟೆಯಲ್ಲಿ ಕಂಪನಿ ಮೊಕ್ಕಾಂ ಉತ್ತಮವಾಗಿತ್ತು. 'ಶಾಂತಕುಮಾರಿ' ಸಾಮಾಜಿಕ ನಾಟಕದಲ್ಲಿ ಶಾಂತಕುಮಾರಿಯ ಪಾತ್ರವನ್ನು ಕೊಟ್ರಬಸಪ್ಪ ನವರ ಪತ್ನಿ ಲಕ್ಷ್ಮಮ್ಮನವರು ನಿರ್ವಹಿಸಿ ಬಾಗಲಕೋಟೆಯ ಹೆಂಗಳೆಯರ ಮನಸೂರೆ ಗೊಂಡರು. ವಾರಕ್ಕೆ ಮೂರು ನಾಟಕದಲ್ಲಿ ಒಂದು ದಿನ ಬಾಗಲಕೋಟೆ ಮಹಿಳೆಯರಿ ಗೋಸ್ಕರವೇ ಮೀಸಲಿಡಬೇಕಾಗಿತ್ತು.

ಒಂದು ವಾರ ನಾಟಕ ಪ್ರದರ್ಶನ ನಿಲ್ಲಿಸಿ, ಮಲ್ಲಿಕಾರ್ಜುನಸ್ವಾಮಿ ದರ್ಶನಕ್ಕೆಂದು ಶ್ರೀಶೈಲಕ್ಕೆ ಹೋಗಿ ಬರುವಾಗ, ತೆಲುಗು ಭಾಷೆಯ 'ಹೇಮರೆಡ್ಡಿ ಮಲ್ಲಮ್ಮ' ಪುರಾಣ ಸಿಕ್ಕಿತು. ತೆಲುಗು ಮಾತೃಭಾಷೆಯ ಬಲ್ಲ ಲಕ್ಷ್ಮಮ್ಮನವರ ಮನ ಸೆಳೆಯಿತು. ಇವರ ಪ್ರೇರಣೆಯಿಂದ ಕೊಟ್ಟೂರು ಬಸಪ್ಪನವರು 'ಸಂಪೂರ್ಣ ಹೇಮರೆಡ್ಡಿ ಮಲ್ಲಮ್ಮ' ನಾಟಕವನ್ನು ರಚಿಸಿ ಕರ್ನಾಟಕದ ರಂಗಭೂಮಿಗೆ ಅರ್ಪಿಸಿದ ಕೀರ್ತಿ ಇವರಿಗೆ ಸಲ್ಲಿದೆ.

ಮಲ್ಲಮ್ಮ ನಾಟಕ ಪ್ರದರ್ಶನದಿಂದ ಸಂಘದ ಭವಿಷ್ಯವೇ ಬದಲಾಯಿಸಿತು. ಮಲ್ಲಿಕಾರ್ಜುನನ ಪಾತ್ರದಲ್ಲಿ, ಕೊಟ್ಟೂರ ಬಸಪ್ಪ, ಹುಚ್ಚ ಭರಮರೆಡ್ಡಿಯ ಪಾತ್ರ– ದೇವೇಂದ್ರಪ್ಪ ಕೊಟ್ಟೂರು ವಾಲ್ಮೀಕಿ ಸಂಘದ ಅಧ್ಯಕ್ಷರು, ಲಕ್ಷ್ಮಮ್ಮನವರ ಮಲ್ಲಮ್ಮನ ಪಾತ್ರ ಮನೆ ಮಾತಾಯಿತು. ಪ್ರತಿ ಮನೆಯಲ್ಲೂ ಇವರನ್ನು ಕರೆದು, ಹೊಸಸೀರೆ, ಬೆಳ್ಳಿ ಪದಕ ಕೊಟ್ಟು ಸತ್ಕರಿಸುವುದು ಸಾಮಾನ್ಯವಾಯ್ತು.

1928ರಲ್ಲಿ ಪೂಜ್ಯ ಪಗಡಲದಿನ್ನಿ ಬೃಹನ್ಮಠದ ಕಲಿಗಣನಾಥ ಶಾಸ್ತ್ರಿಗಳ ಸಾನಿಧ್ಯದಲ್ಲಿ ಇಂಜಿನಿಯರ್ ಬಸಪ್ಪನವರ ಅಧ್ಯಕ್ಷತೆಯಲ್ಲಿ ನಾಗರೀಕರ ಪರವಾಗಿ, ಇವರಿಗೆ "ಶಿವ ಶರಣ, ಸೇವಾ ಧುರೀಣ, ಸದ್ಭಕ್ತಶಿರೋಮಣಿ" ಎಂಬ ಬಿರುದನ್ನಿತ್ತು ಸನ್ಮಾನಿಸಿದರು. 'ಶಾಂತಕುಮಾರಿ' ಹಾಗೂ 'ಚೆನ್ನಮ್ಮನ ದಂಡಿ' ಎಂಬ ಜಾನಪದ ನಾಟಕ ಕಂಪನಿಗೆ ಹೆಸರು ತಂದುಕೊಟ್ಟವು. ನಂತರ ಶ್ರೀ ಇನಾಮದಾರ ಅವರು ಕಂಪನಿಗಾಗಿ ರಚಿಸಿದ ಭೌಮಾಸುರ ಕಂಪನಿ ಕೀರ್ತಿ ಇನ್ನಷ್ಟು ಹೆಚ್ಚಿಸಿತು.

ಬಾಗಲಕೋಟೆ ಮೊಕ್ಕಾಮಿನಲ್ಲಿ ಸುಸಜ್ಜಿತವಾದ ಸಂಘ, ಕರ್ನಾಟಕದ ಮುಖ್ಯ ನಗರಗಳಲ್ಲಿ 1928ರಿಂದ 1938ರವರೆಗೂ ಸಂಚರಿಸಿತು.ಈ ಅವಧಿಯಲ್ಲಿ ಶಿರಹಟ್ಟಿ ವೆಂಕೋಬರಾಯರ 'ಮಹಾಲಕ್ಷ್ಮೀ ನಾಟಕ ಸಂಘ ಸ್ಥಗಿತಗೊಂಡು, 500 ಕುರ್ಚಿ, ಇಂಜನ್–ಡೈನಾಮೋ ಎರಡು ಪೆಟ್ಟಿಗೆ ತುಂಬಿದ ಜರತಾರಿ ಪೌರಾಣಿಕ ನಾಟಕದ ಒಡವೆಗಳೂ ಹರಿಹರದಲ್ಲಿ ಒತ್ತೆಯಲ್ಲಿ ಸಿಕ್ಕಿ ಬಿದ್ದಿತು. ಇವೆಲ್ಲವನ್ನೂ ಖರೀದಿಸಿ, ಜರತಾರಿ ಒಡವೆಗಳನ್ನು ಸುಟ್ಟು ನೋಡಿದಾಗ, ಒಂದು ಸಾವಿರ ತೊಲ ಬೆಳ್ಳಿಯಿಂದ, ಮಂಟಪ ಈಶ್ವರಲಿಂಗ ಪೂಜೆಗೆ ಬೇಕಾಗುವ ಎಲ್ಲ ಸಾಮಾನುಗಳನ್ನು ಮಾಡಿಸಿದರು. ಆನಂದರಾವ್ ಪೀಟರ್ (ತಂತ್ರಜ್ಞರು), ಡೋಂಗ್ರೇಪೇಂಟರ್ ಈ ಇಬ್ಬರು ಮಹನೀಯರು ಸೇರ್ಪಡೆಯಾಗಿ, ಸಂಘದ ಕೀರ್ತಿ ಶಿಖರಕ್ಕೇರಿತು.

1940ರಲ್ಲಿ ಹಿರೇಕೆರೂರು ಕ್ಯಾಂಪಿನಲ್ಲಿ "ಭೌಮಾಸುರ" ಪೌರಾಣಿಕ ನಾಟಕವನ್ನು ಯಾವುದೇ ಆಡಂಬರವಿಲ್ಲದೇ ಪ್ರದರ್ಶಿಸುತ್ತಿದ್ದುದನ್ನು ನೋಡಿದ ಡೊಂಗರೆ ಪೇಂಟರ್, ಆನಂದರಾವ್ ಪೀಟರ್‌ರವರು 60 ಸಾವಿರ ರೂಪಾಯಿ ಖರ್ಚುಮಾಡಿ ಸರಿದಾಡುವ ರಂಗ ಮಂಚ, ತಿರುಗುವ ರಂಗ ಮಂಚ, ತಾಂತ್ರಿಕತೆಯಿಂದ ಕೂಡಿದ ಸೀನ್ಸ್, ಒಡವೆ, ಬಟ್ಟೆಬರೆಗಳೂ, ವಿದ್ಯುಚ್ಛಕ್ತಿ ಇವೆಲ್ಲವನ್ನೂ ಮಾಡುವ ಉದ್ದೇಶವನ್ನು ತಿಳಿಸಿದಾಗ ಯಜಮಾನರು ಇದಕ್ಕೆ ಅಸ್ತು ಎಂದರು. ಅದರ ಸಿದ್ಧತೆಗಾಗಿ ಆರು ತಿಂಗಳ ಕಾಲ ನಾಟಕ ನಿಲ್ಲಿಸಿ ಸುಸಜ್ಜಿತಗೊಳಿಸಿದರು.

ಅದ್ದೂರಿಯಾಗಿ ಪ್ರಾರಂಭಿಸಿದ "ಭೌಮಾಸುರ" ನಾಟಕದ ಎದುರು ಇನ್ನಾವುದೇ ನಾಟಕ ಸಂಸ್ಥೆ ಎದುರು ಬರುವ ಸಾಹಸ ಮಾಡಲಿಲ್ಲ. 1941ರಿಂದ 1946ರವರೆಗೂ, ಬಳ್ಳಾರಿ, ಬಿಜಾಪುರ, ಧಾರವಾಡ ಜಿಲ್ಲೆಗಳಲ್ಲೂ, ಗುಲ್ಬರ್ಗ, ರಾಯಚೂರು (ನಿಜಾಮ

ಪ್ರಾಂತ) ಜಿಲ್ಲೆಯಾದ್ಯಂತ ಸಂಚರಿಸಿ, ಆಂಧ್ರದ ನಾರಾಯಣ ಪೇಟ್, ಮಹಾರಾಷ್ಟ್ರದ ಅಕ್ಕಲಕೋಟೆಗಳಲ್ಲಿ ಮೊಕ್ಕಾಂ ನಂತರ ಮೂರು ರೈಲ್ವೆ ವ್ಯಾಗನ್ ತುಂಬಾ ಸಂಘದ ಸಾಮಾನಿನೊಂದಿಗೆ ದಾವಣಗೆರೆಗೆ ಕಂಪನಿ ಮರಳಿತು.

1947ರಿಂದ ಬಸವಣ್ಣಪ್ಪ (ಮಗ)ನವರಿಗೆ ಸಂಘದ ಜವಾಬ್ದಾರಿ ವಹಿಸಿ, ಕೊಟ್ಟೂರ ಬಸಪ್ಪ ಮತ್ತು ಲಕ್ಷ್ಮಮ್ಮನವರು ದಾವಣಗೆರೆಯಲ್ಲಿ ವಿಶ್ರಾಂತಿ ಪಡೆದರು. ಬಳ್ಳಾರಿ ಜಿಲ್ಲಾ, ಕೂಡ್ಲಿಗಿತಾಲ್ಲೂಕು, ಬಣವಿಕಲ್ಲು ಗ್ರಾಮದವರ ಅಪೇಕ್ಷೆ ಮೇರೆಗೆ ಮೊಕ್ಕಾಂ ಮಾಡಿದಾಗ, ಒಂದಿನ ನಾಟಕ ಪ್ರದರ್ಶನವಿಲ್ಲದೇ ಇದ್ದಾಗ, ಬೆಳಕಿಗೆ ಇರಲೆಂದು ಇಟ್ಟಿದ್ದ ಗ್ಯಾಸ್‌ಲೈಟ್ ಸಿಡಿದು ರಂಗ ಮಂದಿರಕ್ಕೆ ಬೆಂಕಿ ಆವರಿಸಿ, ತಂತ್ರಜ್ಞರ, ಕಲಾಕಾರರ, ಮೂವತ್ತು ವರ್ಷದ ಅವಿಶ್ರಾಂತ ಶ್ರಮ ಕೆಲವೇ ಕ್ಷಣದಲ್ಲಿ ಭಸ್ಮವಾಗಿ ಹೋಯಿತು. ಈ ಘಟನೆ ಸಂಭವಿಸಿದ್ದು 1950ನೇ ಇಸವಿ.

ಈ ಘಟನೆಯಿಂದ ದೈಹಿಕವಾಗಿ, ಮಾನಸಿಕವಾಗಿ, ಆರ್ಥಿಕವಾಗಿ, ಜರ್ಜರಿತರಾದ ಕೊಟ್ಟೂರ ಬಸಪ್ಪನವರು ತಮ್ಮ 60 ಎಕರೆ ಜಮೀನು, ದಾವಣಗೆರೆಯಲ್ಲಿದ್ದ ಮನೆ (ಪಿ.ಜೆ. ಬಡಾವಣೆ)ಯನ್ನು ಮಾರಿ ಬಂದ ಹಣದಿಂದ ಬಿಜಾಪುರ ಜಿಲ್ಲೆ ಇಲಕಲ್ಲಿನಲ್ಲಿ ಸಂಘಕ್ಕೆ ಪುನರ್ ಚಾಲನೆ ಕೊಟ್ಟರಾದರೂ, ಯಶ ಸಿಕ್ಕಲಿಲ್ಲ. ತೊಂದರೆಯನ್ನು ಅನುಭವಿಸುತ್ತಾ 1956–57ಕ್ಕೆ ಪುನಃ ದಾವಣಗೆರೆಗೆ ಬಂದು ಬೀಡು ಬಿಟ್ಟರು.

1959ರಲ್ಲಿ ಕೊಟ್ಟೂರಬಸಪ್ಪನವರು ಕೊರಗಿ ಕೊರಗಿ "ಹೇಮರಡ್ಡಿ ಮಲ್ಲಮ್ಮ" ನಾಟಕದ ಸಂಭಾಷಣೆ, ಹಾಡುಗಳನ್ನು ಮೆಲಕು ಹಾಕುತ್ತಾ ತಾವೇ ಕಟ್ಟಿಸಿ ಮಾರಾಟ ಮಾಡಿದ ಮನೆಯಲ್ಲಿ ಇಹಲೋಕ ತ್ಯಜಿಸಿದ ಆರು ತಿಂಗಳ ಅಂತರದಲ್ಲಿ ಪತ್ನಿಯು ತೀರಿ ಹೋದರು.

1940ರಲ್ಲಿ 'ಭೌಮಾಸುರ' ನಾಟಕದ ಬಾಲನಟನಾಗಿ ರಂಗ ಪ್ರವೇಶಿಸಿದ ಕಂಚಿಕೇರಿ ಶಿವಣ್ಣ, ಇಂಟರ್ ಮೀಡಿಯಟ್‌ವರೆಗೂ ವಿದ್ಯಾಭ್ಯಾಸ ಮುಗಿಸಿ ಸಂಘವನ್ನು ತಂದೆಯ ಮುಂದಾಳತ್ವದಲ್ಲಿ, ದಾವಣಗೆರೆ ಸಾವಳಗಿ ರಂಗಮಂದಿರವಲ್ಲಿ (1960) ಪ್ರಾರಂಭಿಸಿ ಅದೃಷ್ಟದ ಬೆಳಕು ಕಾಣದೇ ಸ್ಥಗಿತಗೊಳಿಸಿ, ಏಣಗಿ ಬಾಳಪ್ಪನವರ, ಮೃಡದೇವ ಗವಾಯಿಗಳ ಸಂಘದಲ್ಲಿ (1964)ರುವಾಗ ಶಿವಣ್ಣ ಎಲಿವಾಳ ಸಿದ್ದಯ್ಯ ಸ್ವಾಮಿಗಳ ಮಗಳು ಕಮಲಮ್ಮನ ಕೈ ಹಿಡಿದರು.

1971ರಿಂದ ಪುನಃ ಕಂಪನಿ ಪ್ರಾರಂಭಿಸಿ ಬಿಜಾಪುರ, ಧಾರವಾಡ ಜಿಲ್ಲೆಯಲ್ಲಿ 1984ರವರೆಗೂ ಸಂಘವನ್ನು ಮುನ್ನಡೆಸಿ, 1991ರವರೆಗೂ, ಚಳ್ಳಕೆರೆ, ಹಿರಿಯೂರು ತಾಲ್ಲೂಕಿನ ಗ್ರಾಮಗಳಲ್ಲಿ ನಡೆಸುತ್ತಿರುವಾಗ ಬಸವಣ್ಣಪ್ಪನವರು ದೈವಾಧೀನರಾದರು. ಕಮಲಮ್ಮ ಕ್ಷಯ ರೋಗಕ್ಕೆ ಬಲಿಯಾಗಿ, 1988ರಲ್ಲಿ ನಮ್ಮನ್ನಗಲಿದರು. 1991ರಲ್ಲಿ

ಆಂಧ್ರದ ಅನಂತಪುರಂ ಜಿಲ್ಲಾ, ಮಡಕಶಿರಾ ತಾಲ್ಲೂಕು ಚಿಟ್ನಡುಕು ಗ್ರಾಮದ ಮೊಕ್ಕಾಂ ಮಾಡಿ ಸಂಘದ ಸರಂಜಾಮುಗಳೆಲ್ಲವನ್ನೂ ಅಲ್ಲೇ ಬಿಟ್ಟು ಬರಲಾಯಿತು.

1992ರಿಂದ ದಾವಣಗೆರೆ ನಗರವನ್ನು ಕೇಂದ್ರ ಮಾಡಿಕೊಂಡು ಗಣೇಶನ ಹಬ್ಬದ ನಾಟಕ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಾಟಕ, ಹಬ್ಬ ಹರಿದಿನಗಳ ಹಳ್ಳಿಗಳ ನಾಟಕ, ಸಂಘದ ಸಹಾಯಾರ್ಥ ಪ್ರದರ್ಶನಗಳನ್ನು ನಿರ್ವಹಿಸಿ, ಜೀವನ ಸಾಗಿಸಿದೆವು. 1993ರಲ್ಲಿ ಸಾಗರದ ಮಾರಿಕಾಂಬಾ ಜಾತ್ರೆಗೆ ಒಂದು ತಿಂಗಳು ನಾಟಕ ಪ್ರದರ್ಶಿಸಿದೆವು. 1995ರಲ್ಲಿ ಕುರುವತ್ತಿ ಜಾತ್ರೆಗೆ ಮೊಕ್ಕಾಂ ಮಾಡಿದ್ದೆವು.




**ಕಂಪನಿಗೆ 75ನೇ ವರ್ಷದ ವಜ್ರಮಹೋತ್ಸವ ಸಮಾರಂಭದಲ್ಲಿ ಕನ್ನಡ ಸಂಸ್ಕೃತಿಯ ಇಲಾಖೆಯ ಆಗಿನ ಸಚಿವೆ ಬಿ.ಟಿ. ಲಲಿತನಾಯ್ಕ, ನಾಟಕ ಅಕಾಡೆಮಿ ಅಧ್ಯಕ್ಷೆ ಚಿಂದೋಡಿ ಲೀಲಾ ಹೆಸರಾಂತ ನಾಟಕಕಾರ ಬಸವಲಿಂಗಶಾಸ್ತ್ರಿ ಉಪಸ್ಥಿತರಿದ್ದು, ಸ್ಮರಣ ಸಂಚಿಕೆ ಬಿಡುಗಡೆ ಮಾಡಿದರು.**

75ನೇ ವರುಷ ವಜ್ರಮಹೋತ್ಸವವನ್ನು ದಾವಣಗೆರೆ ನಗರದ ಗುಂಡಿ ಮಹಾದೇವಪ್ಪ ಕಲ್ಯಾಣ ಮಂಟಪದಲ್ಲಿ ಅದ್ಧೂರಿಯಾಗಿ 26–7–95ರಂದು ಆಚರಿಸಿದೆವು. ಹನ್ನೆರಡು ಮಂದಿ ಹಿರಿಯ ಕಲಾವಿದರಿಗೆ ಸನ್ಮಾನ, ಮತ್ತು " ಕನ್ನಡ ಕುಲ ತಿಲಕ ನೃಪತುಂಗ" ನಾಟಕ ಪ್ರದರ್ಶನ. 'ರಂಗ ಕಂಕಣ' ಹೆಸರಿನ ಸ್ಮರಣ ಸಂಚಿಕೆಯ ಸಂಪಾದಕತ್ವದ ಹೊಣೆ ಹೊತ್ತ ಮಲ್ಲಿಕಾರ್ಜುನ ಕಡಕೋಳರೊಂದಿಗೆ, ಸಂಘದ 75ನೇ ವರ್ಷದ ವಜ್ರಮಹೋತ್ಸವದ ಸಮಾರಂಭ ಯಶಸ್ವಿಯಾಯಿತು.

**ಜಯಲಕ್ಷ್ಮಿ ನಾಟಕ ಸಂಘಕ್ಕೆ ಸೇವೆ ಸಲ್ಲಿಸಿದ ಕಲಾವಿದರು :**

ಶ್ರೀ ಕೊಟ್ರಬಸಪ್ಪ ಕಂಚಿಕೇರಿ. ಶ್ರೀ ಹೊಟ್ಟೆ ವೀರಭದ್ರಪ್ಪ ಕೊಟ್ಟೂರು.
ಶ್ರೀ ಹಣಿಗಿ ಚನ್ನಪ್ಪ ಕೊಟ್ಟೂರು. ಶ್ರೀ ದೇವೇಂದ್ರಪ್ಪ (ಹಾಸ್ಯ ಪಾತ್ರ)
ಶ್ರೀ ಮೈದೂರು ಚನ್ನಬಸಪ್ಪ ಕೊಟ್ಟೂರು. ಶ್ರೀ ಬಸಪ್ಪ ಕೊಟ್ಟೂರು.
ಶ್ರೀ ಬಸವನ ಗೌಡರು ಮಣ್ಣೇರಿ (ಭೌಮಾಸುರನ ಪಾತ್ರ)
ಶ್ರೀ ಫಕೀರ ಗೌಡರು ಮಣ್ಣೇರಿ. ಶ್ರೀ ಬಾಲಪ್ಪ,ಕಲಾದಗಿ.
ಶ್ರೀ ನಂಜುಂಡ ಸ್ವಾಮಿ ಹರಿಹರ (ಕಲಿಯುಗದ ಆಂಜನೇಯ)
ಶ್ರೀ ವಿಠಲ್ ಸಾ ಖಟವಟೆ, (ಭೌಮಾಸುರನ ಪಾತ್ರ)
ಶ್ರೀ ಮೃಡದೇವ ಗವಾಯಿ, ಸಿಂಧನೂರು. ಶ್ರೀ ಎಲಿವಾಳಸಿದ್ಧಯ್ಯಸ್ವಾಮಿ
ಶ್ರೀ ದೊಡ್ಡವಾಡ ಸಿದ್ಧರಾಜ ಉಜ್ಜಯನಿ ಮಠ ಶ್ರೀ ಕರ್ಲವಾಡ ಚೆನ್ನಬಸವಯ್ಯ
ಶ್ರೀ ಮುರಗೋಡು ಕೃಷ್ಣ ಶ್ರೀ ಕೆ.ಬಿ. ಶಿವರಾಜ್
ಶ್ರೀ ಬಸವಣ್ಣೆಪ್ಪ ಕೆ.ಬಿ., ಕಂಚಿಕೇರಿ. ಶ್ರೀ ಹನುಮಂತಪ್ಪ, ಕುಕನೂರು.
ಶ್ರೀ ವಿನೋದ ವಿದ್ಯಾನಿಧಿ ಶಾಂತಕುಮಾರ್. ಶ್ರೀ ಅಬ್ಬಾಸ್ ಅಲಿ, ಇಲಕಲ್.
ಶ್ರೀ ಹೆಚ್.ಟಿ. ಅರಸು ಶ್ರೀ ಬಿ.ಓಬಳೇಶ್ವರ, ಹಾಸ್ಯ ಚಕ್ರವರ್ತಿ.
ಶ್ರೀ ಸುರೇಶ್ ಕುಟ್ಟಿ ಶ್ರೀ ಮಾರ್ತಾಂಡರಾವ್, ತೊಗರ್ಸಿ.
ಶ್ರೀ ಖಾಜಾಮಿಯಾ ಮಾಸ್ತರ ಶ್ರೀ ಬಿ.ಟಿ. ರೆಡ್ಡಿ
ಶ್ರೀ ಅಹ್ಮದ್ ಸಾಬ್ ಲಕ್ಷ್ಮೇಶ್ವರ, ಶ್ರೀ ವಿ.ವಿ. ನಾಯಕ್
ಶ್ರೀ ಶಿರಗಂಬಿ ರುದ್ರಪ್ಪ ಶ್ರೀ ಚಿಂದೋಡಿ ವೀರಣ್ಣ
ಶ್ರೀ ರಾಣಿ ರಂಗಪ್ಪ ಶ್ರೀ ಮೆಹಬೂಬ್ ಅಲಿ
ಶ್ರೀ ಲೋಕೇಶ್ ಕರೂರು ಶ್ರೀ ಎಸ್.ಟಿ. ತಿಪ್ಪೇಸ್ವಾಮಿ ರೆಡ್ಡಿ
ಶ್ರೀ ನರಗುಂದ ಶಂಕ್ರಣ್ಣ ಶ್ರೀಮತಿ ಲಕ್ಷ್ಮಮ್ಮ ಕಂಚಿಕೇರಿ
ಶ್ರೀಮತಿ ದೊಡ್ಡಮನಿ ಸೋನೂಬಾಯಿ, (ಖ್ಯಾತರಂಗ ಗಾಯಕಿ)
ಶ್ರೀಮತಿ ಆದವಾನಿ ನರಸಮ್ಮ, (ಖ್ಯಾತರಂಗ ಗಾಯಕಿ)
ಶ್ರೀಮತಿ ರಹಮಾನವ್ವ ಕಲ್ಮನಿ ಶ್ರೀಮತಿ ಸಾವಿತ್ರಮ್ಮ ಬ್ಯಾಡಗಿ
ಶ್ರೀಮತಿ ಜುಬೇದಾಬೇಗಂ ಹಾವೇರಿ, (ಖ್ಯಾತರಂಗ ಗಾಯಕಿ)
ಶ್ರೀಮತಿ ತಾರಾಬಾಯಿ ಜಂಬಲದಿನ್ನಿ ಶ್ರೀಮತಿ ಆರ್.ಟಿ. ರಮಾ
ಶ್ರೀಮತಿ ಪುಟ್ಟಮ್ಮ ಮೇಲುಕೋಟೆ, (ಖ್ಯಾತ ಕರ್ನಾಟಕ ಸಂಗೀತ ಗಾಯಕಿ)
ಶ್ರೀಮತಿ ಲಲಿತಮ್ಮ ಹರಪನಹಳ್ಳಿ ಶ್ರೀಮತಿ ವಜೀರಮ್ಮ
ಶ್ರೀಮತಿ ಸುಭದ್ರಮ್ಮ ಮನ್ಸೂರ, (ಖ್ಯಾತರಂಗ ಗಾಯಕಿ)
ಶ್ರೀಮತಿ ಸತ್ಯಭಾಮಾ ಆರೂರು
ಶ್ರೀಮತಿ ಕಮಲಮ್ಮ, (ಎಲಿವಾಳ ಸಿದ್ದಯ್ಯನವರ ಪುತ್ರಿ)

ಸಂಗೀತ ಸಜ್ಜಿಕೆ :

ಶ್ರೀ ಕೋಟಿ ಚನ್ನಯ್ಯ, ಹಾರ್ಮೋನಿಯಂ. ಶ್ರೀ ಸವನೂರು ನಿಂಗಪ್ಪ, ಹಾರ್ಮೋನಿಯಂ.

ಶ್ರೀ ಕರಿವೀರಯ್ಯ, ತಬಲಾ. ಶ್ರೀ ನರಸಪ್ಪ, ಪಿಟೀಲು

ಶ್ರೀ ಸಾಸ್ವಿಹಳ್ಳಿ ನಾಗಪ್ಪ, ಹಾರ್ಮೋನಿಯಂ.

ರಂಗ ಸಜ್ಜಿಕೆ :

ಶ್ರೀ ಆನಂದರಾವ್ ಪೀಟರ್, ಟೆಕ್ನಿಷಿಯನ್. ಶ್ರೀ ಡೋಂಗರೆ ಪೇಂಟರ್.

ಶ್ರೀ ಖೇಮರಾಜ ಕೆಂಧೂಳಿ ಪೇಂಟರ್. ಶ್ರೀಎಚ್.ಎನ್. ಮಲ್ಲಿಕಾರ್ಜುನ ಸ್ವಾಮಿ.

# ದಾವಣಗೆರೆ 'ಸಮುದಾಯ' ಒಂದು ಹೊರಳುನೋಟ

● ಈಶ್ವರ ಪ್ರಸಾದ್

"ಸಮುದಾಯ, ಸಮುದಾಯ ಎಲ್ಲಾ ಮೂಢನಂಬಿಕೆಗಳಿಗೆ ವಿದಾಯ" "ಗುಡಿ–ಮಸೀದಿ–ಚರ್ಚ್‌ಗಳ ನೂಕಾಚೆ ದೂರ ಮನುಜ ಮತಕೆ ನೀ ಬಾರ ಧೀರ" ಇನ್ನೂ ಮುಂತಾದ ಗೋಡೆ ಬರಹಗಳನ್ನು ದಾವಣಗೆರೆಯಲ್ಲಿ ಬರೆಯುವುದರ ಮೂಲಕ ಸಮುದಾಯ ಸಾಂಸ್ಕೃತಿಕ ಸಂಘಟನೆ ದಾವಣಗೆರೆಯಲ್ಲಿ ಹುಟ್ಟು ಪಡೆಯಿತು.

1978ರಲ್ಲಿ ವಿನೋಬನಗರದ ಗೆಳೆಯರಾದ ಯಾಕೂಬ್, ಎನ್.ಬಿ. ಹನುಮಂತಯ್ಯ, ಸೀನೋಜಿರಾವ್, ಚಂದ್ರೋಜಿರಾವ್, ತಿಪ್ಪೇಸ್ವಾಮಿ, ಈಶ್ವರಪ್ರಸಾದ್, ಕೆ.ಎಲ್. ಭಟ್, ಟಿ.ಅಂಗಾರ, ವೇದರಾಜ್, ಎ.ಎಸ್. ಮೂರ್ತಿ, ಪಾಲ್‌ರಾಜ್, ಗೋಪಾಲ್ ಎಲಿಗಾರ್,



**ದಾವಣಗೆರೆ ಸಮುದಾಯದ 'ಜನತೆ' ಬೀದಿ ನಾಟಕ**

ನಾಗಭೂಷಣ, ಇಮ್ತಿಯಾಜ್ ಹುಸೇನ್, ಜಯಣ್ಣ ಜಾಧವ ಇತ್ಯಾದಿ ಗೆಳೆಯರ ಗುಂಪಿನ ಉತ್ಸಾಹದಿಂದ 'ಬೆಲ್ಚಿ' ಎಂಬ ಬೀದಿ ನಾಟಕ ಪ್ರದರ್ಶನದೊಂದಿಗೆ ಸಮುದಾಯ ತನ್ನ ಸಾಂಸ್ಕೃತಿಕ ಚಟುವಟಿಕೆಗಳನ್ನು ಆರಂಭಿಸಿತು. ಏಕಕಾಲಕ್ಕೆ

ಗುಲ್ಬರ್ಗಾ-ಬೆಂಗಳೂರಿನಿಂದ ಹೋರಾಟ ಕಲಾಜಾಥಾಗಳಲ್ಲಿ ಗುಲ್ಬರ್ಗಾ ಜಾಥಾ ನಾಟಕ ತಂಡವನ್ನು ದಾವಣಗೆರೆ ಸಮುದಾಯ ಬರಮಾಡಿಕೊಂಡು ಯಶಸ್ವೀ ಬೀದಿನಾಟಕಗಳನ್ನು ಸಂಘಟಿಸಿತು. 'ಬೆಲ್ಚಿ' ನಾಟಕವಂತೂ ದಾವಣಗೆರೆ-ಹರಿಹರ-ಹೊಳಲ್ಕೆರೆ-ಹಿರಿಯೂರು ನಗರಗಳಲ್ಲಿ ಇಪ್ಪತ್ತಕ್ಕೂ ಹೆಚ್ಚಿನ ಪ್ರದರ್ಶನ ಕಂಡಿತು.

ಪ್ರೊಸಿನಿಯಂ ನಾಟಕಗಳ ವಿಷಯಕ್ಕೆ ಬಂದರೆ, ಮೆರವಣಿಗೆ, 'ಕತ್ತಲೆ ದಾರಿದೂರ' ಮಾರೀಚನ ಬಂಧುಗಳು, ಚಿಕ್ಕದೇವ ಭೂಪ, 'ಸುಂದ್ರೋಪ ಸುಂದರು' ನಾಟಕಗಳು ಬಹಳಷ್ಟು ಜನಮೆಚ್ಚುಗೆ ಪಡೆದವು. 'ನರಗುಂದ ಬಂಡಾಯ', 'ಬೆಳೆದವರು' ಬೀದಿನಾಟಕಗಳನ್ನು ದಾವಣಗೆರೆಯ ಚಿತ್ರಕಲಾವಿದ ನಾ. ರೇವನ್ ರೈತರ ಸಮಸ್ಯೆಗಳನ್ನು ಮುಂದಿಟ್ಟುಕೊಂಡು ರಚಿಸಿದ ರೇಖಾಚಿತ್ರಗಳು ಭಿತ್ತಿಪತ್ರಗಳಾಗಿ ನಾಡಿನಾದ್ಯಂತ ಪ್ರದರ್ಶನಗೊಂಡವು. ನರಗುಂದ-ನವಲಗುಂದ ರೈತ ಬಂಡಾಯದ ದಿನಗಳಲ್ಲಿ ರೈತ ಜಾಥಾಗಳಲ್ಲಿ ಈ ಭಿತ್ತಿಪತ್ರಗಳು ಬಳಕೆಯಾದವು. ಲಲಿತಕಲಾ ಶಾಲೆಯ ಪ್ರಾಧ್ಯಾಪಕರಾಗಿದ್ದ ಸೊಲಬಕ್ಕನವರು 100 ಅಡಿಗಳ ಕ್ಯಾನ್‌ವಾಸ್ ಮೇಲೆ ರಚಿಸಿದ ಬಣ್ಣದ ಚಿತ್ರ ಬಹಳ ದೊಡ್ಡ ಸಂದೇಶದೊಂದಿಗೆ ರಾಜ್ಯವ್ಯಾಪಿ, ರಾಷ್ಟ್ರವ್ಯಾಪಿ, ಪ್ರದರ್ಶನಗೊಂಡವು. ಅದರ ಶೀರ್ಷಿಕೆ ಹೀಗಿತ್ತು. "ನೂರು ಅಡಿಗಳ ಬಣ್ಣದ ನಡೆ, ಅಣುಸಮರಕ್ಕೆ ಜನತೆಯ ತಡೆ". ಅಮೀಬಾದಿಂದ ಹಿಡಿದು ಅಣುಬಾಂಬಿನವರೆಗೆ ಮನುಕುಲ ಕಂಡ ನಾಗರೀಕತೆ-ಸಂಸ್ಕೃತಿ ವಿನಾಶದ ಕಡೆಗೆ ಹೆಜ್ಜೆ ಹಾಕುತ್ತಿರುವುದನ್ನು ನೂರು ಅಡಿಗಳ ಬಣ್ಣದ ಚಿತ್ರಗಳು ಸಾರಿ ಸಾರಿ ಹೇಳುತ್ತಿದ್ದವು. ಕರಿರಾಜು, ಬಿ.ಆರ್. ಕೊರತಿ ಎಂಬ ಕಲಾವಿದರು ಈ ಚಿತ್ರ ರಚನೆಯಲ್ಲಿ ಸಹಕರಿಸಿದ್ದರು.

ಎಡ ಮತ್ತು ಪ್ರಜಾಪ್ರಭುತ್ವವಾದಿ ಶಕ್ತಿಗಳು ಒಂದಾಗಿ ರೈತನತ್ತ ಜಾಥಾ ಎಂಬ ಬೀದಿ ನಾಟಕಗಳ ಪ್ರದರ್ಶನ 17 ದಿನಗಳ ಕಾಲ ಹರಿಹರ, ದಾವಣಗೆರೆ, ಜಗಳೂರು, ಚಳ್ಳಕೆರೆ, ಹಿರಿಯೂರು, ಚಿತ್ರದುರ್ಗ ತಾಲ್ಲೂಕುಗಳಲ್ಲಿ ಯಶಸ್ವಿಯಾಗಿ ಜರುಗಿತು. ಸೈಕಲ್ ತುಳಿತದೊಂದಿಗೆ ಸಮುದಾಯದ ಗೆಳೆಯರು ನಡೆಸಿಕೊಟ್ಟ ಈ ಜಾಥಾದ ನೇತೃತ್ವನ್ನು ಜಯಣ್ಣ ಜಾಧವ್, ಕೆ.ಎಲ್. ಭಟ್, ಡಿ.ಯಾಕೂಬ್ ವಹಿಸಿದ್ದರು. ಈ ಜಾಥಾ ಜರುಗಿದ್ದು 1981ರ ಡಿಸೆಂಬರ್ ಮತ್ತು 1982ರ ಜನವರಿ ತಿಂಗಳುಗಳಲ್ಲಿ ಈ ಜಾಥಾ ಉದ್ಘಾಟನೆಯನ್ನು ಬಿ.ವಿ. ವೈಕುಂಠರಾಜು, ಸಿದ್ದಲಿಂಗಯ್ಯ ನೆರವೇರಿಸಿಕೊಟ್ಟಿದ್ದರು. ಮುಕ್ತಾಯ ಸಮಾರಂಭಕ್ಕೆ ಬರಗೂರು ರಾಮಚಂದ್ರಪ್ಪ ಆಗಮಿಸಿ ಐತಿಹಾಸಿಕ ಭಾಷಣ ಮಾಡಿದ್ದರು. ದಾವಣಗೆರೆ ಸಮುದಾಯದಿಂದ ಪ್ರೇರಣೆಗೊಂಡು ಹರಿಹರ ಸಮುದಾಯ ಘಟಕ ಸಕ್ರಿಯಗೊಂಡು ಒಳ್ಳೊಳ್ಳೆಯ ಕಾರ್ಯಕ್ರಮ ಜರುಗಿಸಿತು.

ಗಂಗಾಧರಸ್ವಾಮಿ ನಿರ್ದೇಶನದ "ಮೆರವಣಿಗೆ" ಹಾಗೂ ಸಿ. ಬಸವಲಿಂಗಯ್ಯ ನಿರ್ದೇಶನದ "ಕತ್ತಲೆ ದಾರಿದೂರ" ದಾವಣಗೆರೆಯ ಪ್ರೇಕ್ಷಕರು ಮರೆಯುವಂತಿಲ್ಲ.

ಸರಿಸುಮಾರು 1978ರಿಂದ 2003ರವರೆಗೆ ಅಂದರೆ 25 ವರ್ಷಗಳ ನಿರಂತರ ಚಟುವಟಿಕೆಗಳನ್ನು ಜರುಗಿಸಿದ ದಾವಣಗೆರೆ ಸಮುದಾಯ ಸಾಂಸ್ಕೃತಿಕ ಸಂಘಟನೆಯಲ್ಲಿ ಸ್ಥಾಪಿತ ನಿಧಿ ಇರಲಿಲ್ಲ. ಹೊಸ ಸಂಸ್ಕೃತಿಯ ಕಡೆಗೆ ತೆರೆದುಕೊಂಡಿದ್ದ ಯುವಜನರ ಉತ್ಸಾಹವೇ ಅದರ ನಿಧಿಯಾಗಿತ್ತು. ಪ್ರಗತಿಪರ ವಿಚಾರಧಾರೆಯನ್ನು ಹುಟ್ಟು ಹಾಕುವುದೇ ಅದರ ಮೂಲ ಉದ್ದೇಶವಾಗಿತ್ತು.

# ವಿದ್ಯಾಸಾಗರ್ ಆರ್ಟ್ಸ್ ಅಕಾಡೆಮಿ

ದಾವಣಗೆರೆ ನಗರದ ಕೆ.ಬಿ. ಬಡಾವಣೆಯಲ್ಲಿರುವ ವಿದ್ಯಾಸಾಗರ ಶಾಲೆಯು ತನ್ನ ಶಿಕ್ಷಣ ಪದ್ಧತಿಯಲ್ಲಿ ಅನೇಕ ಪ್ರಯೋಗಗಳನ್ನು ನಡೆಸುತ್ತ ಯಶಸ್ಸನ್ನು ಕಂಡ ಸಂಸ್ಥೆಯಾಗಿದೆ. ಮಗುವಿನ ಸರ್ವತೋಮುಖ ವಿಕಾಸಕ್ಕೆ ಪಠ್ಯ ಶಿಕ್ಷಣದ ಜೊತೆಗೆ ಪಠ್ಯಪೂರಕ ಚಟುವಟಿಕೆ ಪರಿಣಾಮಕಾರಿಯಾದದ್ದು ಎಂದು ಮನಗಂಡ ಸಂಸ್ಥೆಯ ಅಧ್ಯಕ್ಷ ಆರ್. ಭರತ್‌ಸಿಂಗ್ ಈ ನಿಟ್ಟಿನಲ್ಲಿ ಅನೇಕ ಪ್ರಯೋಗಾತ್ಮಕ ಮತ್ತು ರಚನಾತ್ಮಕ ಕಾರ್ಯಕ್ರಮವನ್ನು ಹಮ್ಮಿಕೊಂಡರು.

ಶಾಲೆಯ ಪಠ್ಯತರಗತಿಗಳ ಜೊತೆಗೆ ನಾಟಕ, ಸಂಗೀತ, ಯಕ್ಷಗಾನ, ನೃತ್ಯ, ಯೋಗಾಸನ, ಚಿತ್ರಕಲೆ, ಕರಕುಶಲ ಕಲೆ ಹೀಗೆ ಅನೇಕ ವಿಷಯಗಳನ್ನು ಅಳವಡಿಸಿ ಸೂಕ್ತ ತರಬೇತುದಾರರಿಂದ ಮಕ್ಕಳಿಗೆ ತರಬೇತಿ ನೀಡುತ್ತಿದ್ದು ಶಿಕ್ಷಣದಲ್ಲಿ ರಂಗಭೂಮಿಯ ಅನ್ವಯಿಕ ಸಾಧ್ಯತೆಗಳೆಲ್ಲದರ ಕುರಿತು ಅನೇಕ ಪ್ರಯೋಗಗಳನ್ನು ನಡೆಸುತ್ತಾ ಬಂದಿದ್ದಾರೆ.

ಸುಮಾರು ಹತ್ತು ವರ್ಷಗಳ ಹಿಂದೆ ಶಾಲೆಯಲ್ಲಿ ವಿದ್ಯಾರ್ಥಿಗಳಿಗಾಗಿ ರಂಗ ತರಬೇತಿಯನ್ನು ಪ್ರಾರಂಭಿಸಿದ್ದು, ಅದರಲ್ಲಿಯೇ ಕೆಲವು ವಿದ್ಯಾರ್ಥಿಗಳನ್ನು ಆರಿಸಿ ತಂಡವೊಂದನ್ನು ಕಟ್ಟಿ ವರ್ಷಕ್ಕೊಂದು ಪೂರ್ಣಪ್ರಮಾಣದ ನಾಟಕವನ್ನು ಸಿದ್ಧಪಡಿಸಿ ಪ್ರಯೋಗಿಸುತ್ತಾ ಬಂದಿದೆ.

ಈ ನಿಟ್ಟಿನಲ್ಲಿ ಕರ್ನಾಟಕ ಸರ್ಕಾರದ ಸಾರ್ವಜನಿಕ ಶಿಕ್ಷಣ ಇಲಾಖೆಯ ರಾಜ್ಯ ಮಟ್ಟದ ಪ್ರತಿಭಾ ಕಾರಂಜಿ ಪ್ರಶಸ್ತಿ, ದಕ್ಷಿಣ ಭಾರತ ಮಟ್ಟದ ವಿಜ್ಞಾನ ನಾಟಕ, ಅಂತರರಾಷ್ಟ್ರೀಯ ಮಟ್ಟದ ಯೋಗಾಸನ ಪ್ರಶಸ್ತಿ, ಶ್ರೀ ರಂಗ ರಂಗ ಹವ್ಯಾಸಿ ಕಲಾವೃಂದ ತುಮಕೂರು ಇವರು ನಡೆಸುವ ರಾಜ್ಯ ಮಟ್ಟದ ಮಕ್ಕಳ ನಾಟಕ ಸ್ಪರ್ಧೆಯ ಬಹುಮಾನಗಳು ತಂಡಕ್ಕೆ ಇನ್ನಷ್ಟು ಪ್ರೋತ್ಸಾಹ ನೀಡಿದವು.

*'ಬಣ್ಣದ ಹೆಜ್ಜೆ'ಯ ತಿರುಗಾಟ :* ಕಳೆದು ಮೂರು ವರ್ಷಗಳಿಂದ ತಂಡವು ರಂಗ ತಿರುಗಾಟ ಕಾರ್ಯಕ್ರಮವನ್ನು ಕೈಗೊಂಡು ಯಶಸ್ವಿಯಾಗಿ ಪೂರೈಸಿದೆ. ಏಪ್ರಿಲ್ ತಿಂಗಳ ಬೇಸಿಗೆ ರಜಾದಿನಗಳಲ್ಲಿ ವಿದ್ಯಾರ್ಥಿಗಳು ವೃತ್ತಿ ತಂಡಗಳಂತೆ ಬೇರೆಬೇರೆ ಊರುಗಳಿಗೆ ಹೋಗಿ ಪ್ರದರ್ಶನವನ್ನು ನೀಡಿ ಬರುತ್ತಾರೆ. ಈ ಬಣ್ಣದಹೆಜ್ಜೆ ತಿರುಗಾಟವು ಒಂದು ಪೂರ್ಣ ಪ್ರಮಾಣದ ನಾಟಕ ಪ್ರದರ್ಶನ, ಕಲಾತ್ಮಕ ಯೋಗಾಸನ ಪ್ರದರ್ಶನ,

ಯಕ್ಷಗಾನದ ಆಯ್ದ ಭಾಗಗಳ ಅಭಿನಯ ಹಾಗೂ ನೃತ್ಯ ಪ್ರದರ್ಶನಗಳಿಂದ ಕೂಡಿದ ಒಂದು ರಂಗ ಪ್ರಯೋಗದ ಸಮುಚ್ಛಯವಾಗಿದ್ದು, ಸುಮಾರು ಎರಡುವರೆ-ಮೂರು ತಾಸುಗಳ ಪ್ರದರ್ಶನವನ್ನು ಹೊಂದಿರುತ್ತದೆ.

**ತಂಡದ ತಿರುಗಾಟದ ಸ್ಥಳಗಳು :**

ದಾವಣಗೆರೆ ಜಿಲ್ಲೆ : ದಾವಣಗೆರೆ, ಹರಿಹರ, ಹರಪನಹಳ್ಳಿ, ಹೊನ್ನಾಳಿ, ಅಣಜಿ, ಚನ್ನಗಿರಿ, ಬಾಡ, ಬಾತಿ, ಕಕ್ಕರಗೊಳ್ಳ, ಎಲೆಬೇತೂರು, ಹದಡಿ,

ಚಿತ್ರದುರ್ಗ ಜಿಲ್ಲೆ : ಮುರುಘಾಮಠ, ಸಾಣೇಹಳ್ಳಿ,

ಹಾವೇರಿ ಜಿಲ್ಲೆ : ಹಾವೇರಿ, ರಾಣೇಬೆನ್ನೂರು, ಹಾನಗಲ್ ತಾಲ್ಲೂಕು ಶೇಷಗಿರಿ, ಬ್ಯಾಡಗಿ, ಮೋಟೆಬೆನ್ನೂರು.

ಉತ್ತರ ಕನ್ನಡ ಜಿಲ್ಲೆ : ಕುಮಟಾ, ಹೊನ್ನಾವರ ತಾಲ್ಲೂಕಿನ ಮಾಡ್ಗೇರಿ.

ಅಲ್ಲದೇ ತುಮಕೂರು, ಬೆಂಗಳೂರು, ದೊಡ್ಡಬಳ್ಳಾಪುರ, ಬಾಗಲಕೋಟೆ, ಕೋಲಾರ, ಶಿರಸಿ ಮುಂತಾದ ಕಡೆಗಳಲ್ಲಿನ ಮಕ್ಕಳ ನಾಟಕ ಸ್ಪರ್ಧೆಯಲ್ಲಿ ಭಾಗವಹಿಸಿ ಅನೇಕ ಪ್ರದರ್ಶನವನ್ನು ನೀಡಿದೆ ಮತ್ತು ಶಿವಮೊಗ್ಗ ಜಿಲ್ಲೆ ಕುವೆಂಪು ವಿಶ್ವವಿದ್ಯಾಲಯದ ರಂಗ ತರಬೇತಿ ಶಿಬಿರದಲ್ಲಿ ಅನೇಕ ಪ್ರಾತ್ಯಕ್ಷಿಕೆಗಳನ್ನು ನೀಡಿದೆ.

*ಬಣ್ಣದ ಬುಗುರಿ ಶಿಬಿರ :* ಕಳೆದ ವರ್ಷದಿಂದ ಗ್ರಾಮೀಣ ವಿದ್ಯಾರ್ಥಿಗಳಿಗಾಗಿ ಬಣ್ಣದ ಬುಗುರಿ ಎಂಬ ರಂಗ ತರಬೇತಿ ಶಿಬಿರವನ್ನು ಆಯೋಜಿಸಿ ಗ್ರಾಮೀಣ ರಂಗಭೂಮಿಯಲ್ಲಿನ ಆಸಕ್ತಿದಾಯಕ ಪಾಲ್ಗೊಳ್ಳುವಿಕೆಗೆ ಕಿರು ಪ್ರಯತ್ನ ಮಾಡುತ್ತಿದೆ. ದಾವಣಗೆರೆಯ ಹೊನ್ನೂರು ಮತ್ತು ಕಲ್ಪನಹಳ್ಳಿಯ ಮಕ್ಕಳಿಗೆ ಈ ತರಬೇತಿ ನೀಡಿದ್ದು ಶಿಬಿರದಲ್ಲಿ 'ಬೆಳಕಿನ ಕಡೆಗೆ' ನಾಟಕ ಯಶಸ್ವಿಯಾಗಿ ಪ್ರದರ್ಶನಗೊಂಡಿತು.



**ವಿದ್ಯಾಸಾಗರ್ ಆರ್ಟ್ ಅಕಾಡೆಮಿಯ 'ರೆಕ್ಕೆ ಕಟ್ಟುವಿರಾ' ನಾಟಕದ ಒಂದು ದೃಶ್ಯ**

ವಿದ್ಯಾಸಾಗರ ಆರ್ಟ್ ಅಕಾಡೆಮಿ : ಇತ್ತೀಚಿನ ದಿನಗಳಲ್ಲಿ ವಿದ್ಯಾಸಾಗರ ಶಾಲೆಯು ತನ್ನ ಅಂಗ ಸಂಸ್ಥೆಯಾಗಿ ವಿದ್ಯಾ ಸಾಗರ ಆರ್ಟ್ ಅಕಾಡೆಮಿಯನ್ನು ಪ್ರಾರಂಭಿಸಿದ್ದು ಇದರಲ್ಲಿ ಸುತ್ತಮುತ್ತಲಿನ ಎಲ್ಲಾ ಶಾಲಾ ಕಾಲೇಜಿನ ವಿದ್ಯಾರ್ಥಿಗಳಿಗೆ ಶಾಲಾ ಅವಧಿಯ ನಂತರ ತರಬೇತಿ ಪಡೆಯಲು ಅವಕಾಶ ಮಾಡಿಕೊಡಲಾಗುತ್ತಿದೆ. ಶಾಲಾ ತರಗತಿಯಲ್ಲಿ ರಂಗಾಟಗಳಿಗೆ ಹೆಚ್ಚಿನ ಒತ್ತನ್ನು ನೀಡಿದ್ದು ಜೊತೆಯಲ್ಲಿ ರಂಗ ಇತಿಹಾಸ, ಪಾಶ್ಚಾತ್ಯ ಮತ್ತು ಪೌರ್ವಾತ್ಯ ರಂಗಭೂಮಿ, ಭಾರತೀಯ ರಂಗಭೂಮಿ, ಕನ್ನಡ ರಂಗಭೂಮಿ, ರಂಗತಂತ್ರಗಳು, ನಾಟಕ ಪ್ರಕಾರಗಳು, ಅಭಿನಯ, ನಿರ್ದೇಶನ ಮುಂತಾದ ವಿಷಯಗಳ ಕುರಿತು ಸೂಕ್ಷ್ಮ ಪರಿಚಯವನ್ನು ನೀಡಲಾಗುತ್ತಿದೆ.

ಈಗಾಗಲೇ ವಿದ್ಯಾರ್ಥಿಗಳೇ ನಿರ್ದೇಶಿಸಿದ ಅನೇಕ ನಾಟಕಗಳು ಶಾಲೆಯಲ್ಲಿ ಪ್ರಯೋಗಗೊಳ್ಳುತ್ತಿವೆ. ಶಿಕ್ಷಣ ಇಲಾಖೆಯ ವಿಜ್ಞಾನ ನಾಟಕ ಸ್ಪರ್ಧೆ, ಪ್ರತಿಭಾ ಕಾರಂಜಿಯ ಸ್ಪರ್ಧಾನಾಟಕಗಳು ಮತ್ತು ವಿದ್ಯಾರ್ಥಿಗಳ ಪ್ರಯೋಗಾತ್ಮಕ ನಾಟಕಗಳನ್ನು ಹೊರತುಪಡಿಸಿ ಪೂರ್ಣಪ್ರಮಾಣದ ವಾರ್ಷಿಕ ನಾಟಕಗಳು ಈ ಕೆಳಗಿನಂತಿರುತ್ತವೆ.

| ನಾಟಕಗಳು | ಲೇಖಕರು | ನಿರ್ದೇಶಕರು |
|---|---|---|
| 1. ಹಿಡಿಂಬನ ತೋಟ | ಶ್ರೀನಿವಾಸ ಉಡುಪ | ಪ್ರಸನ್ನಕುಮಾರ್ |
| 2. ಬೆಳಕು ಹಂಚಿದ ಬಾಲಕ | ಡಾ.ಆರ್.ವಿ. ಭಂಡಾರಿ | ಆರ್.ಕೆ. ಶಿವಕುಮಾರ್ |
| 3. ನಾನೂ ಗಾಂಧಿ ಆಗ್ತೇನೆ | ಡಾ.ಆರ್.ವಿ. ಭಂಡಾರಿ | ಆರ್.ಕೆ. ಶಿವಕುಮಾರ್ |
| 4. ರೆಕ್ಕೆಕಟ್ಟುವಿರಾ...? | ಬಿ. ಸುರೇಶ್ | ಆರ್.ಕೆ. ಶಿವಕುಮಾರ್ |
| 5. ಸ್ವಾಮಿ ಮತ್ತು ಅವನ ಸ್ನೇಹಿತರು | ಮೂಲ: ಆರ್.ಕೆ. ನಾರಾಯಣ್ ಅನು : ಎಚ್. ವೈ. ಶಾರದಾಪ್ರಸಾದ್ | ಆರ್.ಕೆ. ಶಿವಕುಮಾರ್ |
| 6. ಪುಷ್ಪರಾಣಿ | ಡಾ.ಚಂದ್ರಶೇಖರ ಕಂಬಾರ | ಆರ್.ಕೆ. ಶಿವಕುಮಾರ್ |
| 7. ಸೂರ್ಯ ಮತ್ತು ಕಮಲ | ಡಾ.ಶ್ರೀಪಾದ ಭಟ್ | ಆರ್.ಕೆ. ಶಿವಕುಮಾರ್ |
| 8. ಬೆಳಕಿನ ಕಡೆಗೆ | ಡಾ.ಆರ್.ವಿ. ಭಂಡಾರಿ | ಎಸ್.ಎಲ್. ಸಂತೋಷ್ |
| 9. ಶ್ಯಾಮನ ತಾಯಿ | ಮೂಲ: ಸಾನೇ ಗೂರೂಜಿ ಅನು : ಬಾಲಚಂದ್ರ ಘಾಣೇಕರ್ | ಎಸ್.ಎಲ್. ಸಂತೋಷ್ |

# ರಾಜ್ಯ ವೃತ್ತಿ ರಂಗಭೂಮಿ ಕಲಾವಿದರ ಸಂಘ ದಾವಣಗೆರೆ

● ಎ. ಭದ್ರಪ್ಪ, ಅಧ್ಯಕ್ಷರು

ಮೊದಲು ವೃತ್ತಿರಂಗಭೂಮಿ ಕಲಾವಿದರ ಒಕ್ಕೂಟವೆಂದಿದ್ದು 1999ರಲ್ಲಿ ರಾಜ್ಯ ವೃತ್ತಿ ರಂಗಭೂಮಿ ಕಲಾವಿದರ ಸಂಘವಾಗಿ ಪರಿವರ್ತನೆಗೊಂಡ ನಮ್ಮ ಸಂಘವು ರಂಗ ನಾಟಕಗಳಿಗೆ ಒತ್ತು ಕೊಡುವುದರೊಂದಿಗೆ, ಈ ಹಿಂದೆ 1996ರಲ್ಲಿ ಜರುಗಿಸಿದ ಕಲಾವಿದರ ಪ್ರಥಮ ಸಮ್ಮೇಳನದ ಹಿನ್ನೆಲೆಯಲ್ಲಿ ಸಂಘದ ಚಟುವಟಿಕೆಗಳನ್ನು ನಿರಂತರಗೊಳಿಸಿದೆ. ಸಮ್ಮೇಳನ ಸಂದರ್ಭದಲ್ಲಿ ಮಲ್ಲಿಕಾರ್ಜುನ ಕಡಕೋಳ ಅವರ ಸಂಪಾದಕತ್ವದಲ್ಲಿ ಪ್ರಕಟಗೊಂಡ ಐತಿಹಾಸಿಕ ನೆನಪಿನ ಪುಸ್ತಕ 'ರಂಗ ಬಾಸಿಂಗ' ವೃತ್ತಿರಂಗಭೂಮಿಯ ಚರಿತ್ರೆಯನ್ನೇ ಪ್ರತಿಬಿಂಬಿಸುತ್ತದೆ.



**ಡಾ. ರಾಜಕುಮಾರ್ ಅಪಹರಣ ವಿರೋಧಿಸಿ ಸಂಘದ ಪ್ರತಿಭಟನೆ**


ನಮ್ಮ ಸಂಘದ ವತಿಯಿಂದ ಮಹತ್ವದ ನಾಟಕಗಳನ್ನು ಪ್ರತಿ ವರುಷವೂ ಪ್ರದರ್ಶನಗೊಳಿಸುತ್ತಲೇ ಬಂದಿದ್ದೇವೆ. ಅವುಗಳಲ್ಲಿ ಮುಖ್ಯವಾಗಿ ರೇಣುಕಾ ಮಹಾತ್ಮೆ, ಹೇಮರೆಡ್ಡಿ ಮಲ್ಲಮ್ಮ, ಬಸ್‌ಕಂಡಕ್ಟರ್, ಧರ್ಮ ದೇವತೆ, ಚನ್ನಪ್ಪ ಚನಗೌಡ, ಮುದುಕನ ಮದುವೆ, ಮುಂಡೇಮಗ ಈ ಎಲ್ಲ ಮಹತ್ತರ ನಾಟಕಗಳು ಕನ್ನಡ ವೃತ್ತಿರಂಗ ಭೂಮಿಯ ಹೆಸರಾಂತ ನಾಟಕಗಳು. ಜತೆಗೆ ನಾಡು ನುಡಿಗೆ ಧಕ್ಕೆ ಬರುವ ಸಂದರ್ಭಗಳಲ್ಲಿ ಸಂಘಟನೆ ಬೀದಿಗಿಳಿದು ಹೋರಾಟ ಮಾಡಿದೆ. ಡಾ. ರಾಜ್‌ಕುಮಾರ್ ಅಪಹರಣ, ಕಾವೇರಿ ನೀರಿನ ಹಂಚಿಕೆ ಸಂದರ್ಭದಲ್ಲಿ ಸಂಘವು ಬೀದಿಗಿಳಿದು ಹೋರಾಟ ಮಾಡಿದೆ. ಸಂಕಷ್ಟದಲ್ಲಿರುವ ಕಲಾವಿದರ ನೆರವಿಗೂ ಧಾವಿಸುತ್ತದೆ. ಇತ್ತೀಚೆಗೆ ದಾವಣಗೆರೆ ಮಹಾನಗರಪಾಲಿಕೆ ಸಂಘಕ್ಕೆ ರಂಗಮಂದಿರ ನಿರ್ಮಾಣಕ್ಕಾಗಿ ನಿವೇಶನವನ್ನು ನೀಡಿರುವುದು ಸಂಘದ ಹೆಮ್ಮೆಯ ವಿಷಯ.

# ಧ್ವನಿವರ್ಧಕ –ರಂಗಸಜ್ಜಿಕೆ–ಬೆಳಕಿನ ಬೆರಗು

ದಾವಣಗೆರೆ ಶಹರಕ್ಕೆ ಜವಾರಿ ಸಂಸ್ಕೃತಿಯ ಸಂವೇದನಗಳಿವೆ. ಅರ್ಧ ಶತಮಾನದಷ್ಟು ಹಿಂದೆಯೇ ಸಂಗೀತಲೋಕದ ದಿಗ್ಗಜರಾದ ಡಿ.ಕೆ. ಪಟ್ಟಮ್ಮಾಳ್, ಬಾಲಮುರಳಿ ಕೃಷ್ಣ, ಪಂಡಿತ ಮಲ್ಲಿಕಾರ್ಜುನ ಮನ್ಸೂರ ಈ ಎಲ್ಲ ಧ್ರುವತಾರಾಲೋಕವೇ ಇಲ್ಲಿಗೆ ಬಂದು ಕಾರ್ಯಕ್ರಮ ನೀಡಿದಾಗೆಲ್ಲ ಕಾಯಿಪೇಟೆ ಅಡಿವೆಪ್ಪನವರ ಧ್ವನಿವರ್ಧಕಗಳೇ ಸೂಕ್ತ. ಆಗ ಈಗಿನಂತೆ ತಂತ್ರಜ್ಞಾನ ಇಲ್ಲದ ಕಾಲ. ಅಂತಹ ಕಾಲದಲ್ಲೇ ಅಡಿವೆಪ್ಪನವರ ಧ್ವನಿವರ್ಧಕಗಳು ಹಿಸ್ ಮಾಸ್ಟರ್ಸ್ ವೈಸ್ ಗುಣಮಟ್ಟದ್ದಾಗಿದ್ದವು. ಕೂದಲುದುರಿದರೂ ಸಪ್ಪಳ ಕೇಳಬೇಕು. ಈ ಮಾತನ್ನ ನನಗೆ ಹೇಳಿದವರು ಖ್ಯಾತ ಪತ್ರಕರ್ತ, ಲೇಖಕ ಬಿ.ವಿ. ವೈಕುಂಠರಾಜು.

*ಶ್ರೀ ಬನಶಂಕರಿ ಡ್ರಾಮಾ ಸೀನ್ಸ್, ದಾವಣಗೆರೆ*


ರಂಗ ಸಾಂಸ್ಕೃತಿಕ ಪರಂಪರೆಗೆ ಚ್ಯುತಿಬಾರದಂತೆ ಬಹಳೇ ವರುಷಗಳ ಕಾಲ ಈ ಊರಿನ ರಂಗಸಜ್ಜಿಕೆ ಸಮಗ್ರ ಪರಿಕರ ಸಂಪತ್ತು ಸಾಕ್ಷಾತುಗೊಂಡಿದೆ. ರಂಗಭೂಮಿ



ಬನಶಂಕರಿ ರಂಗಸಜ್ಜಿಕೆಯ ಅಪರೂಪದ ಜಂಗಲ್ ರಾಸ್ತಾ ಸೀನ್

ಸರ್ವಿಸ್‌ಗೆಂದೇ 20-4-1945ರಲ್ಲಿ ಕೆ. ಶಂಕರಾಚಾರ್ಯರು, ಶ್ರೀ ಬನಶಂಕರಿ ಡ್ರಾಮಾ ಸೀನ್ಸ್ ಸಂಸ್ಥೆ ಹುಟ್ಟು ಹಾಕುತ್ತಾರೆ. ಒಂದು ರಂಗನಾಟಕಕ್ಕೆ ಬೇಕಾಗುವ(ಪೌರಾಣಿಕ, ಐತಿಹಾಸಿಕ, ಸಾಮಾಜಿಕ ಇತ್ಯಾದಿ ಪ್ರಕಾರ) ಎಲ್ಲ ಬಗೆಯ ಅಂದರೆ ರಸ್ತಾಸೀನ್ಸ್, ಜಂಗಲ್‌ಸೀನ್ಸ್, ದರ್ಬಾರ್ ಸೀನ್ಸ್..... ಹೀಗೆ ತರಹೇವಾರಿ ದೃಶ್ಯಾವಳಿಗಳನ್ನು ತದ್ರೂಪುಗೊಳಿಸುವ, ಆಯಾದೃಶ್ಯಗಳಿಗೆ ತಕ್ಕುದಾದ ಬೆಳಕು, ಸಂಗೀತಕ್ಕೆ ತಕ್ಕನಾದ ಮನೋಭಾವನೆಗಳನ್ನು ಪ್ರೇಕ್ಷಕಪ್ರಭುವಿನಲ್ಲಿ ಹುಟ್ಟು ಹಾಕಬಲ್ಲ ಒಂದು ಚೆಂದನೆಯ ರಂಗ ವಾತಾವರಣ ನಿರ್ಮಿಸುವಲ್ಲಿ ಬನಶಂಕರಿ ಡ್ರಾಮಾ ಸೀನ್ಸ್ ಕೊಡುಗೆ ಅಪಾರ. ವಿಶೇಷವಾಗಿ ಗ್ರಾಮೀಣ ರಂಗಭೂಮಿಯೆನ್ನಬಹುದಾದ ಪ್ರತಿಹಳ್ಳಿಗಳಲ್ಲೂ ವರ್ಷಕ್ಕೊಮ್ಮೆ ಪ್ರದರ್ಶನಗೊಳ್ಳುವ ಕಂಪನಿ ಶೈಲಿಯ ನಾಟಕಗಳಿಗೆ ಇವರು ರಂಗ ಸಜ್ಜಿಕೆಗಳನ್ನು ಒದಗಿಸುತ್ತಾರೆ.

ಶಂಕರಾಚಾರ್ ನಿಧನದ ನಂತರ ಅವರ ಮಗ ಕೆ.ಎಸ್. ರಾಮಾಚಾರ್ ಕಾರ್ಯ ಮುಂದುವರೆಸಿದ್ದಾರೆ. ಒಂದು ಪರಿಪೂರ್ಣ ನಾಟಕಕ್ಕೆ ಬೇಕಾಗುವ ರಂಗಸಜ್ಜಿಕೆಗಳನ್ನು ಅಂದರೆ ಪರದೆ, ಸೈಡ್‌ವಿಂಗ್ಸ್, ವಿವಿಧ ಬಗೆ ಮನೆ ಪ್ಲಾಟು, ವ್ಯವಸ್ಥಿತ ಧ್ವನಿವರ್ಧಕ, ಲೈಟಿಂಗ್ಸ್, ಜನರೇಟರ್, ಸುತ್ತುಬಟ್ಟೆ, ಇತರೆ ಯಂತ್ರೋಪಕರಣ, ಮೇಕಪ್ ಎಲ್ಲವೂ ವ್ಯವಸ್ಥಿತವಾಗಿವೆ. ಈ ಎಲ್ಲ ಕೆಲಸಕ್ಕಾಗಿಯೇ, ತಿಪ್ಪೇಶ್, ಬಸವರಾಜ್, ಜ್ಯೋತಿವೀರಪ್ಪ, ಕೊಟ್ರೇಶ್, ಪರಮೇಶ್ವರಪ್ಪ ಎಂಬ ನೇಪಥ್ಯ ರಂಗಕರ್ಮಿಗಳು ಇದ್ದಾರೆ.




***ಶ್ರೀ ವಿನಾಯಕ ಡ್ರಾಮಾ ಸೀನ್ಸ್, ಸಪ್ಲೆಯರ್ಸ್, ದಾವಣಗೆರೆ.***

ತಿಪ್ಪೇಸ್ವಾಮಿ ಸೌಂಡ್ ಸಿಸ್ಟಂ ಎಂದರೆ ದಾವಣಗೆರೆ ಸುತ್ತಮುತ್ತ ತುಂಬಾ ಪ್ರಸಿದ್ಧಿ. ಪ್ರಧಾನಮಂತ್ರಿಗಳ ಕಾರ್ಯಕ್ರಮಗಳಿಗೂ ಅವರು ವ್ಯವಸ್ಥಿತವಾದ ಧ್ವನಿವರ್ಧಕಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸುವ ಗುಣಮಟ್ಟ ಇವರದು. ಕಳೆದ ಮೂವತ್ತು ವರುಷಗಳಿಂದ ವೃತ್ತಿ ನಾಟಕಗಳಿಗೆ ಸುಸಜ್ಜಿತವಾದ ರಂಗಸಜ್ಜಿಕೆಗಳನ್ನು ಪೂರೈಸುತ್ತಿರುವಲ್ಲಿ ಇವರದು ದೊಡ್ಡ ಹೆಸರು. ಇತ್ತೀಚೆಗೆ ಹೊಸ ಹೊಸ ಸೀನರಿಗಳನ್ನು ನುರಿತ ಕಲಾವಿದರಿಂದ ಸಿದ್ಧಗೊಳಿಸಿದ್ದಾರೆ. ಅವುಗಳಿಗೆ ಪರಂಪರೆಯ ಮೆರಗು ಇರುವುದು ಗಮನಾರ್ಹ.

ಜಿಲ್ಲೆಯ ಹೊರಗು ಇವರ ರಂಗಸಜ್ಜಿಕೆಗಳು ಪೂರೈಕೆಯಾಗುತ್ತವೆ. ಆರು ಮಂದಿ ನೇಪಥ್ಯ ರಂಗಕರ್ಮಿಗಳಿದ್ದಾರೆ. ಇವರ ಸಂಸ್ಥೆಯಲ್ಲಿ ದುಡಿದು ಹೋದ ಕೆಲವರು ಸ್ವತಂತ್ರವಾಗಿ ರಂಗಸಜ್ಜಿಕೆಗಳನ್ನು ನಿರ್ವಹಿಸುತ್ತಿದ್ದಾರೆ. ಅವರ ಸಂಸ್ಥೆಯಲ್ಲಿ ಒಂದು ಪರಿಪೂರ್ಣ ನಾಟಕಕ್ಕೆ ಬೇಕಾಗುವ ಅಂದರೆ ಮೇಕಪ್, ಬಣ್ಣಗಾರಿಕೆ, ವಿವಿಧ ದೃಶ್ಯಗಳಿಗೆ ಬೇಕಾಗುವ ಸಕಲ ರಂಗಪರಿಕರ, ಸೂಕ್ತ ಬೆಳಕು, ಧ್ವನಿವರ್ಧಕ ವ್ಯವಸ್ಥೆಗಾಗಿ ಪರಶುರಾಮ್, ಖಾದರ್, ಕೊಟ್ರೇಶ್, ತಿಪ್ಪೇಸ್ವಾಮಿ, ರಾಜು, ಹನುಮಂತಪ್ಪ ಎಂಬ ನೇಪಥ್ಯ ರಂಗಕರ್ಮಿಗಳಿದ್ದಾರೆ. ಮಾಲೀಕರಾದ ತಿಪ್ಪೇಶ್‌ರಾವ್ ಚವ್ಹಾಣ್ ಈ ಊರಿನ ರಾಜ್ಯ ವೃತ್ತಿರಂಗಭೂಮಿ ಕಲಾವಿದರ ಸಂಘದ ಗೌರವ ಅಧ್ಯಕ್ಷರಾಗಿದ್ದಾರೆ.

*ಶ್ರೀ ಮಲ್ಲಿಕಾರ್ಜುನ ಡ್ರಾಮಾ ಸೀನ್ಸ್ ದಾವಣಗೆರೆ.*



*ಮಲ್ಲಿಕಾರ್ಜುನ ಡ್ರಾಮಾ ಸೀನ್ಸ್‌ರವರ ಮಧ್ಯಮವರ್ಗದ ಮನೆಯ ದೃಶ್ಯ*

ಶ್ರೀ ಬನಶಂಕರಿ ಡ್ರಾಮಾ ಸೀನ್ಸ್ ಇದರಷ್ಟೇ ಹಳೆಯದಾದ ಸಂಸ್ಥೆ ಶ್ರೀ ಮಲ್ಲಿಕಾರ್ಜುನ ಡ್ರಾಮಾ ಸೀನ್ಸ್. ಇದರ ಮಾಲೀಕರಾದ ಶ್ರೀ ಎಚ್.ಎನ್. ಮಲ್ಲಿಕಾರ್ಜುನಸ್ವಾಮಿ ಅಕ್ಷರಶಃ ರಂಗಭೂಮಿಯ ಕಟ್ಟಾಳು. 1958ರಷ್ಟು ಹಿಂದೆಯೇ ಅವರು ಹಾಸನ ಜಿಲ್ಲೆಯಿಂದ ದಾವಣಗೆರೆಗೆ ಬರುತ್ತಾರೆ. ಅವರು ಡ್ರಾಮಾ ಸೀನ್ಸ್‌ಗಳಷ್ಟೇ ಇಟ್ಟುಕೊಳ್ಳದೇ ಅನಿವಾರ್ಯ ಪ್ರಸಂಗ ಬಂದಲ್ಲಿ ತಾವು ಪಾತ್ರ ಮಾಡಲು ಸಿದ್ಧವಾಗಿರುತ್ತಿದ್ದರು. ಹಾಗೆ ಅನೇಕ ಕಡೆ ಅಭಿನಯಿಸಿದ ನಿದರ್ಶನಗಳುಂಟು. ಜಿಲ್ಲೆಯಾದ್ಯಂತ ಮತ್ತು ಹೊರ ಜಿಲ್ಲೆಗಳಿಗೂ ಇವರ ರಂಗಸಜ್ಜಿಕೆಯ ರಂಗಸೇವೆ ಸಂದಾಯ.

ವಿಶೇಷವಾಗಿ ಪೌರಾಣಿಕ, ಐತಿಹಾಸಿಕ, ನಾಟಕಗಳಿಗೆ ಮುಖವಾಡಗಳನ್ನು ತಯಾರಿಸುವಲ್ಲಿ ಇವರು ನಿಪುಣರು, ಅಂತೆಯೇ ಇಂದಿಗೂ ಇವರ ಬಳಿ ಎಲ್ಲ

ಬಗೆಯ ನಾಟಕಗಳ ರಂಗಪರಿಕರಗಳು ಸಿಗುತ್ತವೆಂಬ ನಂಬಿಕೆ. ಎಂಬತ್ತೈದರ ಇಳಿ ವಯಸ್ಸಿನಲ್ಲಿ ಈ ಕಾಯಕವನ್ನು ಅತ್ಯಂತ ಶ್ರದ್ಧೆಯಿಂದ ಮುಂದುವರೆಸಿರುವ ಮಹತ್ವಾಕಾಂಕ್ಷೆಯ ಮಲ್ಲಿಕಾರ್ಜುನ ಸ್ವಾಮಿ ಆರ್ಥಿಕವಾಗಿ ಸಂಕಷ್ಟದಲ್ಲಿದ್ದಾರೆ. ವಿಶೇಷವಾಗಿ ವೃತ್ತಿರಂಗಭೂಮಿ ಚರಿತ್ರೆ ಅವರ ನಾಲಿಗೆ ಮೇಲೆ ಸದಾ ನಲಿದಾಡುತ್ತದೆ. ಅವರು ಪ್ರಸಾದನ ಕಲೆಯಲ್ಲಿ ನಿಷ್ಣಾತರು. ಸಿದ್ದೇಶ್, ರಾಜು, ಯೋಗರಾಜ, ಕುಮಾರ್, ನಾಗರಾಜ, ಶೇಖರ ಎಂಬ ನೇಪಥ್ಯ ರಂಗಕರ್ಮಿಗಳಿದ್ದಾರೆ. ಈಗ ಮಲ್ಲಿಕಾರ್ಜುನಸ್ವಾಮಿ ಅವರ ಮಗ ಎಚ್.ಎಂ. ಕುಮಾರಸ್ವಾಮಿ ಹೊಣೆ ಹೊತ್ತು ಕೊಂಡಿದ್ದಾರೆ. ಜಗಳೂರು, ಬಾನುವಳ್ಳಿ, ದಾವಣಗೆರೆ ಸೇರಿದಂತೆ 10 ರಂಗಸಜ್ಜಿಕೆಗಳಿವೆ.

# ಅಪರೂಪದ ರಂಗನಂಟು

● ಕಾಳೀಸುತೆ

ದಾವಣಗೆರೆ ಮಾತ್ರವಲ್ಲ ಸಮಗ್ರ ರಂಗಭೂಮಿ ಸಂದರ್ಭಕ್ಕೆ ಅಪರೂಪದ ರಂಗನಂಟು ಬೆಸೆಯಬಲ್ಲ ಸಂಗತಿಯೊಂದನ್ನು ದಾಖಲಿಸಬೇಕಿದೆ. ಕಳೆದ ನಲವತ್ತೈದು ವರುಷಗಳಿಂದ ದಾವಣಗೆರೆ ನಗರದಲ್ಲಿ ಮೀಸೆ ನಾಗಣ್ಣನೆಂದೇ ಪ್ರಖ್ಯಾತರಾದ ರಂಗಕರ್ಮಿಯೊಬ್ಬರನ್ನು ಈ ಪುಸ್ತಕಕ್ಕೆ ದಾಖಲಿಸದೇ ಹೋದರೆ ಅಪಚಾರವೆಸಗಿದ ಪಾಪಪ್ರಜ್ಞೆ ಭೂತವಾಗಿ ಈ ಪುಸ್ತಕದ ಲೇಖಕರಿಗೆ ಖಂಡಿತ ಶಾಪವಾಗಿ ಕಾಡುತ್ತದೆ.



ಸುರಪುರದ ವೆಂಕಟಪ್ಪ ನಾಯಕನಾಗಿ ಮೀಸೆ ನಾಗಣ್ಣ

ಒಂದು ಸುಂದರ ಪೌರಾಣಿಕ, ಐತಿಹಾಸಿಕ ನಾಟಕವೊಂದಕ್ಕೆ ಬೇಕಾಗುವ ರಂಗ ಸರಂಜಾಮುಗಳನ್ನು ತನ್ನ ಪುಟ್ಟ ಮನೆಯಲ್ಲಿ ಇಟ್ಟುಕೊಂಡಿರುವ ಇವರು ಹಾಕಿರುವ ಪಾತ್ರಗಳ ಲೆಕ್ಕವಿಟ್ಟವರಲ್ಲ. ಅಷ್ಟಕ್ಕೂ ಅಂತಹ ಲೆಕ್ಕ ದಾಖಲೆಗಳಿಗಾಗಿ ರಂಗಕೈಂಕರ್ಯ ಮಾಡಿದವರೂ ಅವರಲ್ಲ. ಅಂತಹ ಕೈಂಕರ್ಯಕ್ಕಾಗಿಯೇ ವರ್ಷಾನುಗಟ್ಟಲೇ ಗರಡಿ ಮನೆಗಳಿಗೆ ಹೋಗಿ ರಂಗ ತಾಲೀಮು ಮಾಡಿ ಬಂದವರು. ಸಿಂಧೂರ ಲಕ್ಷ್ಮಣ, ಕೃಷ್ಣದೇವರಾಯ, ರಾಜಾವೀರಮದಕರಿ ನಾಯಕ, ಸುರಪುರದ ವೆಂಕಟಪ್ಪ ನಾಯಕ, ಟಿಪ್ಪುಸುಲ್ತಾನ್, ಶಿವಾಜಿ, ಮಹಿಷಾಸುರ, ಬಸವಣ್ಣ, ರಾವಣ ಹೀಗೆ ಧಾರಣ ಮಾಡುವ

ಪ್ರಸಿದ್ಧ ಪುರುಷರ ಎಲ್ಲ ಚಾರಿಷ್ಮಾ, ಹಾವಭಾವ, ಶರೀರ ಮತ್ತು ಶಾರೀರಗಳ ತಾದಾತ್ಮ್ಯಗಳನ್ನು ಆಸಕ್ತಿ ಪೂರ್ಣವಾಗಿ ಅಭ್ಯಸಿಸಿ ಅದನ್ನು ತದ್ರೂಪುಗೊಳಿಸುವ ಅಪರೂಪದ ಪ್ರತಿಭಾವಂತ ಕಲಾವಿದ ಮೀಸೆ ನಾಗಣ್ಣ.

ಮೂಲತಃ ಹಿಂದಿನ ಧಾರವಾಡ ಜಿಲ್ಲೆ ಹಾನಗಲ್ ತಾಲ್ಲೂಕಿನ ಬೊಮ್ಮನಹಳ್ಳಿಯ ಈಶ್ವರಾಚಾರ್ ಭಾಗೀರಥಮ್ಮನವರ ಮಗನಾದ (1946 ಜನನ) ಬೊಮ್ಮನಹಳ್ಳಿ ನಾಗರಾಜ ಒಂದರ್ಥದಲ್ಲಿ ಬೊಮ್ಮನಹಳ್ಳಿ ಕಿಂದರಜೋಗಿ ಪರಂಪರೆಗೆ ಸೇರಿದವರು, ಇವರದು ಕಿಂದರಜೋಗಿ ಸ್ನೇಹಬಳಗ. ರಾಜ್ಯದ ಗಡಿದಾಟಿಯು ಗೆಳೆಯರ, ಕಲಾಭಿಮಾನಿಗಳ ಮಹಾಪೂರವೇ ಇದೆ.

ಹಾಗೆ ನೋಡಿದರೆ ಇವರ ರಂಗನಾಟಕ ಹಗಲು ಹೊತ್ತು ಜರುಗುವ ಸಂಚಾರಿ ರಂಗಭೂಮಿ. ಅದು ಹೆಸರಿಗಷ್ಟೇ ಸ್ತಬ್ಧಚಿತ್ರ, ವಾಸ್ತವವೆಂದರೆ ಪ್ರೊಸಿನಿಯಂ ಥಿಯೇಟರ್‌ನಲ್ಲಿಯ ಯಾವುದೇ ಹೀಮ್ಯಾನ್ ಖ್ಯಾತಿಯ ಕಲಾವಿದನಿಗೂ ಕಮ್ಮಿ ಇಲ್ಲದಂತೆ ಡೈಲಾಗ್ ಉಡಾಯಿಸುತ್ತಾರೆ. ಐವತ್ತು ಕೆ.ಜಿ. ಸರಪಳಿಯನ್ನು ಹೊತ್ತು ಹುಲಿಯಂತೆ ಗರ್ಜಿಸುತ್ತಾರೆ.

ಅವರ ಎಲ್ಲ ಪ್ರಹಸನಗಳು ಸಹಸ್ರಾರು ಜನಗಳನ್ನು ದೇಶಭಕ್ತಿ, ಕನ್ನಡಪ್ರೇಮ, ಮಾತೃಋಣ, ವೈರಿ ಸಂಹಾರ.... ಹೀಗೆ, ಮೃಣ್ಮಯ ಪ್ರೀತಿಗಳನ್ನು ಉದ್ದೀಪನಗೊಳಿಸುತ್ತವೆ. ಅವರೊಂದಿಗೆ ಹತ್ತಾರು ಕಲಾವಿದರು ತಾಸುಗಟ್ಟಲೇ ಸಾಕಾರಗೊಳ್ಳುತ್ತಾರೆ. ಹತ್ತಾರು ರಥಗಳಲ್ಲಿ ಅವರ ರಂಗಸೇವೆ ಸಾಕ್ಷಾತುಗೊಳ್ಳುತ್ತದೆ. ಕಿತ್ತೂರು ಚೆನ್ನಮ್ಮ, ಅಕ್ಕಮಹಾದೇವಿ ಒನಕೆ ಓಬವ್ವ ಸ್ತ್ರೀ ಪಾತ್ರದ ಕಲಾವಿದೆಯರು ಇದ್ದಾರೆ.

ಅಂತೆಯೇ ಡಾ. ರಾಜ್‌ಕುಮಾರ್ ಅವರು ಇವರ ತಂಡದ ರಂಗಕೈಂಕರ್ಯ ಕಂಡು ಉಮೇದುಗೊಂಡು ತಬ್ಬಿ ಮುದ್ದಾಡಿ ಗೌರವಿಸಿದ್ದಾರೆ. ವಯಸ್ಸು ಎಪ್ಪತ್ತರ ಅಂಚಿನಲ್ಲಿದ್ದರೂ ಅವರ ಉತ್ಸಾಹ ಕುಗ್ಗಿಲ್ಲ. ಅವರು ಮಾತ್ರವಲ್ಲ ಅವರ ತಂಡದ ಉತ್ಸಾಹಕ್ಕೆ ವಿರಾಮವಿಲ್ಲ. ದೂರದ ಊರುಗಳಿಂದ ಬರುವ ಆಮಂತ್ರಣಗಳನ್ನು ಯಾವುದೇ ಆರ್ಥಿಕ ಕರಾರುಗಳಿಲ್ಲದೇ "ರಂಗಸೇವೆ" ಎಂದೇ ಮನಸಾಕ್ಷಿಯಾಗಿ ಅಲ್ಲಿಗೆ ಹೋಗಿ ಮನಃಪೂರ್ವಕವಾಗಿ ಕಾರ್ಯಕ್ರಮ ನೀಡಿಬರುತ್ತಾರೆ. ಅರ್ಧ ಕರ್ನಾಟಕವನ್ನೇ ಸುತ್ತಿ ಬಂದ ಅವರು ಹೊರ ರಾಜ್ಯಗಳಲ್ಲೂ ಪ್ರದರ್ಶನ ನೀಡಿದ್ದಾರೆ. ನಾಗಣ್ಣ ಉತ್ತಮ ನೃತ್ಯ ಪಟುವೂ ಆಗಿದ್ದಾರೆ.

ಕಡುಬಡತನದಲ್ಲಿರುವ ಅವರಿಗೆ ಅಕಾಡೆಮಿ, ಸರ್ಕಾರ, ಸಂಘ ಸಂಸ್ಥೆಗಳು ನೀಡುವ ಗೌರವ, ಪ್ರಶಸ್ತಿಗಳಿಗಾಗಿ ತಾವು ಇದೆಲ್ಲ ಮಾಡುತ್ತೀರೆಂದು ಕೇಳಿದರೆ ಕೆಂಡಮಂಡಲವಾಗುವ ಮೀಸೆನಾಗಣ್ಣನನ್ನು, ಅವರ ರಂಗ ವಸ್ತು ಭಂಡಾರದ ಪರಿಕರ ಸಂಪತ್ತುಗಳನ್ನು ಈಗಲಾದರೂ ಗುರುತಿಸೋಣ. ಅರ್ಧಶತಮಾನದ ರಂಗಸೇವೆಗೆ ಅಭಿನಂದಿಸೋಣ.

# ದಾವಣಗೆರೆ ಜಿಲ್ಲೆಯ ಪ್ರಶಸ್ತಿ ಪುರಸ್ಕೃತ ರಂಗಕರ್ಮಿಗಳು

### *ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು*

1. ಡಾ. ಬಿ. ದೇವೇಂದ್ರಪ್ಪ ನ್ಯಾಮತಿ ಹೊನ್ನಾಳಿ (1962)
   (ಮೈಸೂರು ರಾಜರ ಆಸ್ಥಾನ ವಿದ್ವಾಂಸರಾಗಿದ್ದವರು).
2. ಪದ್ಮಶ್ರೀ ಚಿಂದೋಡಿ ಲೀಲಾ,
   ಗುಬ್ಬಿವೀರಣ್ಣ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು.

### *ಕರ್ನಾಟಕ ನಾಟಕ ಅಕಾಡೆಮಿ ಫೆಲೋಶಿಪ್ ಪುರಸ್ಕೃತರು*

1. ನಾಡೋಜ ಮುದೇನೂರ ಸಂಗಣ್ಣ ಚಿಗಟೇರಿ, ಹರಪನಹಳ್ಳಿ.
2. ಪ್ರೊ॥ ಎಸ್. ಹಾಲಪ್ಪ, ದಾವಣಗೆರೆ.
3. ಡಾ. ಎಂ.ಜಿ. ಈಶ್ವರಪ್ಪ, ದಾವಣಗೆರೆ.
4. ಪ್ರೊ॥ ಎಚ್.ಎಂ. ಚೆನ್ನಯ್ಯ, ಹೊನ್ನಾಳಿ.

### *ಕರ್ನಾಟಕ ನಾಟಕ ಅಕಾಡೆಮಿ ರಾಜ್ಯ ಪ್ರಶಸ್ತಿ ಪುರಸ್ಕೃತರು :*

1. ಎಚ್. ಮಹಬೂಬ ಅಲಿ, ದಾವಣಗೆರೆ.
2. ಕಂಚಿಕೇರಿ ಕೆ.ಬಿ. ಶಿವರಾಜ್, ದಾವಣಗೆರೆ.
3. ಎಚ್.ಟಿ. ಕಸ್ತೂರಮ್ಮ, ದಾವಣಗೆರೆ.
4. ಬನಹಟ್ಟಿ ವಾಸುದೇವ ಕೋಪರ್ಡೆ, ದಾವಣಗೆರೆ.
5. ಡಿ.ಬಿ. ಶಂಕರಪ್ಪ, ಹೊನ್ನಾಳಿ.
6. ಎಸ್. ವೀರಪ್ಪ ಬೇಲಿಮಲ್ಲೂರು, ಹೊನ್ನಾಳಿ.
7. ಕುಂದೂರು ಎಂ. ಶಿವಮೂರ್ತಯ್ಯ, ಹೊನ್ನಾಳಿ.
8. ಆರ್.ಟಿ. ರಮಾ, ದಾವಣಗೆರೆ.
9. ಶಿರಗಂಬಿ ರುದ್ರಪ್ಪ, ದಾವಣಗೆರೆ.
10. ಬಿ.ಎನ್. ಬ್ರಹ್ಮಾಚಾರ್ಯ, ದಾವಣಗೆರೆ.
11. ಗುಡಿಹಳ್ಳಿ ನಾಗರಾಜ, ಹರಪನಹಳ್ಳಿ.
12. ಚಿಂದೋಡಿ ಶಂಭುಲಿಂಗಪ್ಪ, ದಾವಣಗೆರೆ.
13. ಬಾ.ಮ. ಬಸವರಾಜಯ್ಯ, ದಾವಣಗೆರೆ.
14. ಮಂಜುನಾಥ ಬೆಳಕೆರೆ, ಹರಿಹರ.
15. ಎಸ್.ಎಸ್. ಸಿದ್ದರಾಜು, ದಾವಣಗೆರೆ.

16. ಡಾ॥ ಕೆ.ಎಚ್. ಪಂಚಾಕ್ಷರಪ್ಪ, ದಾವಣಗೆರೆ.
17. ಬಿ. ಪರಶುರಾಮ್, ಹರಪನಹಳ್ಳಿ
18. ಚಿಂದೋಡಿ ಶ್ರೀ ಕಂಠೇಶ್, ದಾವಣಗೆರೆ.
19. ಕೆ.ಬಿ. ಮಂಜುನಾಥ, ದಾವಣಗೆರೆ.
20. ಮಲ್ಲಿಕಾರ್ಜುನ ಕಡಕೋಳ, ದಾವಣಗೆರೆ.
21. ಸೋಗಿ ರತ್ನ, ಹರಪನಹಳ್ಳಿ

*ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು :*

1. ಮುದೇನೂರ ಸಂಗಣ್ಣ (ಜಾನಪದ ರಂಗಭೂಮಿ)
2. ಚಿಂದೋಡಿ ಲೀಲಾ (ವೃತ್ತಿ ರಂಗಭೂಮಿ)
3. ಚಿಂದೋಡಿ ಸಣ್ಣ ಕರಿಬಸವರಾಜ್ (ವೃತ್ತಿ ರಂಗಭೂಮಿ)
4. ಚಿಂದೋಡಿ ಶಾಂತರಾಜ್ (ವೃತ್ತಿ ರಂಗಭೂಮಿ)
5. ಚಿಂದೋಡಿ ಬಂಗಾರೇಶ (ವೃತ್ತಿ ರಂಗಭೂಮಿ)
6. ಗುಡಿಹಳ್ಳಿ ನಾಗರಾಜ (ಪತ್ರಿಕೋದ್ಯಮ)

*ವೃತ್ತಿರಂಗ – ನೃತ್ಯಗಾರ್ತಿಯರು :*

1. ಜಿ. ಗೀತಾ
2. ಜಿ. ಕವಿತಾ
3. ಜಿ. ಲೀಲಾ
4. ಆರ್.ವಿ. ಮಂಜುಳ
5. ಆರ್.ವಿ. ಗುಣವತಿ
6. ಬಿ. ಮಂಜುಳ
7. ಬಿ. ಸುಜಾತಾ
8. ಆರ್. ಅಮೃತವರ್ಷಿಣಿ
9. ರಶ್ಮಿ
10. ಕುಸುಮಾ
11. ಕಾವ್ಯಶ್ರೀ

************



# ದಾವಣಗೆರೆ ಜಿಲ್ಲೆಯ ರಂಗಶಿಕ್ಷಣ ಪಡೆದ ರಂಗಕರ್ಮಿಗಳು

## *ದೆಹಲಿಯ 'ಎನ್.ಎಸ್.ಡಿ.' ಪದವಿ ಪಡೆದವರು*

1. ಎಸ್. ಸುರೇಂದ್ರನಾಥ್, ದಾವಣಗೆರೆ.

## *ಹೆಗ್ಗೋಡು 'ನೀನಾಸಂ' ರಂಗ ಶಿಕ್ಷಣ ಪಡೆದವರು*

1. ಎಚ್.ಸಿ. ಚಿದಾನಂದಮೂರ್ತಿ, ಹೊನ್ನಾಳಿ. – 1982–83
2. ಎಚ್.ಎಸ್. ಸಿದ್ದರಾಜು, ಹೊನ್ನಾಳಿ. – 1982–83
3. ಶಶಿಕಲಾ ಬಿ.ಎನ್. ದಾವಣಗೆರೆ. – 1983–84
4. ಮಂಜುನಾಥ, ಹರಿಹರ. – 1983–84
5. ಮಂಜುನಾಥ ಪಟೇಲ್, ಚೀಲೂರು, ಹೊನ್ನಾಳಿ – 1985–86
6. ಎಂ. ಮಹಾಲಿಂಗಯ್ಯ, ದಾವಣಗೆರೆ. – 1985–86
7. ಎ.ಎಂ. ಶಿವಕುಮಾರ್ ಬಸವಾಪಟ್ಟಣ, ಚನ್ನಗಿರಿ – 1987–88
8. ಟಿ. ರಂಗನಾಥ, ಹರಿಹರ. – 1988–89
9. ಶ್ರೀಧರಾಚಾರ್, ಹೊನ್ನಾಳಿ. – 1989–90
10. ಎಸ್.ಡಿ. ಶೈಲಶ್ರೀ ಬಿಳಿಚೋಡು, ಜಗಳೂರು – 1990–91
11. ಎಚ್.ಬಿ. ಕಲ್ಲೇಶ್ವರ, ಚನ್ನಗಿರಿ. – 1991–92
12. ಗೋಣಿಬಸವೇಶ್ವರ ಹೊಸಮನಿ, ಹರಪನಹಳ್ಳಿ. – 1992–93
13. ಭುವನೇಶ್ವರಿ ಎಸ್.ಡಿ. ಬಿಳಿಚೋಡು, ಜಗಳೂರು. – 1993–94
14. ಗಣೇಶಯ್ಯ ಕೆ.ಪಿ.ಎಂ. ಚನ್ನಗಿರಿ – 1993–94
15. ಸಿದ್ಧರಾಜು ಎಸ್.ಎಸ್. ದಾವಣಗೆರೆ. – 1993–94
16. ಚಿತ್ರಮ್ಮ ಎ.ಕೆ. (ಅನಿತಾ) ಚನ್ನಗಿರಿ. – 1994–95
17. ಎಸ್.ಡಿ. ರಾಮೇಶ್ವರಾನಂದಸ್ವಾಮಿ ಬಿಳಿಚೋಡು – 1995–96
18. ಎಂ.ಜಿ. ನಾಗರಾಜ ಅತ್ತಿಗೆರೆ, ದಾವಣಗೆರೆ. – 1996–97
19. ರುದ್ರಪ್ಪ ಎಸ್.ಬಿ. ಹೊನ್ನಾಳಿ. – 1997–98
20. ಹನುಮಂತಪ್ಪ ಡಿ.ಸಿ., ಅಣ್ಣಾಪುರ, ದಾವಣಗೆರೆ – 2001–02
21. ಸಂದೀಪ ಎಸ್.ಆರ್. ಮಲೆಬೆನ್ನೂರು, ಹರಿಹರ – 2001–02
22. ಶ್ರೀಕಾಂತ ಎನ್.ವಿ., ದಾವಣಗೆರೆ. – 2001–02
23. ವೀರೇಶ್ ಎಂ.ಪಿ.ಎಂ., ದಾವಣಗೆರೆ. – 2002–03
24. ವೆಂಕಟೇಶ್ವರ ಕೆ. ಚನ್ನಗಿರಿ. – 2004–05
25. ಎನ್. ಶಶಿಕಲಾ ಬೆಳಲಗೆರೆ, ಚನ್ನಗಿರಿ – 2008–09
26. ಪ್ರಜ್ಞಾ, ದಾವಣಗೆರೆ – 2013–14

## ಸಾಣೇಹಳ್ಳಿ ಶಿವಕುಮಾರ 'ರಂಗ ಪ್ರಯೋಗ ಶಾಲೆ' ಶಿಕ್ಷಣ ಪಡೆದವರು

1. ಪರಶುರಾಂ ಹೊನ್ನಾಳಿ.
2. ಮಧು ಕ್ಯಾತನಹಳ್ಳಿ, ದಾವಣಗೆರೆ.
3. ಶಿಲ್ಪಾ ಕ್ಯಾತನಹಳ್ಳಿ, ದಾವಣಗೆರೆ.
4. ಜಯಶೀಲಾ ಕ್ಯಾತನಹಳ್ಳಿ, ದಾವಣಗೆರೆ.
5. ಪವಿತ್ರಾ ಬಸವಾಪಟ್ಟಣ, ಚನ್ನಗಿರಿ. (ಕೊನೆಯ ಇಬ್ಬರು ತರಬೇತಿ ಪಡೆಯುತ್ತಿದ್ದಾರೆ.)
6. ಕುಮಾರ್, ದಾವಣಗೆರೆ.
7. ರಾಜಪ್ಪ ಬಿ. ಲಕ್ಕಮುತ್ತೇನಹಳ್ಳಿ
8. ಮಂಜುನಾಥ ಹರಪನಹಳ್ಳಿ
9. ಭೀಮೇಶ್ ದಾವಣಗೆರೆ

## ದಾವಣಗೆರೆ ಜಿಲ್ಲೆಯಲ್ಲಿ ರಂಗಭೂಮಿ ಕುರಿತು ಪಿಎಚ್.ಡಿ. ಮಾಡಿದವರು

1. ಡಾ. ಎನ್. ಸುಧೀಂದ್ರ, ಚನ್ನಗಿರಿ.
   ವಿಷಯ : ಕನ್ನಡ ರೇಡಿಯೋ ನಾಟಕಗಳು
   ಕುವೆಂಪು ವಿ.ವಿ. ಶಿವಮೊಗ್ಗ.
   ಇಸವಿ : 1988 ಮಾರ್ಗದರ್ಶಕರು : ಡಾ. ಶ್ರೀಕಂಠ ಕೂಡಿಗೆ
2. ಡಾ. ಜಿ.ವಿ. ಚನ್ನೇಶ್ ಹೊನ್ನಾಳಿ
   ವಿಷಯ : ಕನ್ನಡ ಸಂಸ್ಕೃತಿ, ಸಾಹಿತ್ಯ ಮತ್ತು ಕೆ.ವಿ. ಸುಬ್ಬಣ್ಣ
   ಕುವೆಂಪು. ವಿ.ವಿ. ಶಿವಮೊಗ್ಗ.
   ಇಸವಿ : 2006 ಮಾರ್ಗದರ್ಶಕರು : ಡಾ. ಶ್ರೀಕಂಠ ಕೂಡಿಗೆ
3. ಡಾ. ಸಾಸ್ವೇಹಳ್ಳಿ ಸತೀಶ್, ಹೊನ್ನಾಳಿ
   ವಿಷಯ : ಗಿರೀಶ್ ಕಾರ್ನಾಡರ ನಾಟಕಗಳು
   ಇಸವಿ : 2008 ಕುವೆಂಪು ವಿ.ವಿ. ಶಿವಮೊಗ್ಗ
   ಮಾರ್ಗದರ್ಶಕರು : ಡಾ. ಕುಮಾರ ಚಲ್ಯ
4. ಡಾ. ಮಂಜುಶ್ರೀ ಎಂ. ಕಡಕೋಳ
   ವಿಷಯ : ದಾವಣಗೆರೆ ಪರಿಸರದ ವೃತ್ತಿರಂಗಭೂಮಿ
   ಇಸವಿ : 2013 ಕುವೆಂಪು ವಿ.ವಿ. ಶಿವಮೊಗ್ಗ
   ಮಾರ್ಗದರ್ಶಕರು : ಡಾ. ರಂಗರಾಜ ವನದುರ್ಗ

# ದಾವಣಗೆರೆ ನಗರವಾಸಿ ವೃತ್ತಿ ರಂಗಭೂಮಿ ಕಲಾವಿದರು

| | |
|---|---|
| ಕಂಚಿಕೇರಿ ಶಿವಣ್ಣ | ಕೆ.ಬಿ. ಮಂಜುನಾಥ |
| ಕೆ.ಎಸ್. ನಟರಾಜ | ಕೆ.ಎಸ್. ಕೊಟ್ರೇಶ್ |
| ಕೆ.ಎಸ್. ಮಲ್ಲಿಕಾರ್ಜುನ | ಮೌಲಾಸಾಬ |
| ಕೊಡಗನೂರು ಜಯಕುಮಾರ್ | ರಾಜೇಶ್ವರಿ ಮಂಜುನಾಥ |
| ಕೆ. ವೀರಯ್ಯಸ್ವಾಮಿ | ಎಂ. ಷಣ್ಮುಖಯ್ಯಸ್ವಾಮಿ |
| ಹೆಚ್. ಮಹಬೂಬ ಅಲಿ | ಎಲ್.ಎಂ. ಹಾಲಯ್ಯಸ್ವಾಮಿ |
| ಜಿ. ರಮೇಶ್ | ಸಾವಿತ್ರಮ್ಮ |
| ರತ್ನಮ್ಮ | ಪುಷ್ಪಾ, ಜಯಲಕ್ಷ್ಮಿ ಹೆಗಡೆ |
| ಭಾರತಿ, ಕಲ್ಪನಾ, ವಿನಾಯಕ, ಸುರೇಶ್ | ಮನೂಬಾಯಿ, ಆಮ್ಲೆಟ್ |
| ಶಶಿಕಲಾ, ಟಿ. ತಿಪ್ಪೇಸ್ವಾಮಿ ಮೈಸೂರು | ಸತ್ಯನಾರಾಯಣ |
| ಜಿ. ಮಂಜುಳ | ನಾಗವೇಣಿ, ಗೀತಾ ಜಿ. |
| ಲತಾಶ್ರೀ | ಮೀನಾಕ್ಷಿ, ಆರ್.ವಿ. ಮಂಜುಳ |
| ಪಾರ್ವತಮ್ಮ | ಬಿ.ಓ. ವಿಜಯಲಕ್ಷ್ಮೀ |
| ಜಯಮ್ಮ ನಿಡಗುಂದಿ | ಎಸ್. ಮಂಜುಳ |
| ಕೆ. ಮಂಜುಳ | ಜ್ಯೋತಿಕಲಾ |
| ಮನೋರಮಾ | ಬಸವನಗೌಡ ನೀಲಗುಂದ |
| ಸಾವಿತ್ರಮ್ಮ | ಮಂಜುಳ |
| ಸುಜಾತ | ಶಾಂತಕುಮಾರಿ |
| ಪಿ. ಚಂದ್ರಶೇಖರ | ಕಾಶೀಬಾಯಿ |
| ಸುಕನ್ಯಾ | ಪ್ರೇಮಾ |
| ಸರೋಜ | ನ್ಯಾಮತಿ ಬಸವರಾಜಪ್ಪ |
| ಮೀನಾಕುಮಾರಿ | ನ್ಯಾಮತಿ ಅನ್ನಪೂರ್ಣಮ್ಮ |
| ಸೌಮ್ಯಶ್ರೀ | ಉಮಾಶ್ರೀ ಬಿ. |
| ಕೆ. ಲೋಕೇಶ್ | ಯಶೋಧಾ.ಕೆ. ಲೋಕೇಶ್ |
| ವಿಜಯಶ್ರೀ | ವೆಂಕಟೇಶ್ |
| ಸನಾತನಿ (ಲಕ್ಷ್ಮಿ ಜೋಷಿ) | ಗೌಡ್ರ ಜಯಣ್ಣ |
| ಆರ್.ಜಿ. ಗೌರಿಶಂಕರ (ಮಾಹಿತಿದಾರ) | ಶ್ರೀಕಂಠಮೂರ್ತಿ (ಮಾಹಿತಿದಾರ) |

(ಚಿಂದೋಡಿ ಕುಟುಂಬದಲ್ಲೇ ಸುಮಾರು 50 ಮಂದಿ ಕಲಾವಿದರಿದ್ದಾರೆ.)

ಮಾಹಿತಿ ಸಂಗ್ರಹ : ಕಂಚಿಕೇರಿ ಶಿವಣ್ಣ

# ದಾವಣಗೆರೆ ಜಿಲ್ಲೆಯ ನಾಟಕಕಾರರು

1. ಕೋಲಶಾಂತಪ್ಪ ದಾವಣಗೆರೆ. (ಪ್ರಥಮ ಸಾಮಾಜಿಕ ವೃತ್ತಿ ನಾಟಕಕಾರ)
2. ಬೀಚಿ (ರೇಡಿಯೋ ನಾಟಕ), ಹರಪನಹಳ್ಳಿ.
3. ಬಿ. ಓಬಳೇಶ್ ಬಿದರಕೆರೆ ಜಗಳೂರು
4. ಚಿಂದೋಡಿ ವೀರಪ್ಪ, ದಾವಣಗೆರೆ.
5. ನಾಡೋಜ ಮುದೇನೂರ ಸಂಗಣ್ಣ ಚಿಗಟೇರಿ, ಹರಪನಹಳ್ಳಿ.
6. ಎಸ್.ಎನ್. ರಂಗಸ್ವಾಮಿ ಕಬ್ಬಳ, ಚನ್ನಗಿರಿ.
7. ಬಿದರಹಳ್ಳಿ ನರಸಿಂಹಮೂರ್ತಿ, ಹೊನ್ನಾಳಿ.
8. ಪ್ರೊ|| ಶ್ರೀನಿವಾಸ ಸುತ್ರಾವೆ, ದಾವಣಗೆರೆ.
9. ಎಸ್. ಚಿದಾನಂದಪ್ಪ, ದಾವಣಗೆರೆ.
10. ಡಾ|| ಎ. ಶಿವನಗೌಡ ಕಡಬಗೇರಿ, ಹರಪನಹಳ್ಳಿ.
11. ಮಂಜುನಾಥ ಬೆಳಕೆರೆ, ಹರಿಹರ.
12. ಆನಂದ ಋಗ್ವೇದಿ, ದಾವಣಗೆರೆ.
13. ಪ್ರೇಮ್‌ಕುಮಾರ್, ಭಂಡಿಗಡಿ, ಹೊನ್ನಾಳಿ.
14. ಎಚ್.ಸಿ. ಚಿದಾನಂದಮೂರ್ತಿ, ಹೊನ್ನಾಳಿ.
15. ಬಸವನಗೌಡ ನೀಲಗುಂದ, ದಾವಣಗೆರೆ.
16. ಚಂದ್ರಶೇಖರ್ ಬೀಳಗಿ, ದಾವಣಗೆರೆ.
17. ಎಚ್. ನೀಲಪ್ಪ, ಸಂತೆಬೆನ್ನೂರು, ಚನ್ನಗಿರಿ.
18. ಎಚ್.ಎಂ. ವೀರಭದ್ರಯ್ಯ, ಹರಪನಹಳ್ಳಿ.
19. ಹಾರಾಳು ಕೊಟ್ರಪ್ಪ, ಬಾಗಳಿ, ಹರಪನಹಳ್ಳಿ.
20. ಪ್ರಕಾಶ್ ಕಂಬತ್ತಹಳ್ಳಿ, ಹರಪನಹಳ್ಳಿ.
21. ಡಾ. ಲೋಕೇಶ್ ಅಗಸನಕಟ್ಟೆ, ದಾವಣಗೆರೆ.
22. ಬಾ.ಮ. ಬಸವರಾಜಯ್ಯ, ದಾವಣಗೆರೆ.
23. ಶಿವಕುಮಾರ ಸ್ವಾಮಿ ಕುರ್ಕಿ, ದಾವಣಗೆರೆ.
24. ಪಿ.ಬಿ. ಸಾಲಿಮನಿ, ಮಾಗಾನಹಳ್ಳಿ, ದಾವಣಗೆರೆ.
25. ಬಿ.ಪಿ. ಯಮನೂರ್‌ಸಾಬ್, ಬೆಣ್ಣೆಹಳ್ಳಿ, ಹರಪನಹಳ್ಳಿ.
26. ಎ. ಬಸವರಾಜಪ್ಪ ಭಾನುವಳ್ಳಿ, ಹರಿಹರ.
27. ಮಲ್ಲಿಕಾರ್ಜುನ ತುರ್ಚಘಟ್ಟ, ದಾವಣಗೆರೆ.
28. ಪುಟ್ಟಪ್ಪ ಬಿ. ಹಲಗೇರಿ, ಹರಿಹರ.
29. ಚಂದ್ರಶೇಖರ ಹಡಗಲಿಮಠ, ಹರಿಹರ.

30. ಎಂ.ಪಿ.ಎಂ. ಷಣ್ಮುಖಯ್ಯ, ಹೊನ್ನಾಳಿ.
31. ಜಡೇನಾಗರಾಜರಾವ್, ಹರಿಹರ.
32. ದಾಗಿನಕಟ್ಟೆ ನಾಗೇಂದ್ರಪ್ಪ, ಚನ್ನಗಿರಿ.
33. ಕಮಲಮ್ಮ ನ್ಯಾಮತಿ ಶಾಂತಪ್ಪ, ದಾವಣಗೆರೆ.
34. ಡಾ॥ ಹೆಚ್.ಎಸ್. ವೆಂಕಟೇಶಮೂರ್ತಿ, ಚನ್ನಗಿರಿ.

***ದಾವಣಗೆರೆ ತಾಲ್ಲೂಕ್ ರಂಗಸಂಗೀತ ಕಲಾವಿದರು***

*ಹಾರ್ಮೋನಿಯಂ :*

ಡಿ. ಗಂಗಾಧರಪ್ಪ, ಜರೀಕಟ್ಟೆ, ಡಿ.ಜಿ. ಮಾರುತೇಶ, ಜರೀಕಟ್ಟೆ,
ವೀರಭದ್ರಾಚಾರ್, ನಿಟುವಳ್ಳಿ, ಬಸವಲಿಂಗಯ್ಯ ಹಿರೇಮಠ
ನೇತಾಜಿ ಆಲೂರಹಟ್ಟಿ, ಜ್ಞಾನವೇಂದ್ರಾಚಾರ್ ಪುಟಗನಾಳು
ಕ್ರಿಸ್ತಾನಂದ, ದಾವಣಗೆರೆ. ಬಸವನಗೌಡ ನೀಲಗುಂದ, ದಾವಣಗೆರೆ.
ಇಂದೂಧರಯ್ಯ ಹಿರೇಮಠ, ದಾವಣಗೆರೆ. ಟಿ.ಎಚ್.ಎಂ. ಶಿವಕುಮಾರ, ದಾವಣಗೆರೆ.
ಸಿ. ಅಂಬರೀಶ್ ಶಾಮನೂರು. ಮಲ್ಲೇಶ್, ಗುಡದಯ್ಯ, ರವಿ, ಜೀವನ್.

*ತಬಲಾ :*

ಆರ್. ಶಂಕರ್ ಬಳ್ಳಾರಿ ಆರ್. ಚಂದ್ರು ಬಳ್ಳಾರಿ. ಪಿ. ಚಂದ್ರಶೇಖರ.
ಭರ್ಮೋಜಿ ಜೇಸುದಾಸ ತಿಪ್ಪೇಸ್ವಾಮಿ ಹದಡಿ

*ದಿಲ್‌ರುಬಾ :* ಬಿ.ಪಿ. ಯಮುನೂರ್ ಸಾಬ್. *ಕ್ಲಾರಿಯೊನೇಟ್ :* ದಿ॥ ಬಕ್ಕೇಶ್

*ದಾವಣಗೆರೆ ಜಿಲ್ಲಾ ಕನ್ನಡ ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು :*

| | | |
|---|---|---|
| 1. | ಎಸ್. ಮಂಜಪ್ಪ | 1998–99 |
| 2. | ಟಿ. ಮೂರ್ತೆಪ್ಪ | 1999–99 |
| 3. | ಬಿ. ನೀಲಮ್ಮ | 1999–2009 |
| 4. | ಟಿ. ಮೂರ್ತೆಪ್ಪ | 2009–2012 |
| 5. | ಎಸ್.ಹೆಚ್. ಶಿವರುದ್ರಪ್ಪ | 2012– |

# ದಾವಣಗೆರೆ ಜಿಲ್ಲೆಯ ನಾಟಕ ಪ್ರದರ್ಶನದ ರಂಗಮಂದಿರಗಳು

ದಾವಣಗೆರೆ ನಗರ :

1) ಸುನಂದ ರಂಗ ಮಂಟಪ
2) ಚನ್ನಗಿರಿ ರಾಧಮ್ಮರಂಗಪ್ಪ ಬಯಲುರಂಗಮಂದಿರ, ಮಹಾನಗರಪಾಲಿಕೆ.
3) ನಾಟ್ಯಾಚಾರ್ಯ ಶ್ರೀನಿವಾಸ ಕುಲಕರ್ಣಿ ಬಯಲುರಂಗಮಂದಿರ.
4) ಬಾಪೂಜಿ ಆಡಿಟೋರಿಯಂ.
5) ಗುಂಡಿಮಹದೇವಪ್ಪ ಕಲ್ಯಾಣ ಮಂಟಪ.
6) ತ್ರಿಶೂಲ ಕಲಾಭವನ.
7) ರಾಜಾ ಮದಕರಿನಾಯಕ ಬಯಲು ರಂಗಮಂದಿರ.
8) ವನಿತಾ ಸಮಾಜ ಬಯಲು ರಂಗಮಂದಿರ.
9) ಪದ್ಮಶ್ರೀ ಚಿಂದೋಡಿಲೀಲಾ ಕಲಾಕ್ಷೇತ್ರ.
10) ಸರಕಾರಿ ಪ್ರೌಢಶಾಲೆ ಮೈದಾನದ ಬಯಲು ರಂಗಮಂದಿರ.
11) ಕಸ್ತೂರ್‌ಬಾ ಸಭಾಮಂಟಪ.
12) ಎ.ವಿ.ಕೆ. ಕಾಲೇಜು ಸಭಾಂಗಣ
13) ಕುವೆಂಪು ಕನ್ನಡಭವನ
14) ಚನ್ನಗಿರಿ ವಿರೂಪಾಕ್ಷಪ್ಪ ಕಲ್ಯಾಣ ಮಂಟಪ

(ದಾವಣಗೆರೆಯ ಅನೇಕ ಶಾಲಾ-ಕಾಲೇಜುಗಳಲ್ಲಿ ಸಭಾಂಗಣ, ಬಯಲು ರಂಗ ಮಂಟಪಗಳಿವೆ.)

ದಾವಣಗೆರೆ ತಾಲ್ಲೂಕು ಮಾಯಕೊಂಡ, ನೇರ್ಲಿಗೆ, ಆನಗೋಡು, ಅಣಜಿ, ಅರಸಾಪುರ, ಹದಡಿ, ದೊಡ್ಡಬಾತಿ, ಶಾಮನೂರು, ನಾಗನೂರು ಮುಂತಾದ ಕಡೆ ಬಯಲು ರಂಗ ಮಂದಿರಗಳಿವೆ.

ಹರಪನಹಳ್ಳಿ ತಾಲ್ಲೂಕು :

1) ಶ್ರೀ ನಟರಾಜ ಕಲಾಭವನ ಹರಪನಹಳ್ಳಿ.
2) ಬೀಚಿ ಬಯಲು ರಂಗಮಂದಿರ ಕಣಿವೆಹಳ್ಳಿ.
3) ಕನಕೇಶ್ವರ ಯುವಕ ರೈತ ಕಲಾ ಮಂಡಳಿ ಬಯಲು ರಂಗಮಂದಿರ, ಬಾಗಳಿ.
4) ಗ್ರಾಮ ಪಂಚಾಯ್ತಿ ಬಯಲು ರಂಗಮಂಟಪ, ಮೈದೂರು
5) ಗ್ರಾಮ ಪಂಚಾಯ್ತಿ ಬಯಲು ರಂಗಮಂದಿರ, ಹಲವಾಗಲು.
6) ನಾರದಮುನಿ ಬಯಲು ರಂಗಮಂಟಪ, ಚಿಗಟೇರಿ.
7) ಗ್ರಾಮ ಪಂಚಾಯ್ತಿ ಬಯಲು ರಂಗಮಂಟಪ, ಹಾರಕನಾಳು.

8) ಗ್ರಾಮ ಪಂಚಾಯ್ತಿ ಬಯಲು ರಂಗಮಂಟಪ, ಕಂಬತ್ತಹಳ್ಳಿ.
9) ಗ್ರಾಮ ಪಂಚಾಯ್ತಿ ಬಯಲು ರಂಗಮಂಟಪ, ದುಗ್ಗತ್ತಿ.

*ಹೊನ್ನಾಳಿ ತಾಲ್ಲೂಕು :*

1) ಕನಕದಾಸ ಬಯಲು ರಂಗಮಂದಿರ, ಹೊನ್ನಾಳಿ.
2) ಪಿ. ಲಂಕೇಶ್ ಬಯಲು ರಂಗಮಂದಿರ, ಕತ್ತಿಗೆ.
3) ಚನ್ನಪ್ಪಸ್ವಾಮಿ ಸಮುದಾಯ ಭವನ, ಹೊನ್ನಾಳಿ.

*ಚನ್ನಗಿರಿ ತಾಲ್ಲೂಕು :*

1) ಚನ್ನಮ್ಮಾಜಿ ರಂಗಮಂದಿರ, ಚನ್ನಗಿರಿ.
2) ವಿಜಯಕಲಾ ಬಯಲು ರಂಗಮಂದಿರ, ಸಂತೇಬೆನ್ನೂರು.

*ಹರಿಹರ ತಾಲ್ಲೂಕು :*

1) ಶಿಕ್ಷಕರ ಸಮುದಾಯಭವನ, ಹರಿಹರ.
2) ಮೈ ಕ್ಲಬ್ ಬಯಲು ರಂಗಮಂಟಪ, ಹರಿಹರ.

*ಜಗಳೂರು ತಾಲ್ಲೂಕು :*

1) ಕಲಾ ಭಾರತಿ ಬಯಲು ರಂಗಮಂದಿರ, ಜಗಳೂರು.

ಜಿಲ್ಲೆಯ ಬಹುತೇಕ ಗ್ರಾಮ ಪಂಚಾಯ್ತಿ ಹಾಗೂ ಹೋಬಳಿ ಕೇಂದ್ರಗಳಲ್ಲಿ ಬಯಲು ರಂಗಮಂಟಪಗಳಿವೆ.

*ದಾವಣಗೆರೆ ಜಿಲ್ಲೆಯ ರಂಗವಿಮರ್ಶಕರು :*

ಗುಡಿಹಳ್ಳಿ ನಾಗರಾಜ
ಚಂದ್ರಶೇಖರ ಹೊನ್ನಾಳಿ
ಡಾ. ಸಾಸ್ವಿಹಳ್ಳಿ ಸತೀಶ್
ಡಾ. ಮಂಜುಶ್ರೀ ಕಡಕೋಳ
ಬಾ.ಮ. ಬಸವರಾಜಯ್ಯ
ಈಶ್ವರ ಪ್ರಸಾದ್
ಮಲ್ಲಿಕಾರ್ಜುನ ಕಡಕೋಳ

## ದಾವಣಗೆರೆ ಜಿಲ್ಲೆಯ ರಂಗ ನಿರ್ದೇಶಕರು

*ಪ್ರಮುಖ ಪೇಂಟರ್ಸ್ :*

* ಎಸ್. ಚಿದಾನಂದ
* ಆರ್.ಟಿ. ಅರುಣಕುಮಾರ್
* ದಿ|| ಚಂದ್ರಶೇಖರ್ ಬೀಳಗಿ, ದಾವಣಗೆರೆ
* ಕಂಚಿಕೇರಿ ಶಿವಣ್ಣ
* ಶೇಷಪ್ಪ ಶೆಟ್ಟಿ ಅಮೃತನಗರ

* ಚಿಂದೋಡಿ ಬಂಗಾರೇಶ್ * ಆಚಾರ್ ಶಿವಕುಮಾರ್, ಎಲೆಬೇತೂರು
* ಎಂ.ಜಿ. ಈಶ್ವರಪ್ಪ * ಮಲ್ಲಿಕಾರ್ಜುನ ಕಡಕೋಳ

*ಪ್ರಸಾಧನ/ ಇತರ ರಂಗ ಪರಿಕರ ಸಂಗ್ರಹ*

* ಎಚ್.ಸಿ. ಚಿದಾನಂದಮೂರ್ತಿ * ಚಿದಂಬರ ರಾವ್
* ಜಿ.ಎಸ್. ಬಸವರಾಜ * ಸಪ್ತಸ್ವರ ದಿ॥ ಪ್ರಸನ್ನ
* ಪ್ರೇಮ್‌ಕುಮಾರ್ ಭಂಡಿಗಡಿ * ಎಚ್.ಎನ್. ಮಲ್ಲಿಕಾರ್ಜುನ ಸ್ವಾಮಿ
* ಎಸ್.ಎಸ್. ಸಿದ್ದರಾಜು * ಭಾನುವಳ್ಳಿ ಶೆಟ್ಟರ ಕೃಷ್ಣಮೂರ್ತಿ / ರಮೇಶ್
* ಬಿ. ಪರಶುರಾಮ್ * ಬಿ. ಉಮಾಶ್ರೀ
* ಶಿವಕುಮಾರ ಸ್ವಾಮಿ ಕುರ್ಕಿ * ಜಿ.ಟಿ. ಚಂದ್ರಪ್ಪ ಮುಸ್ಟೂರು
* ಬಾ.ಮ. ಬಸವರಾಜಯ್ಯ * ಬೊಮ್ಮನಹಳ್ಳಿ ನಾಗರಾಜ್
* ಎಂ.ಪಿ. ಗುರು

*ಜಿಲ್ಲೆಯ ಪ್ರಮುಖ ಡ್ರಾಮಾ ಸೀನ್ಸ್ :*

* ಹೊನ್ನಾಳಿ ಚಂದ್ರಶೇಖರ್ * ಶ್ರೀ ಬನಶಂಕರಿ ಡ್ರಾಮಾ ಸೀನ್ಸ್, ದಾವಣಗೆರೆ.
* ಮಲ್ಲಿಕಾರ್ಜುನ ಜಾಧವ * ಶ್ರೀ ಮಲ್ಲಿಕಾರ್ಜುನ ಸ್ವಾಮಿ ಡ್ರಾಮಾ ಸೀನ್ಸ್,
* ಸಾಸ್ವೆಹಳ್ಳಿ ಸತೀಶ್ ದಾವಣಗೆರೆ. * ರೇವಣಸಿದ್ದಯ್ಯ ಸರ್ವಂದ ಮಾಸ್ತರ
* ಶ್ರೀ ವಿನಾಯಕ ಡ್ರಾಮಾ ಸೀನ್ಸ್ ಸಪ್ಲೆಯರ್ಸ್,
* ಸಿ.ಎಚ್. ಸೀನೋಜಿರಾವ್ ದಾವಣಗೆರೆ.
* ಜಿ. ಕೊಟ್ರೇಶ್ (ಜೀಕೊ) * ಶ್ರೀ ವೆಂಕಟೇಶ್ವರ ಡ್ರಾಮಾ ಸೀನ್ಸ್, ಭಾನುವಳ್ಳಿ,
* ಹೊಳೆಸಿರಿಗೆರೆ ಮಂಜುನಾಥ ಹರಿಹರ.
* ಕೆ.ಎಸ್. ಸಂತೋಷ

*ಜಗಳೂರು ತಾಲ್ಲೂಕು ರಂಗಸಜ್ಜಿಕೆ :*

* ಫೋಟೋ ವಿಜಿ * ಶ್ರೀ ಮಂಜುನಾಥ ಡ್ರಾಮಾ ಸೀನ್ಸ್, ಜಗಳೂರು.
* ಮಂಜುನಾಥ ಬೆಳಕೆರೆ * ಶ್ರೀ ವಿನಾಯಕ ಡ್ರಾಮಾ ಸೀನ್ಸ್, ಜಗಳೂರು.
* ರುದ್ರಮುನಿ ನಗರಪಾಲಿಕೆ * ಶ್ರೀ ನ್ಯೂ ಮಂಜುನಾಥ ಡ್ರಾಮಾ ಸೀನ್ಸ್,
* ಬಣಕಾರ ರೇವಣ್ಣ ಮುಷ್ಟೂರು, ಜಗಳೂರು.
* ಕೊಟ್ರಯ್ಯ ಚಿಗಟೇರಿ ಗವಾಯಿಗಳು
* ಶ್ರೀ ಮಾರುತಿ ಡ್ರಾಮಾ ಸೀನರಿ
* ಹೊಸಮನಿ ಷಡಾಕ್ಷರಪ್ಪ ದೊಡ್ಡಬೊಮ್ಮನಹಳ್ಳಿ, ಜಗಳೂರು

# ಚನ್ನಗಿರಿ ತಾಲ್ಲೂಕು ರಂಗಭೂಮಿ

1997ರ ಆಗಸ್ಟ್ 15ರಂದು ಏಳು ಹೊಸ ಜಿಲ್ಲೆಗಳನ್ನು ಕರ್ನಾಟಕಕ್ಕೆ ನೀಡಿದ ಧವಳಕೀರ್ತಿ ಅಂದಿನ ಮುಖ್ಯಮಂತ್ರಿ ಜೆ.ಎಚ್. ಪಟೇಲರಿಗೆ ಸಲ್ಲುತ್ತದೆ. ಅದುವರೆಗೆ ಶಿವಮೊಗ್ಗ ಜಿಲ್ಲೆಗೆ ಸೇರಿದ ಚನ್ನಗಿರಿ ತಾಲ್ಲೂಕು ಕಾರಿಗನೂರು ಗ್ರಾಮದವರಾದ ಪಟೇಲರು ದಾವಣಗೆರೆಯನ್ನು ಹೊಸ ಜಿಲ್ಲೆಯಾಗಿಸುವುದರೊಂದಿಗೆ ತಮ್ಮ ಚನ್ನಗಿರಿ ತಾಲ್ಲೂಕನ್ನು ದಾವಣಗೆರೆ ಜಿಲ್ಲೆಗೆ ಸೇರಿಸುವ ಮೂಲಕ ಅವರೂ ದಾವಣಗೆರೆ ಜಿಲ್ಲೆಯವರಾಗುತ್ತಾರೆ.

ಪಟೇಲರು ವಿನೋದಪ್ರಿಯರಷ್ಟೇ ಅಲ್ಲ ಅವರು ಅನನ್ಯವಾದ ನಾಟಕ ಪ್ರೇಮಿಯೂ ಆಗಿದ್ದರು. ಹರೆಯದಲ್ಲಿ ಹುಟ್ಟೂರು ಕಾರಿಗನೂರಲ್ಲಿ ವರುಷಕ್ಕೊಂದು ವೃತ್ತಿನಾಟಕದಲ್ಲಿ ಸೊಗಸಾಗಿ ಅಭಿನಯಿಸುತ್ತಿದ್ದರು. ಕಂದಗಲ್ಲ ಹಣಮಂತರಾಯರ 'ಬಡತನದಭೂತ' ನಾಟಕದಲ್ಲಿ ಅವರು ಇಂದಿರಾ ಚರಣನ ಪಾತ್ರ ಮಾಡುತ್ತಿದ್ದರೆ ಇಂದಿರಾಚರಣನಿಗೆ ತಂಗಿಯಾಗಿ (ನೀಲಾ) ಅವರ ತಮ್ಮ ಎಸ್.ಎಚ್. ಪಟೇಲ್ ನಟಿಸುತ್ತಿದ್ದರು. ಜನರನ್ನು ಭಾವಲೋಕಕ್ಕೆ ಕರೆದೊಯ್ಯುತ್ತಿದ್ದರು.

ಹೀಗೆ ಚನ್ನಗಿರಿ ತಾಲ್ಲೂಕಿನ ರಂಗಭೂಮಿಯ ಇತಿಹಾಸ ನಿನ್ನೆ ಮೊನ್ನೆಯದಲ್ಲ. ಪ್ರತಿಯೊಂದು ಹಳ್ಳಿಯಲ್ಲೂ ವೃತ್ತಿ ನಾಟಕ ಕಂಪನಿ ಶೈಲಿಯ ನಾಟಕಗಳನ್ನು ಆಡುವ ಸಂಘ ಸಂಸ್ಥೆಗಳು ಮೊದಲಿಂದಲೂ ಇವೆ. ಗ್ರಾಮೀಣ ರಂಗಭೂಮಿ ಸಶಕ್ತವಾಗಿಯೇ ಇದೆ. ಹಾಗೆಯೇ ಆಧುನಿಕ ರಂಗಭೂಮಿಯೂ ಶಕ್ತವಾಗಿಯೇ ಇಲ್ಲಿದೆ.

### ಗ್ರಾಮೀಣ ರಂಗಭೂಮಿ

ಸುಗ್ಗಿ ಸಂಭ್ರಮ ಬಂತೆಂದರೆ ನಮ್ಮ ಹಳ್ಳಿಗಾಡಿನಲ್ಲಿ ಒಂದು ಪ್ರಸಂಗ, ನಾಟಕಗಳ ತಯಾರಿ ನಡೆಸಿಯೇ ಬಿಡುತ್ತಾರೆ. ಮಹಾಭಾರತ, ರಾಮಾಯಣದಂತಹ ಧಾರ್ಮಿಕ ನೆಲೆಯ ಕಥಾವಸ್ತುವುಳ್ಳ ನಾಟಕಗಳು ದಶಕಗಳ ಹಿಂದೆ ಪ್ರಯೋಗಿಸಲ್ಪಡುತ್ತಿದ್ದವು. ದಾನಶೂರಕರ್ಣ, ಕೃಷ್ಣರುಕ್ಮಿಣಿ, ಸಾಹಸಭೀಮ, ಕೃಷ್ಣಗಾರುಡಿ, ಸತ್ಯಹರಿಶ್ಚಂದ್ರ, ಭಕ್ತಶಿರೋಮಣಿ ನಾನ್ಯಾನಾಯ್ಕ ಮುಂತಾದ ನಾಟಕಗಳಲ್ಲಿ ಪಾತ್ರ ಮಾಡಿದ ಹಿರಿಯರು ಚನ್ನಗಿರಿ, ದೇವರಹಳ್ಳಿ, ಸಂತೇಬೆನ್ನೂರು, ವಡ್ನಾಳ್, ಬನ್ನಿಹಟ್ಟಿ, ಹೊದಿಗೆರೆ,

ಬಸವಾಪಟ್ಟಣ, ತ್ಯಾವಣಿಗೆ, ನಲ್ಕುದುರೆ, ನವಿಲೆಹಾಳ್, ಕಾರಿಗನೂರು, ಚಿರಡೋಣಿ, ಬೆಳಲಗೆರೆ, ಗೊಪ್ಪೇನಹಳ್ಳಿ ಮುಂತಾದ ಗ್ರಾಮಗಳಲ್ಲಿ ಹಿರಿ–ಕಿರಿಯ ಕಲಾವಿದರ ದಂಡನ್ನು ಈಗಲೂ ಕಾಣಬಹುದು. ಇಂತಹ ನಾಟಕಗಳಿಗೆ ಸಂಗೀತ ನಿರ್ದೇಶನ ಮಾಡುವ ಸಂಗೀತ ಮಾಸ್ತರರು ನಾಟಕದ ನಿರ್ದೇಶನವನ್ನೂ ಮಾಡುತ್ತಾ ಬಂದಿದ್ದಾರೆ.

ಕೊಂಡದಹಳ್ಳಿ ನಾಗೇಂದ್ರಪ್ಪ, ಗ್ರಾಮೀಣಸಿರಿ ಪುರಸ್ಕೃತರಾದ ನಾರಶೆಟ್ಟಿಹಳ್ಳಿ ಬಿ.ಇ ತಿಪ್ಪೇಸ್ವಾಮಿ, ಕೈದಾಳ ಮಲ್ಲಪ್ಪ, ಗುರುಲಿಂಗಾಚಾರ್, ಹುಗ್ಗಿ ಬಸವರಾಜಪ್ಪ, ಭಜನೆ ಕೃಷ್ಣಪ್ಪ ಹೊದಿಗೆರೆ, ರುದ್ರಪ್ಪ ಹಳ್ಳಕಟ್ಟೆ, ಎಂ.ಕೆ. ಶಿವಾಜಿರಾವ್, ಚಿರಡೋಣಿ ಕೆ.ಎಂ. ರೇಣುಕಯ್ಯ ಸ್ವಾಮಿ ಮತ್ತು ಎಲ್.ಎಂ. ಹಾಲಯ್ಯ ಬಸವಾಪಟ್ಟಣ, ಕೆ. ಮಂಜಪ್ಪ ಚಿರಡೋಣಿ, ಕುಮಾರ್ ಗಂಗಗೊಂಡನಹಳ್ಳಿ, ಸಿ.ಎಸ್. ಚಂದ್ರಪ್ಪ ಚನ್ನಗಿರಿ. ಡಿ.ಪಿ. ಮಹಬೂಬ್ ಅಲಿ ದೊಡ್ಡಘಟ್ಟ, ಗಣೇಶ ಕಬ್ಬಳ, ಮುಗಳಿಹಳ್ಳಿ ಈಶಪ್ಪ ಮುಂತಾದ ನೂರಕ್ಕೂ ಹೆಚ್ಚು ಸಂಗೀತ ಮಾಸರ್ತರು, ತಾಲ್ಲೂಕಿನಾದ್ಯಂತ ಇದ್ದಾರೆ.

ಪಕ್ಕವಾದ್ಯ ಕಲಾವಿದರೂ ಹೆಚ್ಚಾಗಿದ್ದಾರೆ. ಸಿ.ಕೆ. ಶಿವಲಿಂಗಪ್ಪ, ಆಕಾಶವಾಣಿ ಕಲಾವಿದರು, ವಿವಿಧ ವಾದ್ಯಪಟು ಸಿ.ಎಸ್. ರವಿಕುಮಾರ್, ಎಂ. ರುದ್ರಪ್ಪ, ಟಿ. ಗಂಗಾಧರಪ್ಪ, ಟಿ. ಹಾಲಪ್ಪ ಮುಂತಾದ ಶಾಸ್ತ್ರೀಯ ವಾದ್ಯಕಲಾವಿದರು ತಬಲವಾದಕರು ಮಾರುತಿ ಕಣಿವೆಬಿಳಚಿ, ಗಣೇಶ ಕಬ್ಬಳ, ಪ್ರಕಾಶ್, ಅಂಧ ಕಲಾವಿದ ಹೆಚ್. ರುದ್ರಪ್ಪ ಕೆರೆಬಿಳಚಿ ಮುಂತಾದ ಕಲಾವಿದರು. ಚಿರಡೋಣಿ ಗ್ರಾಮದಲ್ಲೇ ಮೂವತ್ತಕ್ಕೂ ಹೆಚ್ಚು ಸಂಗೀತ ಮಾಸ್ತರುಗಳಿದ್ದು ತಮ್ಮದೇ ಆದ ವಿಶಿಷ್ಟ ರೀತಿಯ ರಂಗ ಸೇವೆ ಸಲ್ಲಿಸುತ್ತಿದ್ದಾರೆ.

**ಪ್ರಾಯೋಗಿಕ ಮತ್ತು ಹವ್ಯಾಸಿ ರಂಗಭೂಮಿ**

ಎಂಬತ್ತರ ದಶಕದಲ್ಲಿ ಅಂದಿನ ಶಿವಮೊಗ್ಗ ಜಿಲ್ಲೆ ತುಂಬಾ ಸಾಂಸ್ಕೃತಿಕ ಚಳವಳಿಯಂತೆ ಕರ್ನಾಟಕ ಸಂಘ ಶಾಖೆಗಳು ಜಿಲ್ಲೆ–ತಾಲ್ಲೂಕುಗಳ ವ್ಯಾಪ್ತಿಯಲ್ಲಿ ಅಸ್ತಿತ್ವಕ್ಕೆ ಬಂದಿದ್ದವು. ಅಂತೆಯೇ ಚನ್ನಗಿರಿಯಲ್ಲಿ ಕರ್ನಾಟಕ ಸಂಘ ಸಮಗ್ರ ರಂಗಭೂಮಿಯ ಹೊಸ ಆಶಯ ಹೊತ್ತು ಸ್ಥಾಪಿತವಾಯ್ತು. ಸುಮಾರು ಎರಡು ದಶಕಗಳಿಗೂ ಹೆಚ್ಚು ಅವಧಿಯಲ್ಲಿ ಯು. ಕರಿಯಪ್ಪ ಬುಳ್ಳಿ, ಶಿವಾಜಿರಾವ್, ಚಿನ್ನಸ್ವಾಮಿ, ಎಸ್. ಪಂಚಾಕ್ಷರಿ, ಸೀತಾರಾಮಯ್ಯ ಮುಂತಾದವರು ರಂಗಚಟುವಟಿಕೆ ಆರಂಭಿಸಿ ಕುವೆಂಪುರವರ ಜಲಗಾರ, ಕೆ. ಹಿರಣ್ಣಯ್ಯನವರ ದೇವದಾಸಿ, ಕಣ್ಣಿಗೆ ಮಣ್ಣು, ಮುಂತಾದ 15ಕ್ಕೂ ಹೆಚ್ಚು ನಾಟಕಗಳನ್ನು ಆಡಿದರು. ಅಲ್ಲದೇ ಅಲ್ಲಿ ಒಂದು (ಈಗಿನ ಮಿನಿ ವಿಧಾನಸೌಧ) ಬಯಲು ರಂಗಮಂದಿರವನ್ನು ಕಟ್ಟಿ ಕರ್ನಾಟಕ ಸಂಘವನ್ನು ಸಾಂಸ್ಕೃತಿಕವಾಗಿ ನಡೆಸಿದರು.

ಸಂತೆಬೆನ್ನೂರಿನಲ್ಲಿ ವಿಜಯ ಯುವಕ ಸಂಘವು ಇದೇ ಕಾಲ ಘಟ್ಟದಲ್ಲಿ

ಸಾಂಸ್ಕೃತಿಕ ಚಟುವಟಿಕೆ ಆರಂಭಿಸಿ ಸತ್ಯನಾರಾಯಣ ನಾಡಿಗ, ಡಿ.ಎಸ್. ರಾಮಚಂದ್ರರಾವ್, ಸಿದ್ಧಲಿಂಗಪ್ಪ ಸುಮತೀಂದ್ರ ನಾಡಿಗ್ ಮುಂತಾದವರು ಈ ಸಂಸ್ಥೆಯನ್ನು ಶೈಕ್ಷಣಿಕವಾಗಿ, ಸಾಂಸ್ಕೃತಿಕವಾಗಿ ನಡೆಸುತ್ತಾ ಈ ಭಾಗದ ಸಾಹಿತ್ಯ, ಸಂಗೀತ, ನಾಟಕ, ಜಾನಪದ ಕಲೆಗಳಿಗೆ ಚೇತೋಹಾರಿ ವಾತಾವರಣ ನಿರ್ಮಿಸಿತು. ನಾಟಕಕಾರ ಹೆಚ್. ನೀಲಪ್ಪ, ಜನಪದ ಕಲಾವಿದ ಸಿದ್ದನಮಠದ ಯುಗಧರ್ಮ ರಾಮಣ್ಣ, ಕುಳೇನೂರು ಮಹಾಂತೇಶ್, ಚಿಕ್ಕ ಉಡ ಹನುಮಂತಪ್ಪ ದೇವರಹಳ್ಳಿ ಡಿ.ಪಿ.ಆರ್. ಹನುಮಂತಪ್ಪ ಮುಂತಾದ ಪ್ರತಿಭೆಗಳಿಗೆ ತುಂಬು ಪ್ರೋತ್ಸಾಹ ನೀಡುತ್ತಾ ಈ ಸಂಸ್ಥೆ ಬೆಳ್ಳಿ ಹಬ್ಬ ಆಚರಿಸಿ ತನ್ನ ಚಟುವಟಿಕೆಯನ್ನು ಜೀವಂತವಾಗಿ ಉಳಿಸಿಕೊಂಡು ಬರುತ್ತಿದೆ.

ಮಯೂರ ಡಾ|| ರಾಜ್ ಅಭಿಮಾನಿ ಸಂಸ್ಥೆ ಚನ್ನಗಿರಿ, ಕರ್ನಾಟಕ ಸಂಘ, ಉದಯ ಕಲಾರಂಗ, ಮಾರುತಿ ಯುವಕ ಸಂಘಗಳು ಸಮಕಾಲೀನ ಸಂದರ್ಭಗಳಲ್ಲಿ ಕ್ರೀಡೆ, ಸಾಹಿತ್ಯ, ಸಂಗೀತ, ನೆಲ-ಜಲ, ನುಡಿ, ಸಂಸ್ಕೃತಿಗಳನ್ನು ದಶಕಗಳಿಂದ ಚನ್ನಗಿರಿಯಲ್ಲಿ ಶ್ರಮಿಸುತ್ತಾ ತಾಲ್ಲೂಕು, ಜಿಲ್ಲೆ ವಿಭಾಗ ಮಟ್ಟಗಳ ಯುವಜನ ಮೇಳಗಳನ್ನು ಸಂಘಟಿಸಿ ಯಶಸ್ವಿಯಾಗಿ ನಡೆಸಿಕೊಟ್ಟು ರಾಜ್ಯ ಮಟ್ಟದ ನಾಟಕ ಸ್ಪರ್ಧೆ ನಡೆಸಿ ಅನೇಕ ಪ್ರತಿಭಾವಂತರಿಗೆ ಪ್ರೋತ್ಸಾಹ ನೀಡುತ್ತಾ ಬಂದಿದೆ. ಗೌ. ಹಾಲೇಶ್, ಗೌ. ಕಲ್ಲೇಶ್, ಪಿ.ಎನ್. ಕೃಷ್ಣ ಉಪಾಧ್ಯಾಯ, ಎಂ.ಪಿ. ಭೋಜಣ್ಣ ಕೆ.ಪಿ.ಎಂ. ಶಿವಲಿಂಗಯ್ಯ, ರುದ್ರೋಜಿರಾವ್, ಪ್ರವೀಣ್ ಕುಮಾರ ಜೈನ್ ಮುಂತಾದ ಸಾಂಸ್ಕೃತಿಕ ರೂವಾರಿಗಳು ಚನ್ನಗಿರಿಯಲ್ಲಿ ವೃತ್ತಿ, ಹವ್ಯಾಸಿ, ವಾಸ್ತವವಾದಿ ನಾಟಕಗಳಿಗೆ, ಕಲಾವಿದರಿಗೆ ದಶಕಗಳಿಂದ ಪ್ರೋತ್ಸಾಹ ನೀಡುತ್ತಾ ಬರುತ್ತಿದ್ದಾರೆ.

ಕರ್ನಾಟಕ ದಲಿತ ಸಂಘರ್ಷ ಸಮಿತಿ, ಕರ್ನಾಟಕ ರಾಜ್ಯ ರೈತ ಸಂಘದಂತಹ ಪ್ರಗತಿಪರ ಚಳವಳಿಗಳು ಬೀದಿ ನಾಟಕದಂತಹ ರಂಗ ಆಯಾಮವನ್ನು ಬಳಸಿ ಸಾಮಾಜಿಕ ಸಮಸ್ಯೆಗಳ ಮೇಲೆ ಕ್ಷಕಿರಣ ಬೀರುವುದು, ಜನಜಾಗೃತಿ ಉಂಟು ಮಾಡುವುದಕ್ಕೂ ಈ ಬೀದಿನಾಟಕ ಮಾಧ್ಯಮವನ್ನು ಅನುಸರಿಸಿದವು. ಹೋರಾಟದ ಹೆಜ್ಜೆಗಳಲ್ಲಿ ಹಾಡು, ಸಂಗೀತ, ರೂಪಕ, ನಾಟಕ ಬಳಕೆಯಾಗಿ ಹತ್ತಿರದ ಚನ್ನಗಿರಿ ತಾಲ್ಲೂಕಿನಲ್ಲಿ ಬೀದಿನಾಟಕ ಪರಿಣಾಮಕಾರಿಯಾಗಿ ಹೋರಾಟದ ಹಾಡುಗಾರರಾದ ಮಲಹಾಳ್ ಎಂ.ಕೆ. ನಾಗಪ್ಪ, ಕಗತೂರು ಮಲ್ಲೇಶಪ್ಪ, ತಣಿಗೆರೆ ಬಾಬು, ವೀರಗಾಸೆ ತಂತ್ರ ಬಳಸಿದ ಬುಳಸಾಗರದ ಸಿದ್ಧರಾಮಣ್ಣ, ಸಿ. ಸಿದ್ದಪ್ಪ, ಎ.ಕೆ. ಜಯ್ಯಪ್ಪ, ಕುಳೇನೂರು ಅಂಜಿನಪ್ಪ, ಬುಸ್ಸೇನಹಳ್ಳಿ ನಾಗರಾಜ್ ಮುಂತಾದ ಸಂಘಟನೆಯ ಮುಖಂಡರು ಜಾಗೃತಿ ಹಾಡುಗಳೂ, ಹೋರಾಟದ ಹಾಡುಗಳ ರೂಪಕಗಳನ್ನು ರಂಗಕ್ಕೆ ಬಳಸಿ ಜನಜಾಗೃತಿಯತ್ತ ದಾಪುಗಾಲು ಹಾಕಿದರು. ಇದೇ ಸಂದರ್ಭದಲ್ಲಿ ಸರ್ಕಾರಿ ಆಡಳಿತವೂ ದೇಶದಾದ್ಯಂತ ಭಾರತ ಜ್ಞಾನ-ವಿಜ್ಞಾನ ಜಾಥಾದಲ್ಲಿ ಹರೋನಹಳ್ಳಿ

ಸ್ವಾಮಿ (ಹಾಡುಗಾರ, ನಟ, ಕಲಾವಿದ) ಎಂ.ಪಿ. ಗುರು ಚನ್ನಗಿರಿ ಇವರು ಬಿ.ಜೆ.ವಿ.ಜೆ. ಜಿಲ್ಲಾ ತಂಡಕ್ಕೆ ಕಲಾವಿದರಾಗಿ 90ರ ದಶಕದಲ್ಲಿ ಆಯ್ಕೆಯಾಗಿ ಅಂದಿನ ಶಿವಮೊಗ್ಗ ಜಿಲ್ಲಾ ಪರಿಷತ್ ವ್ಯಾಪ್ತಿಯ ಜಿಲ್ಲೆಯ 173 ಮಂಡಲ ಪಂಚಾಯ್ತಿಗಳ ವ್ಯಾಪ್ತಿಯಲ್ಲಿ ನೂರಾರು ಬೀದಿ ನಾಟಕಗಳನ್ನು ಪ್ರದರ್ಶಿಸಿ ತಮ್ಮ ಪ್ರತಿಭೆಯಿಂದ ಜನ ಜಾಗೃತಿ ಉಂಟು ಮಾಡಿದರು.

ಸಾಮಾಜಿಕ ಸ್ವಾಸ್ಥ್ಯದ ಪರಿಕಲ್ಪನೆಯಲ್ಲಿ ಎಂಬತ್ತರ ದಶಕದಲ್ಲಿ ಚನ್ನಗಿರಿಯಲ್ಲಿ ರಂಗಸೌರಭ ನಾಟ್ಯಕಲಾ ಸಂಘವು ರೂಪತಾಳಿ ಅನೇಕ ಪ್ರತಿಭಾವಂತ ಕಲಾವಿದರನ್ನು ಕಲೆಹಾಕಿ ವಾಸ್ತವವಾದಿ, ಪ್ರಾಯೋಗಿಕ ರಂಗ ಚಳುವಳಿಗೆ ಮುನ್ನುಡಿ ಇಟ್ಟಿತು. ಓ.ಎಸ್. ನಾಗರಾಜ್ ನಲ್ಲೂರು 'ನಾವು ನೀವು' ಮಕ್ಕಳ ನಾಟಕ ರಚಿಸಿ ಬಹುಮಾನ ಪಡೆದಿದ್ದಾರೆ. ಎರಡು ದಶಕಗಳಿಂದ ರಂಗ ಸೌರಭ ನಾಟಕ ಕಲೆಯ ಪ್ರಚಾರ ಪ್ರಸಾರ ಜೀವಂತಿಕೆಗೆ ಶ್ರಮಿಸುತ್ತಿದ್ದು ರಂಗಕರ್ಮಿ, ನಟ, ನಿರ್ದೇಶಕ, ನಾಟಕಕಾರ ಎಂ.ಪಿ. ಗುರು ಚನ್ನಗಿರಿಯಂತಹ ಅನೇಕ ಪ್ರತಿಭೆಗಳಿಗೆ ಚಾಲನೆ ನೀಡಿದೆ. ನೀಡುತ್ತಾ ಬರುತ್ತಿದೆ.

**ಪ್ರತಿಭಾವಂತ ನಟರು–ನಾಟಕಕಾರರು ಮತ್ತು ನಿರ್ಮಾಪಕರು**

ದಿ|| ಜೆ.ಹೆಚ್. ಪಟೇಲ್ ಅವರು 'ಅವಸ್ಥೆ' ಚಲನಚಿತ್ರದಲ್ಲಿ ಅಭಿನಯಿಸಿದ್ದಾರೆ. ಅವಸ್ಥೆ, ನಂಬಿಕೆಗಳು, ಶಿಶುನಾಳ ಶರೀಫ, ಮೈಸೂರು ಮಲ್ಲಿಗೆಯಂತಹ ಚಲನಚಿತ್ರ ನಿರ್ಮಿಸಿದ ಮಹಿಮ ಪಟೇಲ್‌ರು ಸದಭಿರುಚಿಗೆ ಹೆಸರಾಗಿದ್ದಾರೆ. ಹೊದಿಗೆರೆಯ ಡಾ|| ಎಚ್.ಎಸ್. ವೆಂಕಟೇಶ್‌ಮೂರ್ತಿ ಕಾವ್ಯ, ಸಾಹಿತ್ಯಗಳ ಜೊತೆ ರಂಗರೂಪಕಗಳ ರಚನೆಗೆ ಇಂಬು ನೀಡಿದ್ದಾರೆ. ಚಿಕ್ಕಗಂಗೂರಿನ ದಿ. ಶೇಷಯ್ಯ ಸೀತಾರಾಮಯ್ಯ, ಸೋಮಶೇಕರಪ್ಪ ಮುಂತಾದ ಪ್ರಸಂಗಕಾರರು, ಸಂಗೀತ ಮಾಸ್ತರುಗಳು ತಮ್ಮ ತೊಗಲುಗೊಂಬೆ, ಸೂತ್ರದ ಗೊಂಬೆ ಕಲೆಯಿಂದ ನಾಡಿನಾದ್ಯಂತ ಪ್ರಸಿದ್ಧರಾಗಿದ್ದಾರೆ. ಬಸವಾಪಟ್ಟಣದ ಎನ್.ವಿ. ರಮೇಶ್ ಏಕಾಂಕ ನಾಟಕಕಾರರು, ನಿರ್ದೇಶಕರು, ಸಂಘಟಕರಾಗಿ ರಂಗಭೂಮಿಗೆ ಸೇವೆ ಸಲ್ಲಿಸಿದ್ದಾರೆ. ಹೆಚ್. ನೀಲಪ್ಪ ನಾಟಕಕಾರರಾಗಿ ಸಂತೆಬೆನ್ನೂರು ಭಾಗದಲ್ಲಿ ಸೃಜನಶೀಲ ಸೇವೆ ಸಲ್ಲಿಸಿದ್ದಾರೆ. ಡಾ|| ಎನ್. ಸುಧೀಂದ್ರ ಚನ್ನಗಿರಿ ಇವರು ಆಕಾಶವಾಣಿ ನಿಲಯದಲ್ಲಿ ಸೇವೆ ಸಲ್ಲಿಸುತ್ತಾ 'ರೇಡಿಯೋ ನಾಟಕಗಳು' ಪ್ರಬಂಧಕ್ಕೆ ಡಾಕ್ಟರೇಟ್ ಪದವಿ ಪಡೆದಿದ್ದಾರೆ. ದಾಗಿನಕಟ್ಟೆ ನಾಗೇಂದ್ರಪ್ಪ ಐತಿಹಾಸಿಕ ಪಾತ್ರದರ್ಶಿನಿ, ಪೌರಾಣಿಕ ಪಾತ್ರ ದರ್ಶಿನಿ ಎಂಬ ಅಮೂಲ್ಯ ಏಕಪಾತ್ರಾಭಿನಯದ ಕೃತಿಗಳನ್ನು ರಚಿಸಿದ್ದಾರೆ. ಎಸ್.ಎನ್. ರಂಗಸ್ವಾಮಿ ಕಬ್ಬಳ ಇವರ 'ದುಡುಕಿ ಹೋದ ಮಗ, ಹುಡುಕಿ ಬಂದ ಸೊಸೆ' ನಾಟಕದ ಸಹಸ್ರಾರು ಪ್ರಯೋಗಗಳನ್ನು ಕೆ.ಬಿ.ಆರ್. ಡ್ರಾಮಾ ಕಂಪನಿ ಇವರು ಪ್ರದರ್ಶಿಸಿದ್ದಾರೆ.

# ಚನ್ನಗಿರಿ ತಾಲ್ಲೂಕು ರಂಗಕರ್ಮಿಗಳು

● ಎಂ.ಪಿ. ಗುರು

*ನಾಟಕಕಾರರು :*

ಡಾ. ಎಚ್.ಎಸ್. ವೆಂಕಟೇಶಮೂರ್ತಿ

ಎಸ್.ಎನ್. ರಂಗಸ್ವಾಮಿ, ಕಬ್ಬಳ.

ಎಂ.ಪಿ. ಗುರು, ಚನ್ನಗಿರಿ.

ಹೆಚ್. ನೀಲಪ್ಪ, ಸಂತೆಬೆನ್ನೂರು.

ದಾಗಿನಕಟ್ಟೆ ನಾಗೇಂದ್ರಪ್ಪ.

ಓ.ಎಸ್. ನಾಗರಾಜ್, ನಲ್ಲೂರು.

ಎಂ. ಅಣ್ಣೋಜಿರಾವ್, ಚನ್ನಗಿರಿ.

*ರಂಗ ನಟರು – ನಿರ್ದೇಶಕರು :*

ಚಿಕ್ಕಗಂಗೂರು ವಿ. ಸೀತಾರಾಮಯ್ಯ (ಯಕ್ಷಗಾನ–ಭಾಗವತಿಕೆ)

ಎಂ.ಪಿ. ಗುರು, ಚನ್ನಗಿರಿ, (ನಟನೆ–ನಿರ್ದೇಶನ.)

ಹಾ. ಶಾಂತಿನಾಯ್ಕ, ಕಂಚಿಗನಾಳ್ (ನಟನೆ, ನೇಪಥ್ಯ ಹಿನ್ನೆಲೆ ಸಂಗೀತ).

ಎಂ. ಅಣ್ಣೋಜಿರಾವ್ ಪವಾರ್ (ನಟನೆ, ನಿರ್ದೇಶನ, ವರ್ಣಾಲಂಕಾರ.)

ಕೆ.ಪಿ.ಎಂ. ಗಣೇಶಯ್ಯ ನೀನಾಸಂ (ನಟನೆ, ನಿರ್ದೇಶನ, ಹಿನ್ನೆಲೆ ಸಂಗೀತ... ಇತ್ಯಾದಿ.)

ಕೆ. ವೆಂಕಟೇಶ್ವರ, (ನಟನೆ, ನಿರ್ದೇಶನ, ರಂಗ ತಾಂತ್ರಿಕತೆ...)

ಎನ್.ವಿ. ರಮೇಶ್, ಬಸವಾಪಟ್ಟಣ ನಿರ್ದೇಶಕ.

*ರಂಗ ಪ್ರಯೋಗದ ಸಂಸ್ಥೆಗಳು :*

ಉದಯಕಲಾರಂಗ – ಚನ್ನಗಿರಿ, 1970.

ಕರ್ನಾಟಕ ಸಂಘ – ಚನ್ನಗಿರಿ, 1965.

ವಿಜಯ ಯುವಕ ಸಂಘ ಸಂತೆಬೆನ್ನೂರು, ಚನ್ನಗಿರಿ ಸ್ಥಾಪನೆ 1960.

ಮಯೂರ ಡಾ॥ ರಾಜ್ ಅಭಿಮಾನಿ ಸಂಘ, ಸ್ಥಾಪನೆ 1992.

ರಂಗಸೌರಭ ನಾಟ್ಯ ಕಲಾ ಸಂಘ (ರಿ.) ಚನ್ನಗಿರಿ, ಸ್ಥಾಪನೆ 1986-87.
ಕನ್ನಡ ಜಾಗೃತಿ ಸಮಿತಿ, ನಲ್ಲೂರು, ಸ್ಥಾಪನೆ 1996.

*ಹಳ್ಳಿಗಾಡಿನ ನಾಟಕ ಮಾಸ್ತರರು :*

ಬಿ.ಇ. ತಿಪ್ಪೇಸ್ವಾಮಿ, ನಾರಶೆಟ್ಟಿಹಳ್ಳಿ,
ಕೊಂಡದಹಳ್ಳಿ ನಾಗೇಂದ್ರಪ್ಪ, ಕೊಂಡದಹಳ್ಳಿ,
ವಿ. ಗುರುಲಿಂಗಾಚಾರ್, ವಿ.ಬನ್ನಿಹಟ್ಟಿ,
ಹುಗ್ಗಿ ಬಸವರಾಜಪ್ಪ, ಚಿರಡೋಣಿ, ಕೆ.ಬಿ.ಆರ್. ಕಂಪನಿ, ನಟ ಹಾಗೂ ಸಂಗೀತ ನಿರ್ದೇಶಕರು.
ಕೆ.ಎಂ. ರೇಣುಕಯ್ಯ ಸ್ವಾಮಿ ವೃತ್ತಿ ರಂಗಭೂಮಿ ಕಲಾವಿದ
ಎಲ್.ಎಂ. ಹಾಲಯ್ಯನವರು, ಬಸವಾಪಟ್ಟಣ.
ಚಿರಡೋಣಿ ಗ್ರಾಮದಲ್ಲೇ 30ಕ್ಕೂ ಹೆಚ್ಚು ನಾಟಕ ಮಾಸ್ತರರು ಇದ್ದಾರೆ.

*ರಂಗಸಂಗೀತ ಹಾಗೂ ವಾದ್ಯ ಸಂಗೀತ :*

ದಿ॥ ಸಿ.ಕೆ. ಶಿವಲಿಂಗಪ್ಪ, ಚನ್ನಗಿರಿ.
ಟಿ. ಹಾಲಪ್ಪ, ಚನ್ನಗಿರಿ.
ಎಂ. ರುದ್ರಪ್ಪ, ಚನ್ನಗಿರಿ.
ಸಿ.ಎಸ್. ರವಿಕುಮಾರ್, ಚನ್ನಗಿರಿ (ವಿವಿಧ ವಾದ್ಯ ಪಟು)
ಡಿ.ಪಿ. ಮೆಹಬೂಬ್ ಅಲಿ, ಕಬ್ಬಳ, ಗಣೇಶ್ ಕಬ್ಬಳ, ಮಾರುತಿ ಕಣಿವೆ ಬಿಳಚಿ, ಅಂಧ ಕಲಾವಿದ ರುದ್ರಪ್ಪ ಕೆರೆಬಿಳಚಿ.

*ರಂಗ ಪರಿಚಾರಿಕೆ :*

* ರಾಜಣ್ಣ ತಾವರೆಕೆರೆ, ಕೆ.ಎಸ್. ಬಸವರಾಜ್ ಕುಂಬಾರ ಚನ್ನಗಿರಿ, ಎನ್.ವಿ.ರಮೇಶ್, ಬಸವಾಪಟ್ಟಣ, ಓ.ಎಸ್. ನಾಗರಾಜ್ ನಲ್ಲೂರು, ಸಿ.ಹೆಚ್. ಶ್ರೀನಿವಾಸ್ ಹಾಗೂ ಸಿ.ಹೆಚ್. ರುದ್ರಪ್ಪ ಚನ್ನಗಿರಿ, ಜಿ. ಶಂಕರಮೂರ್ತಿ ನಲ್ಲೂರು, ಎಂ.ಬಿ. ರಾಜಪ್ಪ ಮಾಸ್ತರು ಚನ್ನಗಿರಿ, ಗೌ. ಹಾಲೇಶ್, ಬಾ.ರಾ. ಮಹೇಶ್ ಚನ್ನಗಿರಿ ಮುಂತಾದವರು.

* ಚಿಕ್ಕಬೆನ್ನೂರಿನ-ಶ್ರೀ ರುದ್ರೇಶ್ವರ ನಾಟಕ ಸೀನರಿ ಕಂಪನಿಯು ಕಳೆದ 50 ವರ್ಷಗಳಿಂದ ರಂಗ ಪರಿಕರ ಒದಗಿಸುವ ಸೇವೆ ಸಲ್ಲಿಸುತ್ತಿದೆ.

# ಚನ್ನಗಿರಿಯ ಪ್ರಸಿದ್ಧ ನಾಟಕಕಾರ ಎಸ್.ಎನ್. ರಂಗಸ್ವಾಮಿ

● ಡಾ. ಎನ್.ಡಿ. ತಿಪ್ಪೇಸ್ವಾಮಿ



ಎಸ್.ಎನ್. ರಂಗಸ್ವಾಮಿ

ವೃತ್ತಿಯಲ್ಲಿ ಅವರೊಬ್ಬ ಸಾಮಾನ್ಯ ಕ್ಷೌರಿಕ. ಬೇರೆಯವರ ತಲೆ ಭಾರ ಇಳಿಸುವ ಅವರ ತಲೆಯೊಳಗೆ ಸದಾ ಸುತ್ತುತ್ತಿದ್ದುದು ಅತ್ಯಂತ ಕ್ರಿಯಾಶೀಲ ಯೋಚನೆಗಳೇ. ಅವೇ ನಾಟಕ ರೂಪಕ್ಕಿಳಿದು ರಂಗವೇರಿದಾಗ ಜನ ಮುಗಿಬಿದ್ದು ನೋಡಿದರು. ಒಂದಲ್ಲಾ ಎರಡಲ್ಲಾ... ಸತತ ಮುನ್ನೂರು ನಾನೂರು ಪ್ರದರ್ಶನಗಳು ಕನ್ನಡ ರಂಗಭೂಮಿಯಲ್ಲಿ ದಾಖಲೆ ಬರೆದವು. ಇಷ್ಟಾಗಿ ಅವರೇನು ಸಾಹಿತ್ಯ ರಾಶಿಯನ್ನು ಓದಿ ಅರಗಿಸಿಕೊಂಡವರೇನೂ ಅಲ್ಲ. ಹೆಚ್ಚೇನು? ಶಿಕ್ಷಣ ಎಂದರೆ ಕೇವಲ ಐದನೇ ಈಯತ್ತೆವರೆಗೆ. ಆದರೇನಂತೆ ಪ್ರತಿಭೆಗೆ ಇಂಥ ಹಂಗೆಲ್ಲಿಯದು? ಅದು ಎಲ್ಲ ಹಮ್ಮು-ಬಿಮ್ಮು, ಕಟ್ಟು-ಕಟ್ಟಳೆಗಳನ್ನು ಮೀರಿ ಪಸರಿಸಿಬಿಡುತ್ತದೆ. ಈ ವ್ಯಕ್ತಿಯ ವಿಚಾರದಲ್ಲಿ ಆದದ್ದೂ ಇದೇ. ಆದರೆ, ದುರದೃಷ್ಟ ಅಂದರೆ ಇದೇ ಇರಬೇಕು. ಅವರ ಯೋಚನೆಗಳ ಪ್ರಯೋಗಾಲಯಕ್ಕೆ ಈಗ ಗೆದ್ದಲು ಹತ್ತಿಬಿಟ್ಟಿದೆ.

ಕೆಲವರಿಗಾದರೂ ಎಸ್.ಎನ್. ರಂಗಸ್ವಾಮಿ ಹೆಸರು ನೆನಪಿರಬಹುದು. ಅವರ ನಾಟಕಗಳೆಂದರೆ ಜನ ಮುಗಿಬಿದ್ದು ನೋಡುತ್ತಿದ್ದ ಕಾಲವೊಂದಿತ್ತು. ನೂರು ಪ್ರದರ್ಶನವಂತೂ ನಿಶ್ಚಿತವಾಗಿತ್ತು. ಬೆಳಗಾವಿಯಲ್ಲಿ 400 ಪ್ರದರ್ಶನ ಕಂಡ 'ದುಡುಕಿ ಹೋದ ಮಗ ಹುಡುಕಿ ಬಂದ ಸೊಸೆ' ಯಂತಹ ನಾಟಕಗಳನ್ನು ರಚಿಸಿದ ರಂಗಸ್ವಾಮಿ ಅಕ್ಷರಶಃ ಬೀದಿಯಲ್ಲಿ ನಿಂತಿದ್ದಾರೆ. ಕಾಡುವ ಬ್ರೈನ್ ಟ್ಯೂಮರ್‌ನಿಂದ ಪೆನ್ನು ಕೈಗೆತ್ತಿಕೊಳ್ಳದೇ 15 ವರ್ಷ ಸಂದಿದೆ.

ಅದು 1978ರ ಸಮಯ. ಕುತೂಹಲಕ್ಕಾಗಿ 'ದುಡುಕಿ ಹೋದ ಮಗ ಹುಡುಕಿ ಬಂದ ಸೊಸೆ' ನಾಟಕದ ಹಸ್ತಪ್ರತಿಯನ್ನು ದಾವಣಗೆರೆಯ ಕೆ.ಬಿ.ಆರ್. ಡ್ರಾಮಾ ಕಂಪನಿಯ ಚಿಂದೋಡಿ ಲೀಲಾ ಅವರಿಗೆ ಕೊಟ್ಟಿದ್ದರು ರಂಗಸ್ವಾಮಿಯವರು. 'ನಿಮ್ಮ ನಾಟಕ ನಮ್ಮ ಕಂಪನಿಗೆ ಮೆಚ್ಚುಗೆಯಾದರೆ ಕರ್ನಾಟಕದ ಮೂಲೆ ಮೂಲೆಗೂ ಕೊಂಡೊಯ್ಯುತ್ತೇವೆ' ಎಂದು ಲೀಲಮ್ಮ ಭರವಸೆಕೊಟ್ಟರು. ಅಂದುಕೊಂಡಂತೆಯೇ ಆಯಿತು. 1981ರಲ್ಲಿ ಬೆಳಗಾವಿಯಲ್ಲಿ ಮೊದಲ ಪ್ರದರ್ಶನ. ಅಲ್ಲಿಯೇ ಸತತ 400 ಪ್ರದರ್ಶನ. ಆರ್ಥಿಕವಾಗಿ ತೊಂದರೆಯಲ್ಲಿದ್ದ ಕಂಪನಿಗೆ ಈ ನಾಟಕ ಮನಶ್ಚೇತನ ನೀಡಿತು. ಇದೇ ನಾಟಕ ದಾವಣಗೆರೆಯಲ್ಲಿ 300, ಗದಗ, ಹುಬ್ಬಳ್ಳಿ, ಬಾಗಲಕೋಟೆ, ಬೆಂಗಳೂರುಗಳಲ್ಲಿ 100 ಪ್ರದರ್ಶನ ಕಂಡಿತು. ಅಂದ ಹಾಗೆ ಚಿಂದೋಡಿ ಲೀಲಾ ಸಾವಿರು ಮೀರಿ ಪ್ರಯೋಗಿಸಿ ಸಾಕಷ್ಟು ಹಣ ಗಳಿಸಿಕೊಂಡರು.

1982ರಲ್ಲಿ ದಾವಣಗೆರೆಯಲ್ಲಿ ನಡೆದ 125ನೇ ಪ್ರದರ್ಶನ ವೀಕ್ಷಿಸಲು ಬಂದಿದ್ದ ಪುಟ್ಟಣ್ಣ ಕಣಗಾಲ್ 'ಮೊದಲ ನಾಟಕವೇ ಇಷ್ಟೊಂದು ಯಶಸ್ವಿಯಾಗಿದೆ. ಈತನಲ್ಲಿ ಶ್ರೇಷ್ಠ ನಾಟಕಕಾರನಾಗುವ ಎಲ್ಲ ಲಕ್ಷಣಗಳಿವೆ' ಎಂದಿದ್ದರು. 'ಗದಗದಲ್ಲಿ ರಂಗಸ್ವಾಮಿಯವರನ್ನು ಖುಷಿಯಿಂದ ತಬ್ಬಿಕೊಂಡ ಎಚ್.ಎನ್. ಹೂಗಾರ್' ನಾನು ಮತ್ತು ಪಿ.ಬಿ. ಧುತ್ತರಗಿ ಮಾತ್ರ ನಾಟಕಕಾರರು ಎಂದುಕೊಂಡಿದ್ದೆವು. ಇವರೂ ನಮ್ಮ ಸಾಲಿಗೆ ಸೇರುತ್ತಾರೆ' ಎಂದು ಖುಷಿಯಿಂದ ಹೇಳಿದ್ದರು.

ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ನಾಟಕಕಾರ ಎಸ್.ಎನ್. ರಂಗಸ್ವಾಮಿ ಅದರಂತೆಯೇ ಬೆಳೆದರು. ತಮ್ಮ 35–40 ವರ್ಷದ ಅವಧಿಯಲ್ಲಿ ಬರೆದ ಐದೂ ನಾಟಕಗಳು ಸೂಪರ್ ಹಿಟ್ ಆದವು. 'ದುಡುಕಿ ಹೋದ ಮಗ ಹುಡುಕಿ ಬಂದ ಸೊಸೆ', 'ಕೊರಳೊಂದು ತಾಳಿ ಎರಡು' ನಾಟಕಗಳನ್ನು ಬೇರೆ ಕಂಪನಿಗಳಿಗೆ ನೀಡಬಾರದೆಂದು ಚೀಂದೋಡಿ ಲೀಲಾ ಲಿಖಿತ ಒಪ್ಪಂದ ಮಾಡಿಕೊಂಡಿದ್ದರು. ಹೀಗಾಗಿ ಅವು ಪ್ರಕಟವಾಗಲೇ ಇಲ್ಲ.

ಜನ ಕಂಪನಿ ಪ್ರದರ್ಶನದಲ್ಲಿ ನೋಡಿ ಬರೆದುಕೊಂಡು, ಝೆರಾಕ್ಸ್ ಮಾಡಿಕೊಂಡು ಹಳ್ಳಿಹಳ್ಳಿಗಳಲ್ಲಿ ಪ್ರದರ್ಶಿಸಿದರು. ಶೀಲಗೆಟ್ಟರೂ ಸೂಳೆಯಲ್ಲ, ಹುಡುಗಿ ಮೆಚ್ಚಿದ ಹುಂಬ, ಶಿಕ್ಷಣವೇ ನಮ್ಮ ರಕ್ಷಣೆ ನಾಟಕಗಳೂ ಜಯಭೇರಿ ಬಾರಿಸಿದವು. ಯಶಸ್ಸಿನ ಮೆಟ್ಟಿಲು ಹತ್ತುತ್ತಿದ್ದಂತೆ ವಿಧಿ ಕ್ರೂರದೃಷ್ಟಿ ಬೀರಿತು. ಅವರಿಗೆ ಮೆದುಳಿನ ಕಾಯಿಲೆ ಆವರಿಸಿತು. ಬರೆಯುವ ಶಕ್ತಿ ಕುಂದಿತು. ಔಷಧೋಪಚಾರಕ್ಕೆ ದುಡ್ಡಿಗಾಗಿ ಒದ್ದಾಡುವಾಗ ಬರೆಯುವ ಸೃಜನಶೀಲತೆಯಾದರೂ ಎಲ್ಲಿಂದ ಹುಟ್ಟೀತು? ಈಗವರಿಗೆ ಅರವತ್ಮೂರು ವರ್ಷ. ದಾವಣಗೆರೆ ಜಿಲ್ಲೆ, ಚನ್ನಗಿರಿ ತಾಲ್ಲೂಕು ಕಬ್ಬಳ ಗ್ರಾಮದಲ್ಲಿ ನೆಲೆ. ಈಗಲೂ ಅವರ ಕುಟುಂಬಕ್ಕೆ ಅನ್ನ ನೀಡುತ್ತಿರುವುದು ಕ್ಷೌರಿಕ ವೃತ್ತಿ.

# 'ರಂಗಸೌರಭ' ಸೂಸಿದ ಪರಿಮಳ

ಚನ್ನಗಿರಿಯಲ್ಲಿ ಮತ್ತೊಂದು ರಂಗ ಚಳವಳಿ ಆರಂಭವಾದ ಕಾಲವದು. ಹಳ್ಳಿಗಾಡಿನ ಸಾಂಪ್ರದಾಯಿಕ ರಂಗಭೂಮಿಯು ಪೌರಾಣಿಕ ನಾಟಕಗಳು ಜಾತ್ರೆ, ಪರಿಷೆಗಳಿಗೆ ಸೀಮಿತವಾಗಿದ್ದವು. ಹೊಸ ಪ್ರಯೋಗ, ಸಮಕಾಲೀನ ಕಥಾ ವಸ್ತುಗಳನ್ನು ಒಳಗೊಂಡ ವಾಸ್ತವಿಕ ಪ್ರಜ್ಞೆಯ ನಾಟಕಗಳನ್ನು ಬೆಂಗಳೂರು, ಶಿವಮೊಗ್ಗ, ದಾವಣಗೆರೆ ನಗರಗಳಲ್ಲಿ ನೋಡಿಕೊಂಡು ಬಂದ ಮಾಧ್ಯಮಮಿತ್ರರಿಗೆ ಅಂತಹ ರಂಗಪ್ರಯೋಗಗಳನ್ನು ಚನ್ನಗಿರಿಗೆ ಪರಿಚಯಿಸುವ ಉದ್ದೇಶ. ಹೇರಳವಾದ ಸಾಮಾಜಿಕ ಕಥಾವಸ್ತುಗಳೇನೋ ನಮ್ಮಲ್ಲಿದ್ದವು. ಆದರೆ ಈ ಪರಿಸರಕ್ಕೆ ಒಗ್ಗುವ ಸಿದ್ಧ ನಾಟಕಗಳು ಲಭ್ಯವಿಲ್ಲದಿದ್ದಾಗ, ಚಂದ್ರಗುತ್ತಿ ಬೆತ್ತಲೆ ಸೇವೆ ಖಂಡಿಸುವ, ಆಡಳಿತಶಾಹಿ ವ್ಯವಸ್ಥೆಯನ್ನು ಬಡಿದು ಎಚ್ಚರಿಸುವ ನಿಟ್ಟಿನಲ್ಲಿ 'ಬೆತ್ತಲೆ ಮೆರವಣಿಗೆ' ಬರೆದು ತಾಲೀಮು ನಡೆಸುವಾಗ ಪ್ರತಿಭಾವಂತ ಎಂ. ಅಣ್ಣೋಜಿರಾವ್ ಪರಿಚಯವಾದರು.

ಬೆತ್ತಲೆ ಮೆರವಣಿಗೆಯ ರಾಜಕೀಯ ವಿಡಂಬನಾತ್ಮಕವಾದ ರಾಜನ ಪಾತ್ರಕ್ಕೆ ಹೇಳಿ ಮಾಡಿಸಿದಂತಿದ್ದ ಅಣ್ಣೋಜಿಯನ್ನು ರಂಗದ ಮೇಲೆ ತಂದೆವು, ಗ್ರಹಣ ಶಕ್ತಿ,



ರಂಗ ಸೌರಭದ ಸಿ.ಜಿ.ಕೆ. ಅವರ 'ಅಲ್ಲೇ ಇದ್ದೋರು' ನಾಟಕ. ನಿರ್ದೇಶನ ಕೆ.ಪಿ.ಎಂ. ಗಣೇಶಯ್ಯ

ನಿರ್ದೇಶಕನ ಮನೋಭೂಮಿಕೆಯನ್ನು ಅರ್ಥಮಾಡಿಕೊಳ್ಳಬಲ್ಲ ಇವರು ಈ ಪಾತ್ರಕ್ಕೆ ಜೀವ ತುಂಬಿ ನಟಿಸಿ ಸೈ ಎನ್ನಿಸಿ ಕೊಂಡರು. ಅರೆಹುಚ್ಚ ಹೆಣ್ಣು ಹೆಂಡಗಳ ದಾಸ, ಪ್ರಜಾಸಮೂಹದ ಬಗ್ಗೆ ದಿವ್ಯ ನಿರ್ಲಕ್ಷ್ಯದ ಐಷಾರಾಮಿ ಬದುಕಲ್ಲಿ ಸುಖ ಕಂಡುಕೊಂಡ ಜಾಣ ಮಂತ್ರಿಯ ಚಾಣಾಕ್ಷತನದಿಂದ ಬೆತ್ತಲಾಗುವ, ಪ್ರಜಾತಂತ್ರ ಎತ್ತಿ ಹಿಡಿದಾಗ ಪಲಾಯನ ಮಾಡುವ ಈ ರಾಜನ ಪಾತ್ರ ಪ್ರೇಕ್ಷಕರ ಮನಗೆದ್ದಿತು. ತನ್ಮೂಲಕ ಹೊಸಅಲೆ ರಂಗತಂಡವಾಗಿ 'ರಂಗಸೌರಭ' ಅಸ್ತಿತ್ವ ಪಡೆಯಿತು.

ಮತ್ತೆ ರಂಗ ವಸಂತ, ಅಸಂಗತ ನಾಟಕಗಳು ವಾಸ್ತವವಾದಿ ನಾಟಕಗಳ ಪ್ರಯೋಗ ದತ್ತ ದಾಪುಗಾಲು ಹಾಕಿದ ಈ ತಂಡವು ಬಲಿಪುರ, ಅಂಕುಡೊಂಕು, ತಬ್ಬಲಿ ಮುಂತಾದ ನಾಟಕಗಳನ್ನು ರೂಪಿಸಿ ಯಶಸ್ವಿಯಾಯಿತು. ಕುರುಡು ಯುವಕನ ಕನಸು, ಬದುಕು ಕಟ್ಟಿಕೊಳ್ಳುವಾಗ ಉಳ್ಳವರ ಆಕ್ರಮಣದಿಂದ ಈ ಯುವಕನನ್ನು ಶೋಷಿಸುವ, ತಂಗಿಯ ಬಾಳನ್ನು ಮೂರಾಬಟ್ಟೆ ಮಾಡುವಲ್ಲಿ ಊರಗೌಡನ ದಬ್ಬಾಳಿಕೆಯಿಂದ ನಲುಗುವ ಅಂಧಯುವಕನ ಪಾತ್ರದಲ್ಲಿ ಅಣ್ಣೋಜಿ ಮಿಂಚಿದರೆ ಮುಗ್ಧ ಯುವಕನ ಪಾತ್ರಕ್ಕೆ ಹಾಸ್ಯದ ಜೊತೆ ಹೊಸ ಸಂವೇದನೆ ತಂದು ಕೊಡುವಲ್ಲಿ ಕೆ.ಪಿ.ಎಂ. ಗಣೇಶಯ್ಯ ಮನೋಜ್ಞವಾಗಿ ಅಭಿನಯಿಸಿ ಮನೆ ಮಾತಾದರು. ತಂಡದ ಆತ್ಮವಿಶ್ವಾಸ ಬಲವಾಯಿತು.

ಪತ್ರಕರ್ತನಾಗಿ ಸಮುದಾಯದ ದನಿ ಎತ್ತಿ ಹಿಡಿಯುವ ಆದರ್ಶ ಪಾತ್ರವನ್ನು ನಾನು ಅಭಿನಯಿಸಿದ್ದೆ. ಕೆ.ಪಿ.ಎಂ. ಬಸವರಾಜಯ್ಯ, ತರಕಾರಿ ರುದ್ರೇಶ್, ಕೆ. ಬಾಬು ತಮ್ಮ ಪಾತ್ರಗಳನ್ನು ಸಮರ್ಥವಾಗಿ ನಿರ್ವಹಿಸಿದರು. ಈ ನಾಟಕ ತಾಲ್ಲೂಕಿನಾದ್ಯಂತ 65ಕ್ಕೂ ಹೆಚ್ಚು ಪ್ರಯೋಗ ಕಂಡು ಜಿಲ್ಲೆ, ವಿಭಾಗ ಮಟ್ಟದಲ್ಲಿ ಬಹುಮಾನಗಳನ್ನು ದೋಚಿತು. 'ಬಲಿಪುರ' ಪರಿಶ್ರಮ ವಿಮರ್ಶಕರ ಪ್ರಶಂಸೆ ಪಡೆಯಿತು.

ಅಂಕು ಡೊಂಕು, ತಬ್ಬಲಿ ನಾಟಕಗಳನ್ನು ನಾನು ಮತ್ತು ಅಣ್ಣೋಜಿರಾವ್ ಬರೆದೆವು. ಸಾಕಷ್ಟು ನಾವೀನ್ಯ ರಂಗ ತಂತ್ರಗಳನ್ನು ಬಳಸಿಕೊಂಡು, ಸೀನರಿಗಳನ್ನು ನಮ್ಮ ತಂಡವೇ ಬರೆದುಕೊಂಡು, ಸ್ಥಳೀಯ ಪ್ರತಿಭೆಗಳಾದ ಎಸ್. ರವಿಕುಮಾರ್, ಹರೋನಹಳ್ಳಿ ಸ್ವಾಮಿ, ಕೆ.ಪಿ.ಎಂ. ಗಣೇಶಯ್ಯ, ಕೆ.ಪಾರ್ವತಿ, ಗುರುರಾಜ್, ಶಶಿಕಿರಣ್ ಸೋದರರು ನಾಟಕಗಳಿಗೆ ಹಿನ್ನೆಲೆ ಸಂಗೀತ, ರಂಗ ತಂತ್ರ ಬೆಳಕಿನ ವಿನ್ಯಾಸ ಕೆ.ಪಿ.ಎಂ. ಬಸವರಾಜಯ್ಯ, ನಿರ್ದೇಶನ ನಾನು ಹಾಗೂ ಅಣ್ಣೋಜಿ ಜತೆಗೂಡಿ ನಿರ್ವಹಿಸಿದೆವು. ಜೀತಗಾರಿಕೆಯ ಕರಾಳತೆಯನ್ನು ಪ್ರಾಣಿದಯೆ, ಬದುಕುವ ಹಕ್ಕು ಎತ್ತಿ ಹಿಡಿವ ಈ ನಾಟಕಗಳಿಗೆ ಮುಖವಾಡಗಳ ಬಳಕೆ, ಜಾದೂ ಪ್ರದರ್ಶನದ ತಂತ್ರ, ಬೆಳಕು ನೆರಳಿನ ಸೈಕ್ಲೋರಮಾ ಪರದೆಗಳ ಬಳಕೆ ಮಾಡಿ ತನ್ನ ಪ್ರತಿಭೆ ತೋರಿತು. ಪ್ರೇಕ್ಷಕರು ನಮ್ಮ ಬೆನ್ನು ತಟ್ಟಿದರು.

ಅಣ್ಣೋಜಿರಾವ್ ಅಂಕುಡೊಂಕು (ಜಾದೂಗಾರ) ತಬ್ಬಲಿ (ಅಣ್ಣಪ್ಪ) ಪಾತ್ರಗಳನ್ನು ಪ್ರೌಢವಾಗಿ ಅಭಿನಯಿಸಿ, ಜನಪ್ರಿಯರಾದರು ಹಾಸ್ಯವನ್ನು ಸಹಜ ಶೈಲಿ, ಸಮಯ ಸ್ಫೂರ್ತಿಯಲ್ಲಿ ಗಣೇಶಯ್ಯ ಎಂದಿನಂತೆ ಪ್ರೇಕ್ಷಕರನ್ನು ಹಿಡಿದಿಡುವಲ್ಲಿ ಯಶಸ್ವಿಯಾದರೆ ನಾನು ಪೋಷಕಪಾತ್ರ, ನಿರ್ದೇಶನದ ಜವಾಬ್ದಾರಿ ಹೊತ್ತಿದ್ದೆ.

ಅಣ್ಣೋಜಿರಾವ್ ವರ್ಣಾಲಂಕಾರ, ವಸ್ತ್ರಾಲಂಕಾರ, ಹಿನ್ನೆಲೆ ಸಂಗೀತ, ನಿರ್ದೇಶನ, ನಾಟಕ ರಚನೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ಮುಂದೆ ಗಿರೀಶಕಾರ್ನಾಡರು ನಿರ್ದೇಶಿಸಿದ 'ಮಲೆಗಳಲ್ಲಿ ಮದುಮಗಳು' ಟೀವಿ ಧಾರಾವಾಹಿಯಲ್ಲೂ, ಹೂಲಿಶೇಖರ್ ನಿರ್ದೇಶನ ಟಿ.ವಿ. ಧಾರವಾಹಿಯಲ್ಲೂ ಅಭಿನಯಿಸಿ ಹೆಸರಾದರು. ಬೇಲೂರು ಕೃಷ್ಣಮೂರ್ತಿಯವರ 'ಕುದುರೆ ಮೊಟ್ಟೆ', 'ಚಂದ್ರಪ್ಪಗೌಡನ ಚಟ್ಟದ ಯಾತ್ರೆ ನಾಟಕಗಳನ್ನು 'ನಿರ್ದೇಶಿಸಿದರು. ಕೆ.ಪಿ.ಎಂ. ಗಣೇಶಯ್ಯ ನೀನಾಸಂ. ತಿರುಗಾಟದಲ್ಲಿ ಪಾಲ್ಗೊಂಡು ಸವಾಲು ಎನ್ನಿಸುವ ಪಾತ್ರಗಳನ್ನು ಅಭಿನಯಿಸಿ ರಾಜ್ಯದ್ಯಂತ ಗುರುತಿಸಿಕೊಂಡು, ಚಿತ್ರದುರ್ಗದ ಜ.ಮು.ರಾ. ರಂಗತರಬೇತಿ ಶಾಲೆಯ ಉಪನ್ಯಾಸಕರಾಗಿ ಅನೇಕ ನಾಟಕಗಳು, ರೂಪಕಗಳನ್ನು ನಿರ್ದೇಶಿಸಿದರು.


ಇತ್ತೀಚೆಗೆ ಬಾಪು ಕಲಾಲೋಕ ಎಂಬ ಸಾಂಸ್ಕೃತಿಕ ಸಂಘಟನೆ ಚಿತ್ರದುರ್ಗದಲ್ಲಿ ಸ್ಥಾಪಿಸಿ ಕಲಾವಿದರ ಸಂಘಟನೆಯಲ್ಲಿ ತೊಡಗಿದ್ದಾರೆ. ವಿಜ್ಞಾನ ಜಾಥಾದಲ್ಲಿ ಜಿಲ್ಲಾದ್ಯಂತ 175 ಮಂಡಲ ಪಂಚಾಯ್ತಿಗಳಲ್ಲಿ ಬೀದಿ ನಾಟಕ ಪ್ರದರ್ಶನ, ಸಾಕ್ಷರತಾ ಆಂದೋಲನದಲ್ಲಿ ಆರ್.ಸಿ.ಹೆಚ್. ಮೂಲಕ 50 ಹಳ್ಳಿಗಳಲ್ಲಿ ಬೀದಿ ನಾಟಕ ಪ್ರದರ್ಶನ, ನಡೆದಾಡುವ ನಕ್ಷತ್ರಗಳು. ಜಾಥಾದಲ್ಲಿ ರಂಗ ಸೌರಭ ಪಾಲ್ಗೊಂಡಿದೆ.

ಎಂ.ಪಿ. ಗುರು, ಅಣ್ಣೋಜಿರಾವ್, ಕೆ.ಪಿ.ಎಂ. ಗಣೇಶಯ್ಯ, ಓ.ಎಸ್. ನಾಗರಾಜ್ ನಲ್ಲೂರು, ಚಂದ್ರಹಾಸ ಹಿರೇಮಳಲಿ, ಕೆ.ಪಿ.ಎಂ. ಬಸವರಾಜಯ್ಯ ಮುಂತಾದ ಪ್ರತಿಭಾವಂತರಿಗೆ ರಂಗಸೌರಭ ನಾಟ್ಯಕಲಾ ಸಂಘವು ಸಾಂಸ್ಕೃತಿಕ ನೆಲೆಗಟ್ಟು ಕಟ್ಟಿಕೊಟ್ಟಿದೆ. ಇತ್ತೀಚೆಗೆ ಅಸಂಘಟಿತ ನೂರಾರು ಕಲಾವಿದರ ಸಂಘಟನೆ ತಾಲ್ಲೂಕಿನ ವಿವಿಧ ಕ್ಷೇತ್ರಗಳ ಕಲಾವಿದರ ಪ್ರಥಮ ಮಹಾ ಸಮ್ಮೇಳನವನ್ನು ಜರುಗಿಸಿದೆ. ಸಾಕ್ಷರತೆ, ವೈಜ್ಞಾನಿಕ ಮನೋಭಾವ ಬೆಳೆಸುವಲ್ಲಿ ತಾಯಿ ಮಗಳು ಆರೋಗ್ಯ ಮಕ್ಕಳ ಹಕ್ಕುಗಳಿಗಾಗಿ ಹೋರಾಟ, ಬಾಲ ಕಾರ್ಮಿಕ ಪದ್ಧತಿ ನಿರ್ಮೂಲನೆಗಾಗಿ ಹೋರಾಟ ಕನ್ನಡ ಪರ ಚಳುವಳಿಗಳಲ್ಲಿ, ದಾವಣಗೆರೆ ಜಿಲ್ಲಾ ಮೂರನೇ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಚನ್ನಗಿರಿಯ ಸ್ವಾತಂತ್ರ್ಯ ವೀರ ಧೋಂಡೋಜಿವಾಘ ರೂಪಕ ರಚಿಸಿ ಅಣ್ಣೋಜಿರಾವ್ ಸಮ್ಮೇಳನದಲ್ಲಿ ಸ್ವತಃ "ಧೋಂಡೋಜಿ ವಾಘ" ಪಾತ್ರ ಅಭಿನಯಿಸಿದರು. ಎಂ.ಪಿ.ಗುರು ಟಿಪ್ಪುಸುಲ್ತಾನ್ ಪಾತ್ರ ಅಭಿನಯಿಸಿದರು. ಎರಡೂವರೆ ದಶಕಗಳಿಂದ ರಂಗ ಸೌರಭ

ರಂಗ ಚಟುವಟಿಕೆ ನಿರಂತರ ನಡೆಸುತ್ತಾ ಕರ್ನಾಟಕ ವೈಭವ ಪರಂಪರೆ, 'ಜಯಹೇ ಕರ್ನಾಟಕ ಮಾತೆ!', ರೂಪಕಗಳನ್ನು ನಲ್ಲೂರು ಶಾಲಾ ಮಕ್ಕಳು ಮೂಲಕ ಅಭಿನಯಿಸಿದರು. ಅಂದಿನಿಂದ ಇಂದಿಗೂ ತಾಲ್ಲೂಕು, ಜಿಲ್ಲೆ, ರಾಜ್ಯದಲ್ಲಿ ರಂಗ ಸೌರಭವನ್ನು ಸೂಸುತ್ತಲೇ ಇದೆ. ಶ್ರಮಜೀವಿ ಸಿ.ಹೆಚ್. ರುದ್ರಪ್ಪ, ಕ್ಯಾಂಟೀನ್ ಬಸವಣ್ಣನವರ ಸಹಕಾರ ಮರೆಯುವಂತಿಲ್ಲ. ದಿನಾಂಕ 25.7.14 ರಂದು ರಂಗಸೌರಭದ ಬೆಳ್ಳಿಹಬ್ಬ ಕಾರ್ಯಕ್ರಮ ಜರುಗಿತು.

● ಎಂ.ಪಿ.ಜಿ

***********



# ಹೊನ್ನಾಳಿ ತಾಲ್ಲೂಕು ಕುರಿತು ನಾಕುಮಾತು......


ವಿದ್ವಾನ್ ಡಾ॥ ಬಿ.ದೇವೇಂದ್ರಪ್ಪ

ನಿಮಗೆಲ್ಲ ತಿಳಿದಿರುವಂತೆ ರಾಜ್ಯಾದ್ಯಂತ ಆಗಾಗ ರಾಜಕೀಯ ಆಖಾಡದಲ್ಲಿ ಹೊನ್ನಾಳಿಯ ಹೆಸರು ಹರಿಗಡಿಯದೇ ಹರಿದಾಡುತ್ತದೆ. ಆದರೆ ನಮ್ಮ ದಾವಣಗೆರೆ ಕಡೆಗೆ ಹೊನ್ನಾಳಿ ತಾಲ್ಲೂಕಿನ ಹೆಸರಿಗಿಂತ 'ಹೊನ್ನಾಳಿ ಹೊಡೆತ' ಎಂಬ ಹಳೇಮಾತು, ಮನೆ-ಮನೆ ಮಾತು. ಇದು ನಿತ್ಯದ ಬದುಕಿನಲ್ಲಿ ಹಾಸು ಹೊಕ್ಕಾದ ಪರಂಪರೆಯ ಪರಿಭಾಷೆಯೇ ಆಗಿದೆ. ಹೌದು ಹೊನ್ನಾಳಿ ಅಳತೆಯ ಹುನ್ನಾರಗಳು ಅಷ್ಟು ಸುಲಭಕ್ಕೆ ಸಿಗುವುದಿಲ್ಲ. ಅವರದು ಅಂತರಂಗದರಿವಿನಂತೆ ಬಹಿರಂಗ ಕ್ರಿಯೆಯ ಕುಶಲ ಕಲ್ಚರ್.

ಹೆಸರಾಂತ ನಾಟಕಕಾರ ಲಂಕೇಶ್ ಮೇಷ್ಟ್ರು ತಮ್ಮ 'ಮುಸ್ಸಂಜೆ ಕಥಾ ಪ್ರಸಂಗ'ದ ಬಹುಪಾಲು ವಿವರಗಳನ್ನು ಹೊನ್ನಾಳಿ ನೆಲದ ಸೊಗಡು-ಸೊಗಸುಗಳಿಂದಲೇ ನಿರೂಪಿಸಿದ್ದಾರೆ. ಈ ಪ್ರಸಂಗ ನಾಟಕವಾಗಿಯೂ ಹೆಸರಾಯಿತು. ಇದೇ ನೆಲದ ಲೇಖಕ ಕೃಷ್ಣ ಮಾಸಡಿಯವರ 'ನಂಬಿಕೆಗಳು' ಕಾದಂಬರಿಯನ್ನು ನಮ್ಮ ಚಿದಾನಂದಮೂರ್ತಿ ನಾಟಕಕ್ಕೆ ರೂಪಾಂತರಿಸಿದರು. ಕನ್ನಡ ಸಾಹಿತ್ಯ ಲೋಕದ ದಿಗ್ಗಜ ಡಾ. ಎಚ್. ತಿಪ್ಪೇರುದ್ರಸ್ವಾಮಿ ಇಲ್ಲಿಯವರೇ. ತುಂಗಭದ್ರಾ, ಕಲಾಯೋಗಿ ನಾಟಕಗಳನ್ನು, ಸಿನಿಮಾ ಆಗಿ ಹೆಸರು ಮಾಡಿದ 'ಬೆಳವಲದ ಮಡಿಲಲ್ಲಿ' ಕಾದಂಬರಿಯನ್ನು ಬರೆದ ಎಚ್.ದೇವೀರಪ್ಪ ಹುಟ್ಟಿದ್ದು ಇಲ್ಲೇ. ಮೈಸೂರಿನ ಸುಪ್ರಸಿದ್ಧ 'ಸಮತೆಂತೋ' ರಂಗತಂಡದ ಸಂಸ್ಥಾಪಕರಲ್ಲೊಬ್ಬರಾದ ಪ್ರೊ. ಎಚ್.ಎಂ. ಚನ್ನಯ್ಯನವರಂತಹ ರಂಗಕರ್ಮಿಗಳ ಜನ್ಮಭೂಮಿ ಹೊನ್ನಾಳಿ. ಹೀಗೆ ಹುಡುಕುತ್ತಾ ಹೋದರೆ ಸಂಗೀತ, ಸಾಹಿತ್ಯ, ನಾಟಕ, ರಂಗಸಂಗೀತ ಹಲವು ಸಂಸ್ಕೃತಿಗಳ ಹೊಳಪುಗಳು ಊರ ಬದಿಯ ತುಂಗಭದ್ರೆಯಂತೆ ಜುಳು ಜುಳು ಹರಿಯುತ್ತವೆ.

ತಾಲ್ಲೂಕಿನ ನ್ಯಾಮತಿ ಗ್ರಾಮದ ನಾಯಕ ಸಮುದಾಯವರಾದ ಡಾ. ಬಿ. ದೇವೇಂದ್ರಪ್ಪನವರು ಈ ದೇಶ ಕಂಡ ಅನನ್ಯ ಕಲಾವಿದ. ಅವರು ತಮ್ಮ 19ನೇ ವಯಸ್ಸಿಗೆ ಮೈಸೂರು ಮಹಾರಾಜರ ಆಸ್ಥಾನ ವಿದ್ವಾಂಸರಾಗಿ, ಸಂಗೀತ, ನೃತ್ಯ,

ರಂಗಭೂಮಿ, ಕುರಿತಾಗಿ ರಾಷ್ಟ್ರಖ್ಯಾತಿ ಗಳಿಸುತ್ತಾರೆ. 1940ರಷ್ಟು ಹಿಂದೆಯೇ ಅವರು ಗುಬ್ಬಿ ವೀರಣ್ಣನವರೊಂದಿಗೆ ಅಮೋಘವಾಗಿ ಅಭಿನಯಿಸಿದ್ದಾರೆ. ಅವರದು ರಾಜಠೀವಿಯ ಶರೀರ ಮತ್ತು ಶಾರೀರ. ಈ ಅಭಿಜಾತ ಪ್ರತಿಭೆಯನ್ನು 1962ರಲ್ಲೇ ಭಾರತ ಸರ್ಕಾರದ ಕೇಂದ್ರ ಸಂಗೀತ ಮತ್ತು ನಾಟಕ ಅಕಾಡೆಮಿಯು ಹುಡುಕಿಕೊಂಡು ಬಂದು ಪ್ರಶಸ್ತಿ ನೀಡುತ್ತದೆ. ಬಹುಶ್ರುತ ಪಂಡಿತರಾದ ಡಾ. ದೇವೇಂದ್ರಪ್ಪ ಅಂದಿನ ಶಿವಮೊಗ್ಗ, ಇಂದಿನ ದಾವಣಗೆರೆ ಜಿಲ್ಲೆಗೆ ತನ್ಮೂಲಕ ರಾಷ್ಟ್ರಮಟ್ಟದಲ್ಲಿ ಕೀರ್ತಿ ತಂದುಕೊಟ್ಟ ಪ್ರಥಮ ಪುರುಷರು.

ಅದು ಅವೊತ್ತಿನ ಮಾತು. ಇವೊತ್ತಿನ ಮಾತು ಅಂತಹ ಗುಣಶಾಲಿಯಾದ ಪ್ರತಿಭಾ ಸಂಪನ್ನತೆಯ ಗೌರೀಶಂಕರ ಹೊನ್ನಾಳಿ ಏರದಿದ್ದರೂ ಅದರ ಪಳೆಯುಳಿಕೆಯಂತೆ ಹಳ್ಳಿ ಹಳ್ಳಿಗಳಲ್ಲೂ ರಂಗಸಂಗೀತ ಸಂಸ್ಕೃತಿ ಭೋರ್ಗರೆಯದಿದ್ದರೂ ಬತ್ತದ ಝರಿಯಂತೆ ಹರಿಯುತ್ತಿದೆ. ಪ್ರತಿ ಹಳ್ಳಿಗಳಲ್ಲಿ ಜರುಗುವ ಜಾತ್ರೆಗಳ ಸಂದರ್ಭಗಳಲ್ಲಿ ವರ್ಷಕ್ಕೊಂದಾದರೂ ಕಂಪನಿ ಶೈಲಿಯ ನಾಟಕಗಳು ನಡೆಯುತ್ತವೆ. ಹೆಸರಾಂತ ನಾಟಕ ಕಂಪನಿಗಳು ಹೊನ್ನಾಳಿಯಲ್ಲಿ ಕ್ಯಾಂಪು ಮಾಡಿವೆ. ಕಂಪನಿ ನಾಟಕಗಳ ಮೊಕ್ಕಾಂಗಳಲ್ಲಿ ರುಚಿಸುವ, ರಂಗದಾಹ ನೀಗುವ ಸಂಗತಿಗಳ ಸೊಗಸು ತೀರುವಳಿ ಮಾರಾಟದ ಲಾಭ ತರಿಸುವಂತಹದ್ದು.

ಆಧುನಿಕ ರಂಗಸಂಸ್ಕೃತಿಗೆ ಹೊನ್ನಾಳಿ ಹಿಂದೆ ಬಿದ್ದಿಲ್ಲ. ಹೊಳೆರಂಗ, ಅಭಿವ್ಯಕ್ತಿ ಕಲಾತಂಡಗಳ ರಂಗಪ್ರಯೋಗಗಳೇ ಇದಕ್ಕೆ ಸಾಕ್ಷಿ. ತುಂಗಭದ್ರೆಯ ದಡದಲ್ಲಿ 'ಹೊಳೆರಂಗ'ದ ರಂಗಪ್ರಯೋಗಗಳು. ಅಲ್ಲಿನ ದಿಡ್ಡಿಬಾಗಿಲು ಕೋಟೆಯನ್ನೇ ಬ್ಯಾಕ್ ಡ್ರಾಪ್ ಮಾಡಿಕೊಂಡು ಎಚ್.ಎಸ್. ಶಿವಪ್ರಕಾಶರ 'ಮದುವೆ ಹೆಣ್ಣು' ಪ್ರಯೋಗಗೊಂಡಾಗ ಕೇರಳದ ರಂಗಕರ್ಮಿ ಚಂದ್ರದಾಸನ್ ಖುಷಿಯಿಂದ ವೀಕ್ಷಿಸಿದ್ದಾರೆ. ಬಿದರಹಳ್ಳಿ ನರಸಿಂಹಮೂರ್ತಿ ಈ ನಾಟಕಕ್ಕೆ ಸಂಗೀತ ನೀಡಿದ್ದಾರೆ. ಪರಿಸರ ರಂಗಭೂಮಿಯನ್ನು ಸವಾಲಿನಂತೆ ಸಿ. ಬಸವಲಿಂಗಯ್ಯ, ಜನ್ನಿ ಮೊದಲಾದವರು ಕಥಾ ನಾಟಕದಂತಹ ಅಪರೂಪದ ಶಿಬಿರಗಳ ಮೂಲಕ ರಂಗಪ್ರಯೋಗಗಳನ್ನು ಏರ್ಪಡಿಸಿದ್ದಾರೆ. ಒಂದೇ ಒಂದು ಕೊರತೆಯೆಂದರೆ ಕನಕದಾಸ ಹೆಸರಿನ ಪುಟ್ಟದಾದ ಬಯಲು ರಂಗ ಮಂದಿರ ಬಿಟ್ಟರೆ ಸುಸಜ್ಜಿತ ರಂಗ ಮಂದಿರಗಳಿಲ್ಲ.

ರಂಗ ಪರಂಪರೆ ಉಳಿಸಿಕೊಂಡು ಬಂದಿರುವ ಅನೇಕ ಮಂದಿ ಹಿರಿಯ ರಂಗಕರ್ಮಿಗಳು ತಾಲ್ಲೂಕಿನಲ್ಲಿದ್ದಾರೆ. ಪ್ರತಿ ಹಳ್ಳಿ ಹಳ್ಳಿಗಳಲ್ಲೂ ನಾಟಕಗಳಿಗೆ ಹಾರ್ಮೋನಿಯಂ ತಬಲಾ, ನುಡಿಸುವ, ದೊಡ್ಡಾಟಗಳಿಗೆ ಮದ್ದಲೆ ನುಡಿಸುವ ಕಲಾವಿದರಿದ್ದಾರೆ. ಮರಗಾಲು ಕುಣಿತದ ಸುಂದರ ಹೆಣ್ಣು ವೇಷದಾರಿಗಳ ತಂಡಗಳಿವೆ. ಹೀಗೆ ಹೊನ್ನಾಳಿ ತಾಲ್ಲೂಕು ದಾವಣಗೆರೆ ಜಿಲ್ಲೆಯ ರಂಗಭೂಮಿ ಚರಿತ್ರೆಯಲ್ಲಿ ಗುರುತರ ಜಾಗ ದೊರಕಿಸಿಕೊಂಡಿದೆ. ವೃತ್ತಿ ಮತ್ತು ಹೊಸ ಅಲೆ ರಂಗಭೂಮಿ ಇಲ್ಲಿ ಮೇಳೈಸಿದೆ.

# ಹೊನ್ನಾಳಿ ರಂಗಭೂಮಿ ಇತಿಹಾಸ

● ಎಚ್.ಸಿ. ಚಿದಾನಂದಮೂರ್ತಿ

ತುಂಗಭದ್ರಾ ದಂಡೆಯಮೇಲೆ ಕಿಷ್ಕಿಂಧೆಯಂತೆ ಕಂಡುಬರುವ ಹೊನ್ನಾಳಿಯ ಸಾಂಸ್ಕೃತಿಕ ಕಲಾವೈಭವ, ಕುಸ್ತಿಯೆಂಬ ಮಲ್ಲಸಾಹಸ ಕ್ರೀಡೆಯಂತೂ ಪ್ರಸಿದ್ಧ, ಅದರಲ್ಲೂ 'ಹೊನ್ನಾಳಿ ಹೊಡ್ತ' ಎಂಬ ಕುಸ್ತಿಯ 'ಮಟ್ಟ' ಕುಸ್ತಿಯ ಅಖಾಡವನ್ನು ಮೀರಿ ಕುವೆಂಪುರವರ ಕಾದಂಬರಿಗಳಲ್ಲಿ ಸೇರಿ ಪ್ರಸಿದ್ಧಿ ಪಡೆಯಿತು ಇದರ ಜೊತೆಗೆ ಡೊಳ್ಳಿನಂಥ ಗಂಡು ಕಲೆಯೂ ಬೆಳೆದು ಹೊನ್ನಾಳಿಯ 'ಹೊಡ್ತಕ್ಕೆ' ಮತ್ತೊಂದು ಹೆಸರು. ಇಲ್ಲಿ 'ರಂಗಕಲೆ' ಆರಂಭಗೊಂಡಿದ್ದು ಪ್ರಾಯಶಃ 1912–13ರಲ್ಲಿರಬೇಕು. ಕಲ್ಲಾಪುರದ ವೆಂಕಣ್ಣಾಚಾರ್ಯರು ರಚಿಸಿದ 'ಜಾಂಬವತಿ ಕಲ್ಯಾಣ' ಎಂಬ ಯಕ್ಷಗಾನವನ್ನು ಹೊನ್ನಾಳಿಯ ರಾಘವೇಂದ್ರಾಚಾರ್ಯರು ಇತರರು ಸೇರಿ ಈ ದಶಾವತಾರದ ಭಾಗವತದ ಆಟವನ್ನು ಹೊನ್ನಾಳಿ ಹಾರನಹಳ್ಳಿ ಹಾಗೂ ಸೊರಟೂರು ಗ್ರಾಮಗಳಲ್ಲಿ ಪ್ರದರ್ಶನ ನೀಡಿ ಹೆಸರು ಮಾಡಿತು. ಬಿದರಹಳ್ಳಿ ನರಸಿಂಹ ಮೂರ್ತಿ ಸಂಪಾದಿಸಿದ 'ಜಾಂಬವತಿ ಕಲ್ಯಾಣ' ದಲ್ಲಿ ಈ ಪ್ರಸ್ತಾಪವಿದೆ. ನಂತರ ಹೊನ್ನಾಳಿಗೆ ಬೇರೆ ಕಡೆಗಳಿಂದ ಬಂದ ನಾಟಕ ಕಂಪನಿಗಳ ಚರಿತ್ರೆ.

ಆಗ ಶಿವಮೊಗ್ಗದಲ್ಲಿ ವರ್ಷಾನುಗಟ್ಟಲೇ ಗುಬ್ಬಿ ವೀರಣ್ಣನವರ ಕಂಪನಿ ನಾಟಕ ಪ್ರದರ್ಶಿಸುತ್ತಿದ್ದ ಕಾಲ. ಇವರಿಂದ ಉತ್ತೇಜಿತರಾದ ಹೊನ್ನಾಳಿಯ ಸತ್ಯನಾರಾಯಣ ರಾವ್, ಚಟ್ನಹಳ್ಳಿ ಶ್ರೀನಿವಾಸರಾಯರು, ಗುಬ್ಬಿ ಕಂಪನಿ ಸೇರಿ ಉತ್ತಮ ನಟರಾಗಿ ಹೆಸರಾದರು. ಹಾಗೇನೇ ಕೆ.ಹೊನ್ನಪ್ಪ ಎಂಬುವವರು ಹಲಗೇರಿ ಜಟ್ಟೆಪ್ಪನವರ ನಾಟಕ ಮಂಡಳಿಯಲ್ಲಿ ನಟರಾಗಿ ಸೇವೆ ಸಲ್ಲಿಸುತ್ತಿದ್ದರು. ಇದೇ ಕಾಲದಲ್ಲಿ ಹೊನ್ನಾಳಿಯ ರೊಟ್ಟಿ ನಾರಾಯಣಾಚಾರ್ಯರು, ಎಚ್. ಕೃಷ್ಣಮೂರ್ತಿಯವರು ಗರುಡ ಸದಾಶಿವರಾಯರ ಹಾಗೂ ಶಿರಹಟ್ಟಿ ವೆಂಕೋಬರಾಯರ ಕಂಪನಿಯಲ್ಲಿ ನಟರಾಗಿ ಸೇವೆ ಸಲ್ಲಿಸಿದರು.

ಈ ನಟರುಗಳೇ ಹೊನ್ನಾಳಿ ನಗರಕ್ಕೆ ಬಂದು ಸುಮಾರು 130 ಜನ ನಟರ ತಂಡವನ್ನು ಕಟ್ಟಿದರು. ಗುಂಡಾ ಭಟ್ಟರು, ಪರ್ವತ ಮಲ್ಲಪ್ಪನವರ ನೇತೃತ್ವದಲ್ಲಿ ಶ್ರೀ ಚನ್ನೇಶ್ವರ ನಾಟಕ ಮಂಡಳಿ ಕಟ್ಟಿ 'ಲಿಖಿತ ಲೀಲೆ' ಅರ್ಥಾತ್ 'ಶಾಪವಿಮೋಚನೆ' ಎಂಬ ನಾಟಕಗಳನ್ನು ಪ್ರದರ್ಶಿಸಿ ಎಲ್ಲರ ಮೆಚ್ಚುಗೆ ಪಡೆದರು. ಇದೇ ವೇಳೆ ಹೊನ್ನಾಳಿಯ ಕಳ್ಳಿಕೊಪ್ಪಲ ಆಲಂಸಾಬ್ ಎಂಬುವವರು ನಬೀಸಾಬ್, ಸತ್ತಾರ್‌ಸಾಬ್, ಬಾಷಾಸಾಬ್,

ಮಡಿವಾಳರ ಚಂದ್ರಪ್ಪ ಎಂಬ ನಟರನ್ನು ಕಲೆಹಾಕಿ 'ಸಂಗ್ಯಾಬಾಳ್ಯಾ' ಎಂಬ ಸಣ್ಣಾಟವನ್ನು ಮೂಡಲಪಾಯ ರೀತಿಯಲ್ಲಿ 1936ರಲ್ಲಿ ಪ್ರದರ್ಶಿಸಿ, ಹೊನ್ನಾಳಿಯ ನಾಟಕ ಕಲೆಗೆ ಮತ್ತೊಂದು ಗರಿಯನ್ನು ಸೇರಿಸಿದರು. ನಂತರ ನಾಮದೇವ (ಸಿಂಪಿ ಜನಾಂಗದವರು), ಕೆ. ಬಾಳಾಚಾರ್, ಎಚ್.ಜೆ. ತುಕಾರಾಮಪ್ಪ ಇವರ ನಾಯಕತ್ವದಲ್ಲಿ ರುದ್ರಯ್ಯ ಸ್ವಾಮಿಗಳ ಜ್ಯೇಷ್ಠ ಪುತ್ರರಾದ ಎಚ್. ಚನ್ನಯ್ಯನವರೊಂದಿಗೆ ಹಲವಾರು ನಟರನ್ನು ಸೇರಿಸಿಕೊಂಡು 'ಭಕ್ತ ಪುಂಡಲೀಕ' ಎಂಬ ನಾಟಕವನ್ನು ಅನೇಕ ವರ್ಷಗಳ ಕಾಲ ಪ್ರದರ್ಶಿಸಿದರು. ಈ ನಾಟಕದಲ್ಲಿ ಕೆ. ಬಾಳಾಜಿರಾವ್ ಜೊತೆಗೆ ಎಚ್. ಕೃಷ್ಣಪ್ಪ, ಎಚ್. ವೀರಪ್ಪ, ಎನ್. ಪುಂಡಲೀಕರಾವ್ ದುರ್ಗಪ್ಪ ಮತ್ತು ನೀಲಗಿರಿ ಇತ್ಯಾದಿ 12 ಜನ ತಂಡದೊಂದಿಗೆ ನಾಟಕ ಪ್ರದರ್ಶಿಸುತ್ತಿದ್ದರು. ಎಚ್. ಚನ್ನಯ್ಯ ಮುಖ್ಯ ಪಾತ್ರವಹಿಸುತ್ತಿದ್ದರು. ವಿವಿಧ ನಾಟಕ ಕಂಪನಿಗಳಿಂದ ನಿವೃತ್ತಿ ಹೊಂದಿ ಬಂದ ನಟರೊಂದಿಗೆ ಕೋಟೆ ಬ್ರಾಹ್ಮಣರುಸೇರಿ ಶ್ರೀ ಗುರು ರಾಘವೇಂದ್ರ ಕೃಪಾಪೋಷಿತ ನಾಟಕ ಮಂಡಳಿ ರಚನೆಯಾಯಿತು. ಪೌರಾಣಿಕ ನಾಟಕಗಳಾದ 'ಕೃಷ್ಣಲೀಲೆ, ಕಂಸವಧೆ, ಶ್ರೀ ರಾಮಪಟ್ಟಾಭಿಷೇಕ, ಕುರುಕ್ಷೇತ್ರ, ಉತ್ತರಭೂಪ ಇವುಗಳ ಜೊತೆಗೆ ಸಾಮಾಜಿಕ ನಾಟಕಗಳಾದ 'ಕಾಲೇಜ್ ಗರ್ಲ್, ಟಿಪ್ಪುಸುಲ್ತಾನ್ ಮುಂತಾದ ನಾಟಕಗಳನ್ನು 1940ರಿಂದ 58 ರವರೆಗೆ ಪ್ರದರ್ಶಿಸುತ್ತಾ ಬಂದರು. ಆದರೆ ತದನಂತರ ನಟರ ಜೀವನೋಪಾಯಕ್ಕೆ ಕಷ್ಟವಾದ್ದರಿಂದ ಜೊತೆಗೆ ನಾಟಕದ ಬಗ್ಗೆ ತಿರಸ್ಕಾರಭಾವ ಬಂದಿದ್ದರಿಂದ ಅನಿವಾರ್ಯವಾಗಿ ನಾಟಕ ಪ್ರದರ್ಶನಗಳು ಸ್ಥಗಿತಗೊಳ್ಳುವಂತಾಯಿತು.

*ಹೊನ್ನಾಳಿ ಪುರದ ನಾಟಕ ಕಂಪನಿಗಳ ನಟರ ಸಂಕ್ಷಿಪ್ತ ಪರಿಚಯ*

1. ಶ್ರೀ ಚನ್ನೇಶ್ವರ ನಾಟಕ ಕಂಪನಿಯಲ್ಲಿ ಗುಂಡಾಭಟ್ಟರೇ ಜಾಸ್ತಿ ಇದ್ದು ಮಲ್ಲಪ್ಪನವರು ಸ್ತ್ರೀ ಪಾತ್ರದಲ್ಲಿ ಮೆಚ್ಚುಗೆ ಪಡೆದರು ಅದೇ ರೀತಿ ಆರೇರ ಮಾರ್ತಾಂಡಪ್ಪ ಹಾಸ್ಯ ಪಾತ್ರ ನಿರ್ವಹಿಸುತ್ತಿದ್ದರು.

2. ಚನ್ನಪ್ಪ, ರುದ್ರಯ್ಯ ಹಾಗೂ ಇತರರು ಜೊತೆಗೆ ಪರ್ವತಮಲ್ಲಪ್ಪನವರದೇ ಸಂಗೀತ, ಸುಬ್ಬಣ್ಣಾಚಾರ್‌ರದು ತಬಲಾ, ಅವರ ಅಣ್ಣ ಆಚಾರ್ಯರು ರಾಜನ ಪಾತ್ರದಲ್ಲಿ ಪ್ರಮುಖರಾಗಿದ್ದರು.

3. ಕಳ್ಳಿಕೊಪ್ಪಲು ಆಲಂಸಾಬ್‌ರವರ 'ಸಂಗ್ಯಾಬಾಳ್ಯಾ' ದಲ್ಲಿ ಆಲಂಸಾಬ್ ಹಾಸ್ಯ ಪಾತ್ರದಲ್ಲಿ, ನಬಿಸಾಬ್ ಸಂಗ್ಯಾನ ಪಾತ್ರ ಮಾಡಿದರೆ ಮಡಿವಾಳರ ಚಂದ್ರಪ್ಪ ಬಾಳ್ಯಾನ ಪಾತ್ರದಲ್ಲಿ, ಮೀಸಲು. ಇಲ್ಲಿ ಬಾಷಾಸಾಬ್ ಸ್ತ್ರೀ ಪಾತ್ರದಲ್ಲಿ ಮಿಂಚುತ್ತಿದ್ದರು. ಇದಕ್ಕೆ ಖುದ್ದೂಸ್ ಮತ್ತು ನಬಿಯುವರು ತಬಲಾ ವಾದಕರಾಗಿರುತ್ತಿದ್ದರು.

4. ಶ್ರೀ ಪಾಂಡುರಂಗ ಕೃಪಾಪೋಷಿತ ನಾಟಕ ಮಂಡಳಿಯಲ್ಲಿ ಪಾತ್ರ ವಹಿಸುತ್ತಿದ್ದ ಕೆ. ಬಾಳಾಜಿರಾವ್, ಎಚ್.ಜೆ. ತುಕಾರಾಮಪ್ಪ, ವಗ್ಗರ ದುಗ್ಗಪ್ಪ, ನೀಲಗಿರಿ ಎನ್., ಪುಂಡಲೀಕರಾವ್‌ರವರೇ ಮುಖ್ಯರಾಗಿದ್ದರು. ಎಚ್.ಚನ್ನಯ್ಯನವರ 'ಜಹ್ನದೇವ' ಪಾತ್ರವನ್ನು ನೋಡಿ ಗುಬ್ಬಿವೀರಣ್ಣನವರೇ ಪ್ರಶಂಸಿಸಿ ಬಂಗಾರದ ಉಂಗುರ ನೀಡಿದ್ದೂ ಉಂಟು. ಗುಬ್ಬಿ ಕಂಪನಿಯ ನಾಟಕ ಶಿವಮೊಗ್ಗದಲ್ಲಿ ನಡೆಯುತ್ತಿದ್ದಾಗ ನಟಭಯಂಕರ ಎಂದೇ ಹೆಸರಾದ ಗಂಗಾಧರರಾಯರು ಅನಾರೋಗ್ಯವಾಗಿದ್ದಾಗ ಎಚ್.ಚನ್ನಯ್ಯನವರು ವೀರಣ್ಣನವರ ಆಹ್ವಾನದ ಮೇರೆಗೆ 2–3 ಸಾರಿ ಭೀಮನ ಪಾತ್ರವಹಿಸಿದ್ದರು. ಇವರ ನಟನಾ ಕೌಶಲ್ಯವನ್ನು ಕಂಡ ವೀರಣ್ಣನವರು ತಮ್ಮ ಕಂಪನಿಯಲ್ಲಿ ಮುಂದುವರಿಯುವಂತೆ ಕೇಳಿಕೊಂಡರಂತೆ ಆದರೆ ಮುನಿಸಿಪಲ್ ನೌಕರರಾಗಿದ್ದ ಎಚ್.ಚನ್ನಯ್ಯನವರು ಅದನ್ನು ನಿರಾಕರಿಸಿದರು. ಒಂದು ವೇಳೆ ಅವರು ಅದಕ್ಕೊಪ್ಪಿದ್ದರೆ ಕರ್ನಾಟಕದ ಶ್ರೇಷ್ಠ ನಟರ ಸಾಲಿನಲ್ಲಿ ರಾರಾಜಿಸುತ್ತಿದ್ದರು.

*ಶ್ರೀ ಗುರು ರಾಘವೇಂದ್ರ ಕೃಪಾಪೋಷಿತ ನಾಟಕ ಮಂಡಳಿ :*

ಸಾಮಾಜಿಕ ನಾಟಕ 'ಕಾಲೇಜ್ ಗರ್ಲ್' (ಕೋಲಶಾಂತಪ್ಪನವರ 'ಸ್ತ್ರೀ' ಎಂಬ ಮೂಲ ನಾಟಕ) ಪ್ರದರ್ಶನಗೊಂಡು ನಾರಾಯಣರಾವ್ ಬಾಲಚಂದ್ರನ ಪಾತ್ರ ವಹಿಸಿದರೆ ನವೀನನಾಗಿ ಚಟ್ನಹಳ್ಳಿ ಶ್ರೀನಿವಾಸರಾವ್, ಕಮಲೆಯಾಗಿ ಎ.ಎನ್. ಹನುಮಂತರಾವ್, ಭಗವಂತನ ಪಾತ್ರದಲ್ಲಿ ಹೊನ್ನಪ್ಪ, ಭುಜಂಗಪ್ಪನ ಪಾತ್ರದಲ್ಲಿ ಕೆ. ವಾದಿರಾಜ ಮುಖ್ಯರಾಗಿದ್ದರು. ಎಚ್. ಕೃಷ್ಣಮೂರ್ತಿರಾವ್‌ರಂತೂ ಪೌರಾಣಿಕ ಪಾತ್ರದಲ್ಲಿ ಭೀಮ ಮತ್ತು ಕಂಸನ ಪಾತ್ರಕ್ಕೆ ಹೇಳಿಮಾಡಿಸಿದಂತಿದ್ದರು. ಮಧುರ ಕಂಠದ ಎಚ್.ಎನ್. ಸತ್ಯನಾರಾಯಣರಾವ್ ಕರ್ಣನ ಪಾತ್ರ ನಿರ್ವಹಿಸುತ್ತಿದ್ದರು.

ಇವರು ಗುಬ್ಬಿ ಕಂಪನಿಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದ್ದರು. ಕೆ. ಬಾಳಾಜಿರಾವ್‌ರವರದು ದುಶ್ಯಾಸನ ಹಾಗೂ ಭಕ್ತ ಪುಂಡಲೀಕನ ಪಾತ್ರವಾದರೆ ಕೆ. ಹೊನ್ನಪ್ಪನವರು ಭಗವಂತನ ಪಾತ್ರದ ಜೊತೆಗೆ ಅರ್ಜುನ ಹಾಗೂ ಕೃಷ್ಣನ ಪಾತ್ರದಲ್ಲೂ ಮೆಚ್ಚುಗೆ ಪಡೆದರು. ಹಟ್ಟಿ ನಾರಾಯಣಾಚಾರ್ ಕಂಸನ ಪಾತ್ರ ನಿರ್ವಹಿಸುತ್ತಾ ಕೊನೆಗೆ ನಿರ್ದೇಶಕರಾದರು. ಇನ್ನು ಪುಂಡಲೀಕರಾವ್ ಖಾಲಿ ಬೀಳುತ್ತಿದ್ದ ಯಾವುದೇ ಪಾತ್ರವಾದರೂ ಸೈ. ಬಾಲಕೃಷ್ಣ, ಭೀಷ್ಮ, ಕುಕ್ಕಟಮುನಿ, ಟಿಪ್ಪುಸುಲ್ತಾನ್, ಮೀರ್‌ಸಾಧಿಕ್ ನಂತಹ ಪಾತ್ರಗಳನ್ನು ಮಾಡಿ ಅನೇಕ ಸಾರಿ ಬೆಳ್ಳಿಯ ಪದಕ ಪಡೆದಿರುತ್ತಾರೆ. ಇನ್ನು ಒಂದೇ ಕಣ್ಣಿನ ವಾದಿರಾಜಾಚಾರ್‌ರಂತೂ ಪ್ರೇಕ್ಷಕರನ್ನು ಹೊಟ್ಟೆ ಹುಣ್ಣಾಗುವಂತೆ ನಗಿಸುತ್ತಿದ್ದರು. ಇವರು ವೇದಿಕೆಯ ಮೇಲೆ ನಿಂತು ಪ್ರೇಕ್ಷಕರನ್ನು ನೋಡಿದರೆ ಸಾಕು

ಸಭೆಗೆ ಸಭೆಯೇ ನಗುತ್ತಿತ್ತಂತೆ. ಇವರ ಜೊತೆಗೆ ಸಿದ್ದಯ್ಯ ಹರಪನಹಳ್ಳಿ, ಬುಕ್ಕಿಟಗಾರ್ ಕೃಷ್ಣಪ್ಪ ಪಿಸ್ಸೆ, ಸುಣಗಾರ್ ಮಲ್ಲಪ್ಪ (ಬೃಹನ್ನಳೆ ಪಾತ್ರ) ಮೈಲಪ್ಪ, ಎಚ್.ಪಿ. ಶಿವಮೂರ್ತ್ಯಪ್ಪ ಎಂ.ಎಂ. ರುದ್ರಯ್ಯ, ಜಿ. ಪರಪ್ಪ ಎಚ್.ಪಿ., ಚೆನ್ನಪ್ಪ, ಶೇಖರಪ್ಪ ಸಾಸ್ವೆಹಳ್ಳಿ, ಪ್ರಹ್ಲಾದಾಚಾರ್ ಮುಂತಾದ ನಟರೆಲ್ಲ ಹೊನ್ನಾಳಿಯ ರಂಗಕಲೆಗೆ ವಿಭಿನ್ನ ಪಾತ್ರಗಳ ಮುಖೇನ ಸಂಕೀರ್ಣವಾದ ಕಲಾಜಗತ್ತನ್ನು ಅನಾವರಣಗೊಳಿಸಿದ್ದಾರೆ.

ಹೊನ್ನಾಳಿಯ ನವಾಬರಾದ ಷೇರ್‌ಖಾನ್‌ರವರೂ ನಾಟಕ ಕಲೆಗೆ ತುಂಬಾ ಪ್ರೋತ್ಸಾಹ ನೀಡಿದ್ದಾರೆ. ಇದರ ಜೊತೆಗೆ ಶ್ರೀ ಗುರು ಚೆನ್ನಪ್ಪಸ್ವಾಮಿಗಳ ಆಶೀರ್ವಾದವಂತೂ ನಿರಂತರ ದೊರೆಯುತ್ತಲೇ ಇದೆ. 1964–65ರಲ್ಲಿ ಕೆ. ಹೊನ್ನಪ್ಪನವರ ನಿರ್ದೇಶನದಲ್ಲಿ ಚಿತ್ರಾಂಗದ ನಾಟಕವನ್ನು ನಿರ್ದೇಶಿಸಿದಾಗ ಚಿತ್ರಾಂಗದ ಪಾತ್ರವನ್ನು ಈಗ ಪಟ್ಟಣ ಪಂಚಾಯ್ತಿ ಸದಸ್ಯರೂ, ಮಾಜಿ ಅಧ್ಯಕ್ಷರೂ ಆದ ಎನ್.ಆರ್. ಪರಮೇಶ್ವರಪ್ಪನವರು ಸ್ತ್ರೀಯರೇ ನಾಚಿ ನೀರಾಗುವಷ್ಟು ರಸಭರಿತವಾಗಿ ಅಭಿನಯಿಸುತ್ತಿದ್ದರು. ಈ ನಾಟಕ 5–6 ವರ್ಷಗಳ ಕಾಲ ನಡೆಯಿತು.

ಇಲ್ಲಿಂದ ಮುಂದೆ ಪೌರಾಣಿಕ ನಾಟಕಗಳ ಪ್ರದರ್ಶನ ಕ್ಷೀಣಿಸುತ್ತಾ ನಡೆದು ಮುಂದೆ 'ಉದಯ ಕಲಾ ಮಂಡಳಿ' ಎಂಬ ಸಂಸ್ಥೆ ಹುಟ್ಟಿಕೊಂಡಿತು. ಇದು 13 ನಾಟಕಗಳನ್ನು ಪ್ರದರ್ಶಿಸಿತು. ಈಗಿನ ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ಸಹಕಾರದಲ್ಲಿ ಕಂದಗಲ್ ಹಣಮಂತರಾಯರ "ಭೀಮಾರ್ಜುನ ಗರ್ವಭಂಗ" ಅರ್ಥಾತ್ 'ಜಗನ್ಮಾಯ' ನಾಟಕಕ್ಕೆ ಬಾರ್ಕೂರ್ ಬಾಷಾಸಾಬ್‌ರಿಂದ ತರಿಸಿಕೊಂಡ ವಸ್ತ್ರಾಭರಣಗಳನ್ನು ಬಳಸಿದರು. ಇವು ಶ್ರೀ ಕೃಷ್ಣದೇವರಾಯ ಸಿನಿಮಾಕ್ಕೆ ಬಳಸಿದ ವಸ್ತುಗಳೇ ಆಗಿದ್ದವು. ಇದರಲ್ಲಿನ ಭೀಮನ ಪಾತ್ರವನ್ನು ಎಸ್. ನರಸಿಂಹಯ್ಯನವರು ಅಭಿನಯಿಸಿದ್ದರು.

ಇನ್ನು ಶ್ರೀ ಚನ್ನೇಶ್ವರ ಮಹಾತ್ಮೆ ನಾಟಕದಲ್ಲಿ ಈಗಿನ ಪಟ್ಟದಗುರುಗಳಾದ ಶ್ರೀ ಸಿದ್ಧಪಾದ ಶಿವಾಚಾರ್ಯ ಸ್ವಾಮಿಗಳು ಶ್ರೀಶೈಲ ಮಲ್ಲಿಕಾರ್ಜುನನ ಪಾತ್ರವನ್ನು ಅದ್ಭುತವಾಗಿ ಅಭಿನಯಿಸಿ ಪ್ರೇಕ್ಷಕರ ಮೆಚ್ಚುಗೆ ಗಳಿಸಿದರು. ಇದರಲ್ಲಿ ಮಂಗಳೂರಿನ ಪಟ್ಟಾಧ್ಯಕ್ಷರು, ಎಚ್.ಎಂ. ಚೆನ್ನಬಸಯ್ಯ, ಡಾ.ಕೊಟ್ರೇಶ್ ಉತ್ತಂಗಿ, ದಿಡಗೂರು ಚೆನ್ನಪ್ಪ ಮುಂತಾದ ಕಲಾವಿದರು ಭಾಗವಹಿಸಿ ನಾಟಕಕ್ಕೆ ಜೀವಕಳೆ ತುಂಬಿದರು. ಇದನ್ನು ಶ್ರೀ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳೇ ಕುಳಿತು ನೋಡುತ್ತಿದ್ದರು.

ಇವರು ಪ್ರದರ್ಶಿಸುತ್ತಿದ್ದ ನಾಟಕಗಳೆಂದರೆ ಸುಕನಿವಾಸ, ಹೇಮರೆಡ್ಡಿ ಮಲ್ಲಮ್ಮ, ಪವಿತ್ರ ಪ್ರೇಮ ಅರ್ಥಾತ್ ಮಂಗಳಾ ನನ್ನ ಅತ್ತಿಗೆ, ಬಸ್ ಕಂಡಕ್ಟರ್, ತೀರದ ಬಯಕೆ, ತವರೂರು, ಬಸ್ ಹಮಾಲ, ಸ್ತ್ರೀ ರತ್ನ, ಅಣ್ಣತಂಗಿ, ಗೌಡ್ರಗದ್ಲ, ರತ್ನಮಾಂಗಲ್ಯ

ಇತ್ಯಾದಿ ನಾಟಕಗಳು ಪ್ರದರ್ಶನಗೊಂಡವು. ಇದರಲ್ಲಿ ಭಾಗವಹಿಸಿದ್ದ ನಟರುಗಳೂ ಅಷ್ಟೇ ದೊಡ್ಡ ಸಂಖ್ಯೆಯವರು ಮೇಲೆ ಹೇಳಿದ ಕಲಾವಿದರ ಜೊತೆಗೆ ಎನ್.ಆರ್. ನಾಡಿಗ್, ಎನ್.ಆರ್. ಚಂದ್ರಪ್ಪ, ಬೆನಕಯ್ಯ, ಲಕ್ಷ್ಮಿನಾರಾಯಣ, ಎಚ್. ರಾಮಲಿಂಗಪ್ಪ, ವೈ.ಕೆ. ಮುದ್ದುಕೃಷ್ಣ, (ನಂತರ ಇವರು ಕನ್ನಡ ಸಂಸ್ಕೃತಿ ಇಲಾಖೆ ನಿರ್ದೇಶಕರಾದರು) ಚೆನ್ನಪ್ಪ, ಎಚ್. ಮಹಾಲಿಂಗಪ್ಪ, ಹುರುಳಿ ಬಸವರಾಜಪ್ಪ, ಎಚ್.ಎಂ. ಸದಾಶಿವಯ್ಯ, ಎಚ್.ಎಂ. ಚೆನ್ನಬಸಯ್ಯ, ಅನ್ನದಾನಯ್ಯ ಶಾಸ್ತ್ರಿ, ಕೆ.ಬಿ.ಎಚ್.ಎಂ. ಕೊಟ್ರಯ್ಯನವರು ನರಸಿಂಹಯ್ಯ, ಬಿ.ಆರ್. ಶಿವಮೂರ್ತಿ, ಕಾರ್ಗಲ್ ಕಾಡಸಿದ್ಧಪ್ಪ ಭಂಗಿಹನುಮಂತಪ್ಪ, ಈಶ್ವರಪ್ಪ, ಡಬ್ಬು ಚೆನ್ನಯ್ಯ, ಸುಣಗಾರ್ ರಂಗಪ್ಪ, ಜಟ್ಟಿರಾಯಪ್ಪ, ಮೈಲಪ್ಪ, ಸುಣಗಾರ್ ಮಂಜಪ್ಪ, ಎಂ.ಜಿ. ಚೆನ್ನಪ್ಪ ಇವರ ಜೊತೆಗೆ ಗುಬ್ಬಿ ಕಂಪನಿಯಲ್ಲಿ ಮ್ಯಾನೇಜರ್ ಆದ ಇಂದುಶೇಖರ್ ಹಾಗೂ ಶ್ರೇಷ್ಠ ನಟರಾದ ದಿವಂಗತ ಧೀರೇಂದ್ರ ಗೋಪಾಲ್ ಹಾಗೂ ಉದಯಕುಮಾರ್‌ರವರು ಬಂದು ಈ ನಾಟಕದಲ್ಲಿ ಭಾಗವಹಿಸಿದ್ದು ಹೊನ್ನಾಳಿಗೆ ಹೆಮ್ಮೆ ತರುವಂತಹ ವಿಚಾರವಾಗಿದೆ.

*ಅಭಿವ್ಯಕ್ತಿ ಕಲಾ ಸಂಸ್ಥೆ ಬೆಳೆದು ಬಂದ ದಾರಿ*

1973–74ರಲ್ಲಿ ಹೊನ್ನಾಳಿಯ ಚಿದಾನಂದಮೂರ್ತಿ ಮಹಮ್ಮದ್ ಇಕ್ಬಾಲ್ ಶೌಕತ್ ಆಲಿ, ಜಿ.ಎಸ್. ಬಸವರಾಜ್, ಅನ್ನದಾನಯ್ಯ ಶಾಸ್ತ್ರಿ, ಕುಮಾರ್, ಕೆ.ಇ.ಬಿ. ನೌಕರಿಯಲ್ಲಿದ್ದ ಪ್ರೇಂಕುಮಾರ್, ಶಿವಮೊಗ್ಗದ ಜಾರ್ಜ್ ಡಿಸೋಜ ಇವರೆಲ್ಲಾ ಸೇರಿ ಮೊದಲು ಆರಂಭಗೊಳಿಸಿದ್ದು ಆರ್ಕೆಷ್ಟ್ರಾ ಕಂಪನಿಯನ್ನು ಸತತ 2 ವರ್ಷಗಳ ಕಾಲ ನಡೆದ ಈ ಚಟುವಟಿಕೆ ರಂಗಕಲೆಯತ್ತ ತಿರುಗಿತು. ಎಚ್.ವಿ. ಶಶಿಧರ್ ನಿರ್ದೇಶನದಲ್ಲಿ 'ಕುದುರೆಮೊಟ್ಟೆ' ನಾಟಕ ತಯಾರಾಯಿತು. ನಂತರ 77ರಲ್ಲಿ 'ಹರಿದ್ರಕುಂಕುಮ' ನಂತರ 78ರಲ್ಲಿ ಸಿ.ಎಸ್. ವಿಜೇಂದ್ರರಾವ್ ನಿರ್ದೇಶನದಲ್ಲಿ ಶಿವಮೊಗ್ಗದಲ್ಲಿ ವಿಠಲ್‌ರವರು ಬರೆದ 'ಶಾರದಾ' ನಾಟಕವನ್ನು ಪ್ರಯೋಗಿಸಲಾಯಿತು. ಇದರಲ್ಲಿ ಬರುವ ದೃಶ್ಯಗಳನ್ನು ಪ್ರೇಕ್ಷಕರ ಅಭಿರುಚಿಗೆ ತಕ್ಕಂತೆ ಬದಲು ಮಾಡುವುದೇ ಮೋಜಾಗಿತ್ತು. ಗಂಭೀರ ದೃಶ್ಯಗಳನ್ನು ಬಿಟ್ಟು ಬರೀ ಹಾಸ್ಯ, ದೃಶ್ಯಗಳನ್ನಷ್ಟೇ ಅಭಿನಯಿಸಿಬೇಕಾಗಿತ್ತು.

1979ರಲ್ಲಿ ಬೀಡಿ ಅಂಗಡಿ ಕುಮಾರನ ಮುಖಾಂತರ ಪ್ರೇಂ ಕುಮಾರ್ ಭಂಡೀಗಡಿ ಅವರ ಪರಿಚಯವಾಗಿ ಅವರ ನಿರ್ದೇಶನದಲ್ಲಿ ನಾಟಕಗಳು ಮುಂದುವರೆದವು. ಅವರ ಕಲ್ಪನೆಯಿಂದ ಮೈದಾಳಿದ 'ಮೃತ್ಯು' ಮನುಷ್ಯನ ಅರಿಷಡ್ವರ್ಗಗಳನ್ನು ಪ್ರತಿನಿಧಿಸುವ ನಾಟಕ. ಇದು ಒಳ್ಳೆಯ ಪ್ರದರ್ಶನ ಕಂಡಿತು. 1979ರ ಕನ್ನಡ ರಾಜ್ಯೋತ್ಸವಕ್ಕೆ ಒಡೆಯರ್ ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿಗಳ ಸಮ್ಮುಖದಲ್ಲಿ ಶಿವಮೊಗ್ಗ ಸುಬ್ಬಣ್ಣ ಇವರ ಎದುರಿಗೇ ಈ ನಾಟಕವನ್ನು

ಅಭಿನಯಿಸಲಾಯಿತು. ಸಾವಿರಾರು ಜನರ ಮುಂದೆ ಪ್ರದರ್ಶಿತವಾದ ಈ ನಾಟಕಕ್ಕೆ ಪ್ರೇಕ್ಷಕರಿಂದ ಉತ್ತಮ ಪ್ರತಿಕ್ರಿಯೆ ದೊರೆಯಿತು. 1980ರಲ್ಲಿ ಹೊಸನಗರದಲ್ಲಿ ರಾಜ್ಯಮಟ್ಟದ ನಾಟಕ ಸ್ಪರ್ಧೆ ಏರ್ಪಡಿಸಿದಾಗ ಈ ನಾಟಕಕ್ಕೆ ಪಾರಿತೋಷಕ ಜೊತೆಗೆ 1000 ನಗದು ದೊರೆಯಿತು. ಹಾಗೂ ನಿರ್ದೇಶಕ ಪ್ರೇಮಕುಮಾರ್ ಭಂಡಿಗಡಿ ಇವರಿಗೆ ದಿಗ್ದರ್ಶಕ ಪ್ರವೀಣ ಎಂಬ ಬಿರುದು. ಪ್ರಶಸ್ತಿ ಮೊತ್ತ 1000 ರೂ.ಗಳಲ್ಲಿ ಅಭಿವ್ಯಕ್ತಿ ಪ್ರಕಾಶನದಲ್ಲಿ ಮೃತ್ಯು ನಾಟಕದ ಪುಸ್ತಕ ಪ್ರಕಟಿಸಿತು.

ಅದೇ ವರ್ಷ ಕಾಗಿನೆಲೆಯಲ್ಲಿ ಪುಟ್ಟಣ್ಣ ಕಣಗಾಲ್ ಕಲಾಕ್ಷೇತ್ರದ ಬಯಲು ರಂಗಮಂದಿರವನ್ನು ಉದ್ಘಾಟಿಸಲು ಪುಟ್ಟಣ್ಣಕಣಗಾಲ್‌ರವರು, ಗುಬ್ಬಿವೀರಣ್ಣನವರ ಧರ್ಮಪತ್ನಿ ಬಿ. ಜಯಮ್ಮನವರು ಹಾಗೂ ಕನ್ನಡ ಪ್ರಭದ 'ಚಿತ್ರಪ್ರಭ' ಸಂಪಾದಕರಾದ ನಾರಾಯಣ ಸ್ವಾಮಿ ಅವರು ಬಂದಂತಹ ಸಂದರ್ಭದಲ್ಲಿ ಹೊನ್ನಾಳಿಯ ಪ್ರೇಂಕುಮಾರ್‌ರವರ ಕನಸಿನಂತೆ ಹಾಗೂ ಅಭಿವ್ಯಕ್ತಿ ಗೆಳೆಯರ ಬಳಗದ ಮನವಿಯ ಮೇರೆಗೆ ಜೊತೆಗೆ ಕಾಗಿನೆಲ್ಲಿ ಸಿದ್ಧಯ್ಯನವರ ಸಹಕಾರದಿಂದ ಅದೇ ದಿನ ಹೊನ್ನಾಳಿಯಲ್ಲಿ ಅಭಿವ್ಯಕ್ತಿ ಕಲಾಸಂಸ್ಥೆ ಉದ್ಘಾಟನೆಗೊಂಡಿತು. ಅಂದಿನಿಂದ ಇಂದಿನ ತನಕ ಸುದೀರ್ಘ ಕ್ರಿಯಾಶೀಲ ಚಟುವಟಿಕೆಯಿಂದ ನಡೆದುಕೊಂಡು ಬಂದಿದೆ. ಈ ಮಧ್ಯೆ ಪ್ರೇಂಕುಮಾರ್‌ರವರ "ಅಸ್ಪೃಶ್ಯರು ಅರ್ಥಾತ್ ಅಮಾನುಷರು" ನಾಟಕ ಕಾರ್ಗಲ್‌ನಲ್ಲಿ ನಡೆದ ರಾಜ್ಯಮಟ್ಟದ ನಾಟಕ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನವನ್ನು ಗಳಿಸಿತು.

ನಿರ್ದೇಶಕ ಪ್ರೇಂಕುಮಾರ್‌ರವರಿಗೆ ಶ್ರೇಷ್ಠ ನಿರ್ದೇಶಕ ಪ್ರಶಸ್ತಿ ದೊರೆಯಿತು. ಇದನ್ನು ನೀಡಿದವರು ಕನ್ನಡದ ಖ್ಯಾತ ಸಾಹಿತಿ, ನಾ. ಡಿಸೋಜ ಅವರು. ಅಭಿವ್ಯಕ್ತಿಯ ಅಂದಿನ ನಟರಾಗಿ ಪಿ.ಎಂ. ಪರಮೇಶ್, ತುಳಸಿದಾಸ, ರವಿಭಾರ್ಗವ, ಅಬ್ಬಾಸ್, ಕಾಂತೇಶ್, ಆಶಾಭಾರ್ಗವ, ತದನಂತರದಲ್ಲಿ ಅಂದರೆ 82–83ರಲ್ಲಿ ಎಚ್.ಸಿ. ಚಿದಾನಂದ ಮೂರ್ತಿ ಮತ್ತು ಹೆಚ್.ಎಸ್. ಸಿದ್ಧರಾಜುರವರು ನೀನಾಸಂ ರಂಗಶಿಕ್ಷಣದಲ್ಲಿ ದಿ.ಟಿ.ಎ. ಪದವಿ ಮುಗಿಸಿ ಬಂದಾಗ ಕೆ.ವಿ. ಸುಬ್ಬಣ್ಣ, ಚಿದಂಬರ ರಾವ್ ಜಂಬೆ, ಡಾ. ಶಿವರಾಮಕಾರಂತ್, ಜಯತೀರ್ಥ ಜೋಷಿ, ಪ್ರಸನ್ನ ಪ್ರೊ. ಅಂಕೂರ್, ಶ್ರೀಮತಿ ವಿಶ್ವಾಮಿತ್ರ ಹಾಗೂ ಮಣಿಪುರದ ಇತರ ನಿರ್ದೇಶಕರ ಗರಡಿಯಲ್ಲಿ ಪಳಗಿದ ಹಾಗೂ ಅವರ ರಂಗ ಕನಸನ್ನು ನನಸು ಮಾಡುವ ಆಸೆಯಿಂದ ತಮ್ಮ ಬದುಕನ್ನು ನಾಟಕ ಕಲೆಗೆ ಮೀಸಲಾಗಿಟ್ಟರು. ಅದರಲ್ಲೂ ವೃತ್ತಿ ಮತ್ತು ಪ್ರವೃತ್ತಿಗಳೆರಡರಲ್ಲೂ ಒಂದೇ ಆಗಿರುವ ಎಚ್.ಸಿ. ಚಿದಾನಂದ ಮೂರ್ತಿಯವರು ನಿರ್ದೇಶಕರಾಗಿ ಕೆಲಸ ಮಾಡಿದ್ದಾರೆ. ಇವರ ನಿರ್ದೇಶನದಲ್ಲಿ ಪ್ರೇಂಕುಮಾರವರ 'ಮೃತ್ಯು' ನಾಟಕ 100 ಪ್ರದರ್ಶನಗಳನ್ನು ಕಂಡಿದೆ, ಇದರ ಜೊತೆಗೆ 92 ರಿಂದ 2006ರವರೆಗೆ ಹೊನ್ನಾಳಿಯ ಯುವಕರನ್ನು ಬಳಸಿಕೊಂಡು ಸಾವಿರಾರು ಬೀದಿ ನಾಟಕ ಪ್ರದರ್ಶನಗಳನ್ನು ನೀಡಿದ್ದಾರೆ.

ಈ ಅಭಿವ್ಯಕ್ತಿ ಸಂಸ್ಥೆಯ ಹೆಮ್ಮೆಯ ಹೆಗ್ಗಳಿಕೆ ಎಂದರೆ 1985ರಲ್ಲಿ “ನೀ.ನಾ.ಸಂ. ತಿರುಗಾಟದ ತಂಡವನ್ನು ಹೊನ್ನಾಳಿಗೆ ಕರೆಸಿದ್ದು. ಕೆ.ಜಿ. ಕೃಷ್ಣಮೂರ್ತಿ ನಿರ್ದೇಶನದಲ್ಲಿ ಬಿ.ವಿ. ವೈಕುಂಠರಾಜುರವರ ‘ಉದ್ಭವ’ ನಾಟಕವನ್ನು ಅಭಿನಯಿಸಿದ್ದು ಇದರ ಇನ್ನೊಂದು ಸಾಧನೆ. ಇದಲ್ಲದೆ 1999ರಲ್ಲಿ ಸಿ. ಬಸವಲಿಂಗಯ್ಯನವರ ನಿರ್ದೇಶನದಲ್ಲಿ ಎರಡೂವರೆ ತಿಂಗಳುಕಾಲ ರಂಗಕಾರ್ಯಾಗಾರ ನಡೆಸಿ ಕುವೆಂಪುರವರ ‘ಸಾಲದ ಮಗು, ಭಾರತಿಪ್ರಿಯರ ‘ಮೋಚಿ’ ಬಿದರಳ್ಳಿ ನರಸಿಂಹಮೂರ್ತಿಯವರ ‘ತಲೆಬಳಸುವ ಕಲೆ’ ಹಾಗೂ ಬೆಸಗರಹಳ್ಳಿ ರಾಮಣ್ಣನವರ ‘ಗಾಂಧಿ’ ಕತೆಗಳನ್ನು ನಾಟಕದಲ್ಲಿ ಅಳವಡಿಸಿ 2 ದಿನ ಪ್ರದರ್ಶಿಸಲಾಯಿತು.


2006ರಲ್ಲಿ ಜನವರಿ 9ರಂದು ‘ಒಂದು ಪಯಣದ ಕಥೆ’ ತುಮರಿ ಕಿನ್ನರ ಮೇಳದ ತಂಡದೊಂದಿಗೆ ‘ಅಭಿವ್ಯಕ್ತಿ ರಂಗ ಸಂಚಾರವನ್ನು ಖ್ಯಾತ ಕಲಾವಿದರಾದ ದಿಡಗೂರು ಚೆನ್ನಪ್ಪನವರಿಂದ ಉದ್ಘಾಟಿತವಾಗಿ ಸತತ 12 ತಿಂಗಳುಕಾಲ ಹೆಚ್.ಸಿ. ಚಿದಾನಂದಮೂರ್ತಿ ನಿರ್ದೇಶನ ಹಾಗೂ ನೇತೃತ್ವದಲ್ಲಿ ‘ಕಿಂದರ ಜೋಗಿ’, ಗಂಗಾಜಮುನಾ, ಬೆಪ್ಪರಾಜ, ನೀ ನನಗಿದ್ದರೆ ನಾ ನಿನಗೆ ಇತ್ಯಾದಿ ನಾಟಕಗಳು ನಡೆದಿವೆ. ಈ ಮಧ್ಯೆ 1994ರಲ್ಲಿ ಬಿದರಳ್ಳಿ ನರಸಿಂಹಮೂರ್ತಿ ಯವರ ‘ಸೋಗಿಲು’ ಕತೆಯನ್ನು ‘ಅಲ್ಲಾರಾಂ’ ನಾಟಕವಾಗಿ ಪರಿವರ್ತಿಸಿ ಸತತ ಮೂರು ಪ್ರದರ್ಶನಗಳನ್ನು ನೀಡಿದೆ. ಇದರ ಜೊತೆಗೆ ಕೃಷ್ಣ ಮಾಸಡಿಯವರ ‘ನಂಬಿಕೆಗಳು’ ಕಥೆಯಾಧರಿಸಿದ ನಾಟಕವು ಸಹ ಅನೇಕ ಪ್ರದರ್ಶನಗಳನ್ನು ಕಂಡಿದೆ. ಹೀಗೆ ನಾಟಕ, ಬೀದಿ ನಾಟಕದ ಮುಖಾಂತರ ಬೆಳ್ಳಿ ಹಬ್ಬ ಆಚರಿಸಿದೆ.

# ಹೊನ್ನಾಳಿ ಬೀದಿನಾಟಕ ಪರಂಪರೆ

ಜರ್ಮನಿಯ ನಾಟಕಕಾರ ಬ್ರೆಕ್ಟ್‌ನ 'ದಿ ಕಕೇಷಿಯನ್ ಚಾಕ್ ಸರ್ಕಲ್' ಮೊದಲ ಬೀದಿನಾಟಕ ಜಗತ್ತಿನಾದ್ಯಂತ ಪ್ರದರ್ಶಿಸಲಾಯಿತು. 'ಬಾದಲ್ ಸರ್ಕಾರ' ಭಾರತದಲ್ಲಿ ಅದಕ್ಕೆ ಚಾಲನೆ ನೀಡಿದರು. 'ಸಫ್ದರ್‌ಹಸ್ಮಿ' ಬೀದಿನಾಟಕ ಆಡುತ್ತಿರುವಾಗ ರಾಜಕೀಯ ದ್ವೇಷಕ್ಕೆ ಬಲಿಯಾದರು. ಬೀದಿ ನಾಟಕದ ಪ್ರಭಾವ ಕರ್ನಾಟಕದಲ್ಲಿ ಪ್ರಸನ್ನರವರ ನೇತೃತ್ವದಲ್ಲಿ 'ಸಮುದಾಯ' ತಂಡದಿಂದ 1976–77ರಲ್ಲಿ ಬೀದಿನಾಟಕ ಆರಂಭವಾಯಿತು. ಅವರ 'ಪತ್ರೆಸಂಗಪ್ಪನ ಕೊಲೆ' ತುರ್ತುಪರಿಸ್ಥಿತಿ ವಿರುದ್ಧವಾಗಿತ್ತು. ಇದೇ ಪರಂಪರೆ ಮುಂದೆ ಸಾಗಿತು. 1992ರಲ್ಲಿ ಕರ್ನಾಟಕ ಸರ್ಕಾರ ಸಾಕ್ಷರತೆಗಾಗಿ ಬೀದಿನಾಟಕ ಜಾಗೃತಿ, ಪ್ರದರ್ಶನಗಳನ್ನು ಹಳ್ಳಿ ಹಳ್ಳಿಗಳಲ್ಲಿ ಪ್ರಯೋಜಿಸಿತು. ಎಪ್ಪತ್ತರ ದಶಕದಲ್ಲೇ ಎ.ಎಸ್. ಮೂರ್ತಿ ಬೀದಿ ನಾಟಕಕ್ಕೆ ಹೊಸ ಆಯಾಮ ದಕ್ಕಿಸಿದವರು.

ಪೋರ್ಚುಗೀಸರ ವಶದಲ್ಲಿದ್ದ ಗೋವಾ ರಾಜ್ಯದ ವಿಮೋಚನೆಗಾಗಿ ಹೊನ್ನಾಳಿಯಿಂದ ಸ್ವಾತಂತ್ರ್ಯ ಹೋರಾಟಗಾರ ಹೆಚ್.ಎಸ್. ಪರಮೇಶ್ವರಯ್ಯ, ಕೇಶವರಾವ್ ಪೇಟ್‌ಕರ್ ಮತ್ತು ಇನ್ನೂ ಹಲವರು ಗೋವಾ ರಾಜ್ಯಕ್ಕೆ ಹೋಗಿ ಸ್ವಾತಂತ್ರ್ಯ ಕಹಳೆ ಊದಿದರು. ಇವರ ಆದರ್ಶ ನಡೆ–ನುಡಿಯನ್ನು ಅನುಸಿರಿಸಿರುವ ಹೆಚ್.ಸಿ. ಚಿದಾನಂದಮೂರ್ತಿಯವರು 1982–83ರಲ್ಲಿ ನೀ.ನಾ.ಸಂ. ರಂಗ ಶಿಕ್ಷಣ ಪದವಿಯನ್ನು ಮುಗಿಸಿ ನಾಟಕಕಾರ ನಿರ್ದೇಶಕ ಮತ್ತು ಗಾಯಕರಾಗಿ 1992ರಲ್ಲಿ ಸಾಕ್ಷರತೆಗಾಗಿ ಹೊನ್ನಾಳಿ ತಾಲ್ಲೂಕನ್ನು ಆಯ್ಕೆ ಮಾಡಿಕೊಂಡು 165 ಹಳ್ಳಿಗಳಲ್ಲಿ ದಿನಕ್ಕೆ ನಾಲ್ಕು ಕಡೆ ನಾಟಕಗಳನ್ನು ಪ್ರದರ್ಶಿಸುತ್ತಾ ರಾಜಕೀಯ ಜಾಗೃತಿ ಮೂಡಿಸುವಲ್ಲಿ ಯಶಸ್ವಿಯಾಗಿದ್ದಾರೆ.

1992–93ರಲ್ಲಿ ಹಾಸನದಲ್ಲಿ 'ಭಾರತ ವಿಜ್ಞಾನ ಸಮಿತಿ' ಯ ತಂಡಕ್ಕೆ ಬೀದಿನಾಟಕಗಳತರಬೇತಿ ನೀಡಲಾಯಿತು. ಹೀಗೆ ಪ್ರತಿ ವರ್ಷವು ರಂಗ ಮಂದಿರಗಳಲ್ಲಿ ಸಿದ್ಧಗೊಂಡ ನಾಟಕಗಳನ್ನು ನಿರ್ದೇಶಿಸಿ ಪ್ರದರ್ಶನ ನೀಡುತ್ತಾ 1999ರಲ್ಲಿ 'ಅಖಿಲ ಭಾರತ ವಿಜ್ಞಾನ ಪರಿಷತ್', ಪ್ರಾಯೋಜಿಸಿದ 'ಜನಾರೋಗ್ಯ' ಸಭೆ 2000 ರಾಜ್ಯ ನಿರ್ದೇಶಕರಾಗಿ ನಾಟಕಗಳನ್ನು ನಿರ್ದೇಶಿಸಿ ದಾವಣಗೆರೆ ಜಿಲ್ಲೆಯಲ್ಲಿ ನಾಟಕಗಳನ್ನು ಪ್ರದರ್ಶಿಸುತ್ತಾ ಅಖಿಲ ಭಾರತ ಮಟ್ಟದಲ್ಲಿ ಕೊಲ್ಕಾತ್ತದಲ್ಲಿ ನಡೆದ ಈ 'ಜನಾರೋಗ್ಯ' ಸಭೆಯ ಆಂದೋಲನದಲ್ಲಿ ಭಾಗವಹಿಸಿದರು.



ಚಿದಾನಂದ ಮೂರ್ತಿಯವರ ಬೀದಿ ನಾಟಕವೊಂದರ ದೃಶ್ಯ

2008ರಲ್ಲಿ ಅಖಿಲ ಭಾರತ ಮಟ್ಟದಲ್ಲಿ ನಡೆದ 'ರೆಡ್‌ರಿಬ್ಬನ್ ಎಕ್ಸ್‌ಪ್ರೆಸ್', ರೈಲಿನಲ್ಲಿ ಹೆಚ್.ಐ.ವಿ. ಏಡ್ಸ್ ಕುರಿತು 'ರೋಗವೇ ಮನುಷ್ಯ' ಮತ್ತು ಇನ್ನೂ ಹಲವು ನಾಟಕಗಳಲ್ಲಿ ತರಬೇತಿ ಹೊಂದಿ ಶಿವಮೊಗ್ಗದಿಂದ ಪ್ರಾರಂಭಗೊಂಡು ಬೆಳಗಾಂನವರೆಗೆ ನಾಟಕಗಳನ್ನು ಪ್ರದರ್ಶಿಸುತ್ತಾ 'ರೆಡ್‌ರಿಬ್ಬನ್ ಎಕ್ಸ್‌ಪ್ರೆಸ್', ರೈಲನ್ನು ಗೋವಾದ ಕಡೆ ಈ ತಂಡ ಬೀಳ್ಕೊಟ್ಟಿತು.

ವಿಶ್ವ ಮಟ್ಟದ ಜನಾರೋಗ್ಯ ಸಭೆ 2000ದ ಅಂತಿಮ ಆಂದೋಲನ ಬಾಂಗ್ಲಾದೇಶ ಢಾಕಾದಲ್ಲಿ ನಡೆಯಿತು. ಹೀಗೆ ನಿರ್ದೇಶಕ ಹೆಚ್.ಸಿ. ಚಿದಾನಂತಮೂರ್ತಿಯವರು 2009ರಲ್ಲಿ 'ಭಾರತಿಯ ರಂಗಭೂಮಿ ಸೇನೆ' ಎಂಬ ತಂಡವನ್ನು ಹವ್ಯಾಸಿ ಯುವ ನಟರೊಂದಿಗೆ ಕಟ್ಟಿ ಅದರ ನಾಯಕನಾಗಿ ಶಿಕ್ಷಣ, ಆರೋಗ್ಯ, ಗ್ರಾಮಸ್ವಚ್ಛತೆ, ಶೌಚಾಲಯ, ಉದ್ಯೋಗ ಖಾತ್ರಿ ಜನಾಧಿಕಾರ ಜನಾಂದೋಲನ ಇನ್ನೂ ಹಲವಾರು ಯೋಜನೆಗಳಲ್ಲಿ ರಾಜ್ಯಾದ್ಯಂತ ಸುಮಾರು ಆರು ಸಾವಿರ ಬೀದಿ ನಾಟಕ ಪ್ರದರ್ಶನಗಳನ್ನು ಹಳ್ಳಿಗಳ ಅಭಿವೃದ್ಧಿಯ ದಿಶೆಯಿಂದ ಸಾಕ್ಷರತಾ ದಿಕ್ಕಿನಲ್ಲಿ ಪ್ರದರ್ಶಿಸಿದ್ದಾರೆ. ತಮ್ಮ 58ನೇ ವಯಸ್ಸಿನಲ್ಲಿ ಉತ್ಸಾಹಿ ಯುವಕರಂತೆ ರಂಗಭೂಮಿಯ ಉನ್ನತಿಗಾಗಿ ನಲವತ್ತು ವರ್ಷಗಳ ಸುದೀರ್ಘ ರಂಗಭೂಮಿ ಸೇವೆಯೊಂದಿಗೆ 2014ರಲ್ಲಿ ನಿಧನರಾದರು.

# ಜಗಳೂರು ತಾಲ್ಲೂಕು ರಂಗಭೂಮಿ

ಪಕ್ಕಾ ಬಯಲು ಸೀಮೆಯ ಬರದನಾಡು ಜಗಳೂರು. ಆದರೆ ಇಲ್ಲಿನ ಜಾನಪದ ರಂಗಭೂಮಿಗೆ ಬಡತನವಿಲ್ಲ. ಯಕ್ಷಗಾನ–ಮೂಡಲಪಾಯುಗಳಿನ್ನೂ ಇಲ್ಲಿ ಜೀವಂತವಾಗಿವೆ. ಸಿದ್ದಮ್ಮನಹಳ್ಳಿ ದಾಸರು ಅಂತಹ ರಂಗ ಚಟುವಟಿಕೆಗಳಿಂದ ಪ್ರಸಿದ್ಧರಾಗಿದ್ದಾರೆ. ಕರಿಬಂಟನ ಕಾಳಗ, ಗಿರಿಜಾ ಕಲ್ಯಾಣದಂತಹ ದೊಡ್ಡಾಟಗಳನ್ನು ಆಡುವ ಈ ಭಾಗದ ಕಲಾವಿದರಿಗೆ ಕುರುಕ್ಷೇತ್ರ, ಅಕ್ಷಯಾಂಬರ, ರಕ್ತಮುಕುಟ, ವೀರಅಭಿಮನ್ಯು, ಹೇಮರೆಡ್ಡಿಮಲ್ಲಮ್ಮ, ಮದಕರಿನಾಯಕ ಈ ಎಲ್ಲಾ ಐತಿಹಾಸಿಕ , ಪೌರಾಣಿಕ ನಾಟಕಗಳೆಂದರೆ ಪಂಚಪ್ರಾಣ. ಹಳ್ಳಿ ಹಳ್ಳಿಗಳಲ್ಲೂ ಜಾತ್ರೆ, ಪರಿಸೆಗಳ ನೆಪದಲ್ಲಿ ಬಳ್ಳಾರಿ, ದಾವಣಗೆರೆ ನಗರಗಳಿಂದ ಸುಭದ್ರಮ್ಮ ಮನ್ಸೂರ ಅವರಂತಹ ಅಭಿನೇತ್ರಿಯರನ್ನು ಆಮಂತ್ರಿಸಿ ಪ್ರದರ್ಶನಗಳನ್ನು ಹವ್ಯಾಸಕ್ಕಾಗಿ ಆಡುವ ರಂಗಾಸಕ್ತರು ತಾಲ್ಲೂಕಿನಲ್ಲಿದ್ದಾರೆ.

ಜಗಳೂರು, ಮುಷ್ಟೂರು, ದೊಡ್ಡಬೊಮ್ಮನಹಳ್ಳಿಯಲ್ಲಿ ಡ್ರಾಮಾ ಸೀನರಿಗಳು ಅರ್ಧಶತಮಾನದಿಂದಲೂ ತಮ್ಮ ಝುಗ ಮಗಿಸುವಿಕೆಗೆ ಹೆಸರು ಪಡೆದಿವೆ. ಅಂತೆಯೇ ಅವರು ತಾಲ್ಲೂಕಿನಲ್ಲಿ ಮಾತ್ರವಲ್ಲದೇ ಹೊರ ತಾಲ್ಲೂಕು–ಹೊರ ಜಿಲ್ಲೆಗಳಿಗೂ ರಂಗಸಜ್ಜಿಕೆಗಳನ್ನು ಒದಗಿಸಬಲ್ಲರು. ಆ ಮೂಲಕ ಸಂಚಾರಿ ರಂಗ ಚಟುವಟಿಕೆಗಳಿಗೆ ಇಂಬಾಗಿ ನಿಂತಿವೆ. ಹಾಗೆಯೇ ಇಂತಹ ರಂಗ ಚಟುವಟಿಕೆಗಳಿಗೆ ಇನ್ನಷ್ಟು ಕಾರಣರೆಂದರೆ ತಾಲ್ಲೂಕಿನಲ್ಲಿರುವ ಹಾರ್ಮೋನಿಯಂ ಮಾಸ್ತರುಗಳು. ತಬಲಾ ನುಡಿಸುವ ಕಲಾವಿದರು. ನಾಟಕದ ಹುಚ್ಚು ಹಚ್ಚಿಕೊಂಡ ಹವ್ಯಾಸಿ ಕಲಾವಿದರು ವರ್ಷಕ್ಕೆ ಒಂದಾದರೂ ನಾಟಕ ಆಡುವುದನ್ನು ಎಷ್ಟೇ ಬರಗಾಲವಿದ್ದರೂ ಬಿಟ್ಟವರಲ್ಲ.

ಕಂಪನಿ ನಾಟಕಗಳ ಶೈಲಿಯ ನಾಟಕಗಳನ್ನು ಬರೆದಿರುವ ಜಿ. ಮೂಗಬಸಪ್ಪ ನಾಲ್ಕು ದಶಕಗಳಿಂದ ನಾಟಕ ರಚನೆ, ನಿರ್ದೇಶನ, ಹಾರ್ಮೋನಿಯಂ ಮಾಸ್ತರರಾಗಿ ನೂರಾರು ನಾಟಕಗಳಿಗೆ ಸಂಗೀತ ನೀಡಿದ್ದಾರೆ.

ಬಿ. ಬಸವರಾಜಪ್ಪ, ಗಿಡ್ಡನಕಟ್ಟೆ ಗ್ರಾಮದವರಾದ ಇವರು ಗ್ರಾಮೀಣ ಪ್ರತಿಭೆ. ಹಾರ್ಮೋನಿಯಂ ಮಾಸ್ತರರಾಗಿ ಅನೇಕ ನಾಟಕಗಳಿಗೆ ಸಂಗೀತ ನೀಡಿದ್ದಾರೆ. ಜಗಳೂರಿನ ನಾಲಂದ ಕಲಾಭಾರತಿ ಆಧುನಿಕ ರಂಗತಂಡದೊಂದಿಗೆ ಜೋಕುಮಾರ ಸ್ವಾಮಿ,

ಸಂಜೀವಿನಿ, ಶರಣಸತಿ ಲಿಂಗಪತಿ ನಾಟಕಗಳಿಗೂ ಸಂಗೀತ ನೀಡಿದ್ದಾರೆ.

ಚೌಡೇಶ್ವರಿ ಮಹಾತ್ಮೆ ಎಂಬ ಯಕ್ಷಗಾನ ಶೈಲಿಯ ಪುರಾಣ ರಚನೆ ಇವರ ಬರಹದ ವಿಶೇಷ. ಕನ್ನಡ ಸಾಹಿತ್ಯ ಪರಿಷತ್ತು ಇವರನ್ನು ಗೌರವಿಸಿದೆ. ಗುರುಸಿದ್ದಾಪುರ-ಮಡ್ರಳ್ಳಿ, ಗ್ರಾಮದವರಾದ ಪಿ. ಚೌಡಪ್ಪ ಹಾರ್ಮೋನಿಯಂ ಮಾಸ್ತರರಾಗಿ ಹಲವಾರು ವೃತ್ತಿ ನಾಟಕಗಳಿಗೆ ಸಂಗೀತ ಸೇವೆ ಸಲ್ಲಿಸಿದ್ದಾರೆ. ಅದೇ ರೀತಿ ಈ ಗ್ರಾಮದ ಡಿ.ಪಿ. ಮಂಜುನಾಥ ನಾಟಕ ನಿರ್ದೇಶನ ಮಾಡುವಲ್ಲಿ ನಿಪುಣರು. ಖಾನಾಮಡುವಿನ ಮೂಲಿಮನೆ ಸಿದ್ದಪ್ಪ ಎಂಬ ಅಂಧ ಕಲಾವಿದ ಹತ್ತಾರು ನಾಟಕಗಳಿಗೆ ಹಾರ್ಮೋನಿಯಂ ನುಡಿಸಿದ್ದಾರೆ.

ಮುಸ್ತೂರಿನ ಜಿ.ಟಿ. ಚಂದ್ರಪ್ಪ ಪ್ರಸಾದನ ಕಲಾಕಾರರಾಗಿ ಈ ಭಾಗದಲ್ಲಿ ಹೆಸರು ಮಾಡಿದ್ದಾರೆ. ಹಾವೇರಿ, ಗದಗ ಜಿಲ್ಲೆಗಳಿಗೂ ಇವರ ಪ್ರಸಾದನ ಕಲೆಯ ವಿಸ್ತಾರ ಹರಡಿಕೊಂಡಿದೆ. ಹಿರೇಮಲ್ಲನ ಹೊಳೆಯ ಎಚ್.ಎಸ್. ವೆಂಕಟೇಶ್ ಕಾಂಗೋ ಹಾಗೂ ಡೋಲಕ್ ನುಡಿಸುವಲ್ಲಿ ರಂಗ ಪ್ರಾವೀಣ್ಯ ಮೆರೆದವರು. ನೂರಾರು ನಾಟಕಗಳಿಗೆ ತಮ್ಮ ವಾದ್ಯಗಳ ಸಾಥ್ ನೀಡಿದ್ದಾರೆ.

***********

## ಜಗಳೂರು ತಾಲ್ಲೂಕು ಪ್ರಮುಖ ರಂಗಕಲಾವಿದರು

| | | |
|---|---|---|
| ರಾಮಚಂದ್ರಪ್ಪ | - | ಕೆಚ್ಚೇನಹಳ್ಳಿ |
| ನರಸಿಂಹಪ್ಪ | - | ತೋರಣಗಟ್ಟೆ |
| ಚನ್ನಬಸಪ್ಪ | - | ಜ್ಯೋತಿಪುರ |
| ಚಿದಾನಂದಪ್ಪ | - | ಕ್ಯಾಸೇನಹಳ್ಳಿ |
| ನಾಗೇಂದ್ರಪ್ಪ | - | ದೇವಿಪುರ |
| ಚಂದ್ರಶೇಖರಪ್ಪ | - | ಬಿದರಕೆರೆ |
| ನಾಗಪ್ಪ | - | ಮರಿಕುಂಟೆ |
| ಶರಣಪ್ಪ ರೆಡ್ಡಿ | - | ಮಲ್ಲಾಪುರ |
| ಸರ್ಪಣ್ಣ | - | ಹಿರೇ ಅರಕೆರೆ |
| ರಂಗಪ್ಪ | - | ಮೀನಗರಹಳ್ಳಿ |
| ಓಬಣ್ಣ | - | ಗೌಡೀಕಟ್ಟೆ |
| ತಿಪ್ಪೇಸ್ವಾಮಿ | - | ನಿಬಗೂರು |
| ಕೆ.ಬಿ. ರೇವಣಸಿದ್ದಪ್ಪ | - | ಹೊಸಕೆರೆ |

# ನಾಲಂದ ಕಲಾಭಾರತಿ ರಂಗತಂಡ

1982ರಲ್ಲಿ ಆರಂಭಗೊಂಡ ನಾಲಂದ ಕಲಾಭಾರತಿ ತಂಡವು ಜಗಳೂರಿನಲ್ಲಿ ಆಧುನಿಕ ರಂಗ ನಾಟಕಗಳನ್ನು ಪ್ರದರ್ಶನ ಮಾಡಿದೆ. ಅಶೋಕ ಬಾದರದಿನ್ನಿಯವರಿಂದ ಎರಡು ರಂಗ ತರಬೇತಿ ಶಿಬಿರಗಳನ್ನು ನಡೆಸಿದೆ. ಹಾಗೆಯೇ ಟಿ.ಬಿ. ಸೊಲಬಕ್ಕನವರಿಂದ ದೊಡ್ಡಾಟದ ತರಬೇತಿ ಶಿಬಿರಗಳನ್ನು ಜರುಗಿಸಿದೆ.

ಆರಂಭದ ದಿನಗಳಲ್ಲಿ ಬಿಳಿಕಸ, ತ್ಯಾಗಿ, ಕಲಿತಕಳ್ಳ, ಟಿಂಗರಬುಡ್ಡಣ್ಣ ನಾಟಕಗಳಿಂದ ರಂಗ ಚಟುವಟಿಕೆಗಳನ್ನು ತಂಡ ಆರಂಭಿಸಿತು. ಡಿ.ಟಿ. ಚನ್ನಕೇಶವಮೂರ್ತಿಯವರ ನಿರ್ದೇಶನದಲ್ಲಿ 'ಕರಿಬಂಟ' ರಂಗ ಮಂಚವೇರಿತು. ಬಾದರದಿನ್ನಿ ನಿರ್ದೇಶನದಲ್ಲಿ ಮೃಚ್ಛಕಟಿಕ, ಶರಣಸತಿ ಲಿಂಗಪತಿ, ನೀನಾಸಂ ಪದವೀಧರೆ, ಎಸ್.ಡಿ. ಶೈಲಶ್ರೀ ನಿರ್ದೇಶನದಲ್ಲಿ ಕಂಬಾರರ ಸಾಂಬಶಿವ ಪ್ರಹಸನ. ಎಂ. ಬಸವಪ್ಪನವರ ನಿರ್ದೇಶನದಲ್ಲಿ ಜೋಕುಮಾರಸ್ವಾಮಿ, ಎಸ್. ಚಿದಾನಂದ ನಿರ್ದೇಶನದಲ್ಲಿ ಸಂಜೀವಿನಿ, ಕೆರೆಗೆಹಾರ ರಂಗ ನಾಟಕಗಳು ಪ್ರದರ್ಶನ ಕಂಡಿವೆ.

ಶರಣಸತಿ ಲಿಂಗಪತಿಗೆ ಉಡುಪಿಯಲ್ಲಿ ಜರುಗಿದ ನಾಟಕ ಸ್ಪರ್ಧೆಯಲ್ಲಿ ಅಭಿನಯ ಮತ್ತು ನಿರ್ದೇಶನಕ್ಕಾಗಿ ಪ್ರಥಮ, ಸಂಗೀತಕ್ಕೆ ತೃತೀಯ ಬಹುಮಾನ ದೊರಕಿವೆ. ಕಲಾಭಾರತಿ ಕೆಲವು ರೂಪಕಗಳನ್ನು ಸಿದ್ಧಪಡಿಸಿದ್ದು, ಕಿಸಾಗೌತಮಿ, ಪುಣ್ಯಕೋಟಿ, ಕರ್ತೆಧರ್ಮ ಇವು ಪ್ರಮುಖ ರೂಪಕಗಳು. ತಂಡದಲ್ಲಿ ಪ್ರಸಾಧನ, ಧ್ವನಿ, ಬೆಳಕು, ಸಂಗೀತದಲ್ಲಿ ನಿಪುಣರಾದ ಕಲಾವಿದರಿದ್ದುದು ತಂಡದ ಮತ್ತೊಂದು ವಿಶೇಷ.

ಅಮರಭಾರತಿ ವಿದ್ಯಾ ಕೇಂದ್ರದ ಆಶ್ರಯದಲ್ಲಿ ಕಾಲೇಜಿನ ಬಯಲು ರಂಗ ಮಂದಿರದಲ್ಲಿ ತಂಡ ತನ್ನ ಚಟುವಟಿಕೆಗಳನ್ನು ಅಂದು ದಶಕಕಾಲ ನಿರಂತರಗೊಳಿಸಿತು. ಡಾ. ಟಿ. ತಿಪ್ಪೇಸ್ವಾಮಿ ಅವರ ಮಾರ್ಗದರ್ಶನದಲ್ಲಿ ಎಸ್.ಬಿ. ರೇವಣ್ಣ, ಎಲ್.ಎಂ. ಪ್ರಭಾಕರ ಇತರರು ಕಲಾ ತಂಡದ ಚಟುವಟಿಕೆಗೆ ಶ್ರಮಿಸುತ್ತಿದ್ದಾರೆ. ಇದೇ ಊರಿನ ಹುಸೇನ್ ಮಿಯಾ ಅವರ ರಂಗ ಪ್ರೋತ್ಸಾಹವು ಜಗಳೂರಿನಲ್ಲಿ ಜನಜನಿತ.

ಕಲಾಭಾರತಿ ಬೇರೆ ಊರುಗಳಿಂದಲೂ ಹೆಸರಾಂತ ರಂಗತಂಡಗಳನ್ನು ಕರೆಸಿ ರಂಗ ಪ್ರದರ್ಶನ ನೀಡಿದೆ. ದಾವಣಗೆರೆಯ ಪ್ರತಿಮಾ ಸಭಾ, ಹೆಗ್ಗೋಡಿನ ನೀನಾಸಂ, ಸಾಣೇಹಳ್ಳಿಯ ಶಿವಸಂಚಾರದ ನಾಟಕಗಳು ಜಗಳೂರಿನಲ್ಲಿ ಪ್ರದರ್ಶನ ನೀಡಿ ರಂಗಾಸಕ್ತರಿಗೆ ಖುಷಿಕೊಟ್ಟಿವೆ.

# ಓಬಳೇಶ್ ಎಂಬ ರಂಗಸಂಪತ್ತು

● ಡಾ. ಮಂಜುಶ್ರೀ ಕಡಕೋಳ

ದನ ಕಾಯುವ ಬೇಡರ ಆ ಹುಡುಗ ಜಗಳೂರು ತಾಲ್ಲೂಕು ಬಿದರಕೆರೆ ಗ್ರಾಮದ ಚಿನ್ನಪ್ಪ-ತಿಪ್ಪಮ್ಮ ದಂಪತಿಗಳ ಏಕೈಕ ಮಗ. ಅಂತಹ ದನಗಾಹಿ ಹುಡುಗ ಕನ್ನಡ ರಂಗಭೂಮಿಯ ವರನಟ ಡಾ. ರಾಜ್‌ಕುಮಾರ್ ಸಮ ಸಮಕ್ಕೆ ಬೆಳೆಯುತ್ತಾನೆಂದು ಯಾವ ಜ್ಯೋತಿಷಿಯೂ ಕಾರಣಿಕ ಹೇಳಿರಲಿಲ್ಲ. ಹಾಗೆ ಹೇಳಲು ಹುಡುಗನಲ್ಲಾಗಲಿ, ಹೆತ್ತ ಅಪ್ಪ ಅಮ್ಮಗಳಲ್ಲಾಗಲಿ ಉಲ್ಲೇಖಿಸಬಹುದಾದ ರಂಗಸಿರಿತನದ ಸಣ್ಣ ಸುಳಿವುಗಳಿರಲಿಲ್ಲ. ಆ ಹುಡುಗನ ಹೆಸರು ಬಿ. ಓಬಳೇಶ್. ತಾವು ಶತದಡ್ಡರು ಮಗನಾದರೂ ಓದಿ ಜಾಣನಾಗಲೆಂದು ಅವನನ್ನು ಶಾಲೆಗೆ ಹಾಕುತ್ತಾರೆ. ಅದೇನೇನೋ ಫಜೀತಿ ಪಟ್ಟು ಹುಡುಗ ಮೂರನೇ ಈಯತ್ತೆ ಮುಗಿಸಿ, ಮುಂದಕ್ಕೆ ಹೆಜ್ಜೆ ಇಡಲಿಲ್ಲ. ಇದ್ದೊಬ್ಬ ಮಗ ಹಾಳಾಗದೇ ಹೇಗಾದರೂ ಬದುಕಿಕೊಂಡಿರಲೆಂದು ಹೆತ್ತವರು ಸುಮ್ಮನಾಗುತ್ತಾರೆ.

ಹುಡುಗನಲ್ಲಿಯ ಕಲಾಕಾಂಕ್ಷೆ ಕುಡಿಯೊಡೆದು ಊರಲ್ಲಿಯ ಬಯಲಾಟ, ದೊಡ್ಡಾಟಗಳಲ್ಲಿ ಕುಣಿದಾಡುತ್ತದೆ. ಹಾಗೆ ಕುಣಿಯುತ್ತಾ ಕುಣಿಯುತ್ತಾ "ಸುಭದ್ರಾ ಕಲ್ಯಾಣ"ದಲ್ಲಿ ಅರುಂಧತಿ ಪಾತ್ರದ ಮೂಲಕ ಎಲ್ಲರ ಮನ ಗೆಲ್ಲುವಂತಾಗುತ್ತದೆ. ತದ ನಂತರ ಆತನ ಆತ್ಮಸಾಕ್ಷಿ ಕ್ರಿಯಾಶೀಲ ರಂಗಭೂಮಿಯೆಡೆಗೆ ಓಡುತ್ತದೆ. 1947ರ ಸುಮಾರಿಗೆ ಸಂತೆಬೆನ್ನೂರಲ್ಲಿ ಶ್ರೀ ಜಯಲಕ್ಷ್ಮೀ ನಾಟಕ ಸಂಘವು ಮೊಕ್ಕಾಂ ಮಾಡಿತ್ತು. ಪಾತ್ರ ಮಾಡಬೇಕೆಂದು ಕಂಪನಿಗೆ ಹುಡುಗ ಓಡೋಡಿ ಬಂದ. ಅಲ್ಲಿ ಸಿಕ್ಕಿದ್ದು ನಟ ನಟಿಯರು ಧರಿಸಿದ ಉಡುಗೆ, ಬಣ್ಣದ ಬಟ್ಟೆಗಳ ಕೊಳೆ ತೊಳೆಯುವ ಕೆಲಸ. ಹುಡುಗ ಹೇಸಲಿಲ್ಲ.

ಅವನಲ್ಲಿ ಅಭಿನಯದ ಹುಚ್ಚು, ರಂಗಭೂಮಿಯ ಕಿಚ್ಚು-ಕೆಚ್ಚು ಕುಣಿದಾಡುತ್ತಿದ್ದವು. ಅದು ಎಲ್ಲವನ್ನು ಮರೆಸುತ್ತದೆ. ಅಂತಹ ಹುಚ್ಚಿನಿಂದಲೇ ಆತ ಕನ್ನಡ ರಂಗಭೂಮಿಯೇ ಉಲ್ಲೇಖಿಸಬೇಕಾದಂತಹ ಕಲಾವಿದನನ್ನಾಗಿ ರೂಪಿಸುತ್ತದೆ. ಅವನೊಳಗಿನ ಅಭಿಜಾತ ಕಲೆ ಅರಳಲು ಅದೆಲ್ಲ ಬೇಕಿತ್ತು. ಶ್ರದ್ಧೆಯಿಂದಲೇ ನಾಟಕ ಕಂಪನಿಯಲ್ಲಿ ಸಿಕ್ಕ ಕೆಲಸ ಮಾಡಿದ. ಅವನಲ್ಲಿನ ಅಭಿಜಾತ ಪ್ರತಿಭೆಗಾಗಿ ರಂಗಭೂಮಿ ಹಸಿದು ಕುಂತಿತ್ತು. ಅಲ್ಲಿಂದ ಶುರುವಾದ ಬಣ್ಣದ ಬಟ್ಟೆ ತೊಳೆಯುವ ರಂಗಕಾಯಕದಿಂದ ಮುಖಕ್ಕೆ

ಬಣ್ಣ ಬಳಿದುಕೊಂಡು ಪ್ರೇಕ್ಷಕರು ಶಿಳ್ಳೆ ಹೊಡೆಯುವಂತಹ ಅಭಿನಯ ಚತುರನಾದ ಕತೆಯೇನು ಸಣ್ಣದಲ್ಲ. ಕಂಪನಿಯಿಂದ ಮರಳಿ ಬಿದರಕೆರೆಗೆ ಹೋಗಿ "ಮಂಜುನಾಥ ನಾಟ್ಯ ಸಂಘ" ಎಂಬ (1950) ಕಂಪನಿ ಕಟ್ಟಿ ಕೈಸುಟ್ಟುಕೊಳ್ಳುತ್ತಾನೆ.

ಆರಂಭದ ದಿನಗಳಲ್ಲಿ ಓಬಳೇಶ್ ಮಾಡುತ್ತಿದ್ದುದು ಸ್ತ್ರೀ ಪಾತ್ರಗಳನ್ನೇ. ತದ ನಂತರ ಹಾಸ್ಯ, ಹೀರೋ, ವಿಲನ್ ಹೀಗೆ ಸಮಗ್ರ ರಂಗಭೂಮಿಯಲ್ಲಿ ಬರಬಹುದಾದ ಎಲ್ಲ ಬಗೆಯ ಪಾತ್ರಗಳನ್ನು ಅಭಿನಯಿಸುವ ಮೂಲಕ ವೃತ್ತಿರಂಗಭೂಮಿಯ ಧ್ರುವತಾರೆ ಯೆನಿಸಿಕೊಂಡು 'ಹಾಸ್ಯ ಚಕ್ರವರ್ತಿ' ಬಿರುದಿಗೆ ಭಾಜನರಾದರು. ಜಯಲಕ್ಷ್ಮಿ ನಾಟಕ ಸಂಘದಲ್ಲಿ ಮಾಡುತ್ತಿದ್ದ ಸ್ತ್ರೀ ಪಾತ್ರ ಕಂಡ ಆ ಕಾಲದ ಪ್ರಸಿದ್ಧ ಶ್ರೀ ಹಾಲಸಿದ್ದೇಶ್ವರ ನಾಟಕ ಕಂಪನಿ ಮಾಲೀಕರಾದ ಕುಡುಗೋಲು ಚೆಟ್ಟೆಪ್ಪನವರು ಈ ಅಭಿನೇತ್ರಿಯನ್ನು ಹೇಗಾದರೂ ಮಾಡಿ ತಮ್ಮ ಕಂಪನಿಗೆ ಕರೆದೊಯ್ಯಬೇಕೆಂದು ಮನಸು ಮಾಡಿ ಕಲಾವಿದೆಯನ್ನು ಭೇಟಿ ಮಾಡಿದಾಗ 'ಅವಳು ಓಬಳೇಶ್' ಎಂಬುದು ತಿಳಿಯುತ್ತದೆ. ಕಡೆಗೂ ತಮ್ಮ ಕಂಪನಿಗೆ ಕರೆದೊಯ್ದು ರಂಗಸೇವೆಗೆ ಅವಕಾಶ ಮಾಡಿಕೊಡುತ್ತಾರೆ.



ಪ್ರಸಿದ್ಧ 'ಖಾದಿಸೀರೆ' ನಾಟಕದಲ್ಲಿ ಯಶೋಧರಮ್ಮ, ಬಿ. ಓಬಳೇಶ್ ಮತ್ತು ಕೆ.ಬಿ. ಶಿವರಾಜ್

ಡಾ. ರಾಜಕುಮಾರ್ ದಾವಣಗೆರೆಯಲ್ಲಿ ಕ್ಯಾಂಪು ಮಾಡಿದಾಗ ಎಚ್ಚಮನಾಯಕ ನಾಟಕದ ಎಚ್ಚಮನಾಯಕನಾಗಿ ಅಭಿನಯಿಸುತ್ತಿದ್ದರೇ ಜಿ.ವಿ. ಅಯ್ಯರ್‌ಗೆ 'ಚಾಂದಖಾನ್' ಪಾತ್ರ, ತುರ್ತು ಕೆಲಸದ ನಿಮಿತ್ತ ಅಯ್ಯರ್ ಊರಿಗೆ ಹೋಗಿ ಬಿಡುತ್ತಾರೆ. ಅವರು ಮಾಡುತ್ತಿದ್ದ 'ಚಾಂದಖಾನ್' ಪಾತ್ರವನ್ನು ಕೆಲವೇ ತಾಸುಗಳಲ್ಲಿ ಸಿದ್ಧ ಮಾಡಿಕೊಂಡು ಓಬಳೇಶ್ 'ಚಾಂದಖಾನ್' ಪಾತ್ರ ಪೋಷಣೆ, ಅಮೋಘ ಅಭಿನಯ ನೀಡುವುದನ್ನು

ಕಣ್ಣಾರೆಕಂಡ ವರನಟ ರಾಜಕುಮಾರ್ ಓಬಳೇಶ್ ಅವರನ್ನು ನಾಟಕದಲ್ಲೇ ಅಪ್ಪಿ ತಮ್ಮ ಸಂತಸ ಹಂಚಿಕೊಳ್ಳುತ್ತಾರೆ. ಪ್ರೇಕ್ಷಕರಿಗೆ ಅದೂ ನಾಟಕದ ಸನ್ನಿವೇಶದಂತೆ ಭಾಸವಾಗುತ್ತದೆ.

ಇಂತಹ ಅಭಿಜಾತ–ಕಲಾವಿದ ಕರ್ನಾಟಕದ ಹೆಸರಾಂತ ಕಂಪನಿಗಳಾದ ಗೋಕಾಕ್ ಬಸವಣ್ಣೆಪ್ಪ ಕಂಪನಿ, ಹುಲಿಮನಿ ಸೀತಾರಾಮಶಾಸ್ತ್ರಿಗಳ ಕಂಪನಿ, ಎಂ.ಸಿ. ಮಹಾದೇವ ಸ್ವಾಮಿಗಳ ಕಂಪನಿ, ಕೆ. ಹಿರಣ್ಣಯ್ಯ ಮಿತ್ರ ಮಂಡಳಿ, ಬಳ್ಳಾರಿ ಲಲಿತಮ್ಮನವರ ನಾಟಕ ಕಂಪನಿಗಳಲ್ಲಿ, ತಮ್ಮ ಸ್ವಂತ ಕಂಪನಿಯಲ್ಲಿ ಅರ್ಧ ಶತಮಾನ ಕಾಲ ರಂಗಸೇವೆ ಮಾಡುತ್ತಾರೆ. ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕದಲ್ಲಿ ಕ್ಲಿಷ್ಟಕರವಾದ ಪಾತ್ರಗಳನ್ನು ಲೀಲಾಜಾಲವಾಗಿ ಅಭಿನಯಿಸಿ ಸಹಕಲಾವಿದರ, ನಾಟಕಕಾರರ, ಮಾಲೀಕರ, ಪ್ರೇಕ್ಷಕಪ್ರಭುಗಳ ಮನಸು ಗೆಲ್ಲುತ್ತಾರೆ.

ಬಾಲ್ಯದಲ್ಲೇ ಬಯಲಾಟದ ಗರಡಿಯಲ್ಲಿ ಪಳಗಿದ ಓಬಳೇಶ್, ನಾಟ್ಯಾಚಾರ್ಯ ಶ್ರೀನಿವಾಸ ಕುಲಕರ್ಣಿಯವರಲ್ಲಿ ಭರತ ನಾಟ್ಯವನ್ನು ಕಲಿಯುತ್ತಾರೆ. ರಂಗಭೂಮಿಗೆ ಅದನ್ನು ಸಮರ್ಥವಾಗಿ ಬಳಸಿಕೊಳ್ಳುತ್ತಾರೆ. ಅಷ್ಟು ಮಾತ್ರವಲ್ಲದೇ ಆತ ಉತ್ತಮ ಕುಸ್ತಿಪಟು ಕೂಡಾ ಆಗಿದ್ದರು. ರಂಗಭೂಮಿ ಆಖಾಡದಲ್ಲಿ ಇವರನ್ನು ಸೋಲಿಸಿದವರೇ ಇಲ್ಲ ಎನ್ನುವಂತೆ ಅಭಿನಯ, ನಾಟಕ ರಚನೆ, ರಾಜಕೀಯ ವಿಡಂಬನೆ, ಮೊನಚು ಮಾತುಗಳ ಮೂಲಕ ಪ್ರೇಕ್ಷಕ ಪ್ರಭುಗಳನ್ನು ಹಿಡಿದಿಡುವ ಚುಂಬಕಶಕ್ತಿ ಅವರಿಗಿತ್ತು. ಈ ಎಲ್ಲ ಹಿನ್ನೆಲೆಯುಳ್ಳ ಅವರು 1959ರಲ್ಲಿ "ವಿಜಯ ಕಲಾ ನಾಟಕ ಸಂಘ" ಸ್ಥಾಪಿಸಿ ಎರಡು ವರ್ಷಕಾಲ ನಡೆಸುತ್ತಾರೆ.

1964ರಲ್ಲಿ "ಶ್ರೀ ಓಂಕಾರೇಶ್ವರ ನಾಟ್ಯ ಸಂಘ"ವನ್ನು ಕಟ್ಟುತ್ತಾರೆ. ದಶಕ ಮಿಕ್ಕಿ ಹೆಚ್ಚುಕಾಲ ಕಂಪನಿ ಅತ್ಯಂತ ಯಶಸ್ವಿಯಾಗಿ ನಡೆಯುತ್ತದೆ. ಅವರ ಪತ್ನಿ ಯಶೋಧರಮ್ಮನವರ ಪಾತ್ರ ನೋಡಲು ಜನ ಮುಗಿ ಬೀಳುತ್ತಿದ್ದರು. ಮೃಡದೇವ ಗವಾಯಿ, ಅಪ್ಪುರಾಜ ಮುಧೋಳ, ಎಲಿವಾಳಸಿದ್ದಯ್ಯ, ಜುಬೇದಾಬಾನು ಸವಣೂರು, ದೊಡವಾಡ ಸಿದ್ದಯ್ಯ, ಹೀಗೆ ಸ್ಟಾರ್‌ಪಟ್ಟ ಕಟ್ಟಿಕೊಂಡ ಕಲಾವಿದರ ದಂಡು ಓಬಳೇಶ್ ಕಂಪನಿಯಲ್ಲಿತ್ತು. ತನ್ಮೂಲಕ ಕಂಪನಿ ಉತ್ತರ ಕರ್ನಾಟಕದಲ್ಲಿ ಮನೆ ಮಾತಾಯಿತು. ಗುಲ್ಬರ್ಗಾದಲ್ಲಿ ಮೂರು ವರ್ಷಕಾಲ ನಿರಂತರವಾಗಿ ಅವರ ಕಂಪನಿ ಕ್ಯಾಂಪ್ ಮಾಡಿ ಪ್ರದರ್ಶನ ನೀಡಿದೆ. ಆಗ ಪುಟ್ಟಪರ್ತಿಸಾಯಿಬಾಬಾ, ಪೂಜ್ಯದೊಡ್ಡಪ್ಪ ಅಪ್ಪ ಅವರು ಇವರ ನಾಟಕಗಳನ್ನು ನೋಡಿ ಸಂತಸ ಹಂಚಿಕೊಂಡಿದ್ದಾರೆ.

ಗುಲ್ಬರ್ಗಾದ ಶರಣ ಬಸವೇಶ್ವರ ದಾಸೋಹಕ್ಕೆಂದು ಆ ಕಾಲದಲ್ಲಿ ಈ ಕಂಪನಿ ಆರೂವರೆ ಲಕ್ಷ ರೂಪಾಯಿ ದೇಣಿಗೆ ಸಂಗ್ರಹಿಸಿ ದೇವಾಲಯಕ್ಕೆ ಅರ್ಪಿಸುತ್ತದೆ.

ಅಂದಿನ ಮುಖ್ಯಮಂತ್ರಿ ಎಸ್. ನಿಜಲಿಂಗಪ್ಪ, ಕೇಂದ್ರ ಮಂತ್ರಿ ಕೆಂಗಲ್ ಹನುಮಂತಯ್ಯ, ರಾಜಕೀಯ ಧುರೀಣರಾದ ವೀರೇಂದ್ರ ಪಾಟೀಲ್ ಮಹ್ಮದ್‌ಅಲಿ ಅವರು ವಿಶೇಷ ಕಾರ್ಯಕ್ರಮ ಏರ್ಪಡಿಸಿ ಮೂರು ತೊಲದ ಚಿನ್ನದ ಪದಕ ನೀಡಿ ಓಬಳೇಶ್ ಅವರನ್ನು ಗೌರವಿಸುತ್ತಾರೆ. ಕೇವಲ 24 ರೂಪಾಯಿ ಬಂಡವಾಳದೊಂದಿಗೆ ಆರಂಭಗೊಂಡ ಅವರ ಕಂಪನಿ ಯಾರೂ ಊಹಿಸದಷ್ಟು ಎತ್ತರಕ್ಕೇರುತ್ತದೆ. ದೈವ ಸಂಕಲ್ಪ, ಸಂಗೊಳ್ಳಿ ರಾಯಣ್ಣ ಚಲನಚಿತ್ರಗಳಲ್ಲೂ ಓಬಳೇಶ್‌ಗೆ ಅವಕಾಶ ಸಿಗುತ್ತದೆ.



ಮುಂಡೇಮಗ, ನಾಟಕದಲ್ಲಿ ಓಬಳೇಶ್ (ಜೀತ ಭಂಗಿ)
ಮತ್ತು ಗೌಡ್ರ ಜಯಣ್ಣ

ಓಬಳೇಶ್ ಓರ್ವ ಶ್ರೇಷ್ಠ ನಾಟಕಕಾರ-ರಾಗಿದ್ದರು. ಅವರು ಖಾದಿಸೀರೆ, ಮುಂಡೇಮಗ, ಮನಸೇ ಮಾಂಗಲ್ಯ, ಹೋಳಿ ಹುಣ್ಣಿಮೆ, ಬೆಳ್ಳಿಬಂಗಾರ, ತಳವಾರನ ತಕರಾರು ನಾಟಕಗಳನ್ನು ಪ್ರಕಟಿಸಿದ್ದಾರೆ. ಅಪ್ರಕಟಿತ ನಾಟಕಗಳೇ ಹೆಚ್ಚಿವೆ. ಖಾದಿಸೀರೆ ಮತ್ತು ಮುಂಡೇಮಗ ನಾಟಕಗಳು ಕರ್ನಾಟಕ ತುಂಬೆಲ್ಲಾ ಸಾವಿರಾರು ಪ್ರಯೋಗ ಕಂಡಿವೆ. ಮುಂಡೇಮಗ ನಾಟಕ ರಚನೆಗೆ ಮುನ್ನವೇ ಗುಲ್ಬರ್ಗಾ ಕ್ಯಾಂಪಿನಲ್ಲಿ ಮುಂದಿನ ಬದಲಾವಣೆ 'ಮುಂಡೇಮಗ' ಎಂದು ನಿತ್ಯವೂ ಅನೌನ್ಸ್ ಮಾಡುತ್ತಿದ್ದರೇ ಸಹ ಕಲಾವಿದರಿಗೆ ಗಾಬರಿ ಹುಟ್ಟಿಸುತ್ತಿತ್ತು. ಒಂದೇ ದಿನದಲ್ಲಿ ನಾಟಕ ಬರೆದು ಮುಗಿಸಿ ಎರಡೇ ದಿವಸಗಳಲ್ಲಿ ನಾಟಕ ಕೂಡಿಸಿ ಕಲಾವಿದರಿಗೇ ಅಚ್ಚರಿ ಹುಟ್ಟಿಸಿದ್ದರು. ನಾಟಕ ಭರ್ಜರಿಯಾಗಿ ಇನ್ನೂರು ಪ್ರಯೋಗ ಮೀರಿ ಮುನ್ನಡೆಯಿತು.

ಗುಲ್ಬರ್ಗಾ ಕ್ಯಾಂಪಿನಲ್ಲಿ ಖಾದಿಸೀರೆ ಮುನ್ನೂರು ಪ್ರಯೋಗ ಕಂಡಿತು. ಮುಂಡೇಮಗ ಇನ್ನೂರು ಪ್ರಯೋಗ. ಇವರ ಕಂಪನಿಗಾಗಿಯೇ ಶ್ರೀ ಶರಣ ಬಸವೇಶ್ವರ ಮಹಾತ್ಮೆ ನಾಟಕವನ್ನು ಮಾಂಡ್ರೆಕವಿಗಳು ಬರೆದು, ಯಶಸ್ವಿಯಾಗಿ ಪ್ರಯೋಗಕ್ಕೆ ಅನುವು ಮಾಡಿಕೊಡುತ್ತಾರೆ. ಓಬಳೇಶ್ ಸಾಂಸ್ಕೃತಿಕ ಸ್ನೇಹದ ಕಕ್ಷೆ ಬಲು ದೊಡ್ಡದು. ಶರಣ ಬಸವೇಶ್ವರ ನಾಟಕಕ್ಕೆ ನವೀನ ಸೀನರಿಗಳನ್ನು ರಚಿಸಲು ಶಿಲ್ಪಾಚಾರ್ ಪೇಂಟರ್ ಆಗಮನ. ಆಗಿನ ಕಾಲದಲ್ಲೇ ನಲವತ್ತು ಸಾವಿರ ರೂಪಾಯಿಗಳನ್ನು ಖರ್ಚು ಮಾಡುತ್ತಾರೆ ಓಬಳೇಶ್.

ಶರಣ ಬಸವೇಶ್ವರ ಪಾತ್ರ ಮಾಡಲು ಪಂಚಾಕ್ಷರ ಗವಾಯಿಗಳ ಪಟ್ಟದ ಶಿಷ್ಯ ಸಿದ್ಧರಾಜ ಉಜ್ಜಯಿನಿಮಠ ಬರುತ್ತಾರೆ. ರಂಗಗೀತೆಗಳಿಗೆ ರಾಗ ಸಂಯೋಜನೆ ಮಾಡಲು

ಮಲ್ಲಿಕಾರ್ಜುನ ಮನ್ಸೂರ ಶಿಷ್ಯ ಪಂಡಿತ ಸಿದ್ಧರಾಮ ಜಂಬಲದಿನ್ನಿ ಹೀಗೆ ಅವರದು ಸರ್ವಾಂಗ ಸುಂದರ ರಂಗ ತಂಡ. ನಾಟಕ 251 ಪ್ರಯೋಗಗಳನ್ನು ದಾಖಲಿಸುತ್ತದೆ. 101ನೇ ಪ್ರದರ್ಶನಕ್ಕೆ ಆಲ್ ಇಂಡಿಯಾ ಕಾಂಗ್ರೆಸ್ ಅಧ್ಯಕ್ಷ (1968) ಎಸ್. ನಿಜಲಿಂಗಪ್ಪ ಆಗಮಿಸಿ ಅದ್ದೂರಿ ಕಾರ್ಯಕ್ರಮ ಜರುಗುತ್ತದೆ. ಸಹಸ್ರಾರು ಪ್ರೇಕ್ಷಕರಿಗೆ ಹೋಳಿಗೆ ಊಟ ಹಾಕಿಸುತ್ತಾರೆ.

ಅವರ ಕಂಪನಿಗೆ ಗುಬ್ಬಿ ಕಂಪನಿಯ ಬಿ.ಪಿ. ಸಣ್ಣಪ್ಪನವರ ಮ್ಯಾನೇಜ್‌ಮೆಂಟ್. ಓಬಳೇಶ್ ಅವರಿಗೆ ವ್ಯವಹಾರ ಗೊತ್ತಿರಲಿಲ್ಲ. ಸಣ್ಣಪ್ಪನವರಿಗೆ ಪಾತ್ರ ಮಾಡಲು ಬರುತ್ತಿರಲಿಲ್ಲ. ಕಂಪನಿಯೊಂದಕ್ಕೆ ಉತ್ತಮ ಮ್ಯಾನೇಜರ್ ಇಲ್ಲದಿದ್ದಲ್ಲಿ ಕಂಪನಿ ದಿವಾಳಿ. ಸಣ್ಣಪ್ಪನವರಿಗೆ ಕಂಪನಿಯ ಯಶಸ್ಸಿನ ಶ್ರೇಯಸ್ಸು ಸಲ್ಲಬೇಕು. ಗೌಡ್ರಗದ್ಲ ನಾಟಕ ಕರ್ನಾಟಕದಲ್ಲಿ ಮನೆಮಾತಾದದ್ದು ಇತಿಹಾಸ, ಅದಕ್ಕೆ ಮೊದಲೇ ಓಬಳೇಶ್ ಬರೆದ 'ಗೌಡ್ರಗುದ್ದಾಟ' ನಾಟಕ ಅಷ್ಟೇ ಪ್ರಮಾಣದಲ್ಲಿ ಮನೆ ಮನೆಮಾತಾಗಿತ್ತು. ಓಬಳೇಶ್ ಸ್ನೇಹಜೀವಿ. ನೂರು ಮಂದಿ ಕಲಾವಿದರು-ನೇಪಥ್ಯ ಕಲಾವಿದರು ಇವರ ಪ್ರೀತಿ ಆದರಗಳ ನೆರಳಲ್ಲಿ ಒಡನಾಡಿದವರು. ಅನೇಕ ಸಾಹಿತಿಗಳ ಒಡನಾಟ ಓಬಳೇಶ್ ಅವರಿಗಿತ್ತು. ಓಬಲೇಶ್‌ಗೆ ರಾಜಕೀಯ ಪ್ರಜ್ಞೆ ಸೊಗಸಾಗಿತ್ತು.

ಅ.ನ.ಕೃ., ತ.ರಾ.ಸು. , ನಾಡಿಗೇರ ಕೃಷ್ಣರಾಯ, ಬೀಚಿ, ಶ್ರೀರಂಗರು ಇವರಿಗೆ ಅತ್ಯಂತ ಆಪ್ತರಾಗಿದ್ದರು. ಓಬಳೇಶ್ ಅವರ ನಾಟಕಗಳನ್ನು ನೋಡಿ, ಅವರ ನವಿರು ಹಾಸ್ಯದ ಚುರುಕು ಸಂಭಾಷಣೆಗಳನ್ನು ಕೇಳಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ. ಪುಢಾರಿ ಪೂರ್ಣಯ್ಯ ಎಂಬ ಕೃಷ್ಣರಾಯರ ನಾಟಕವನ್ನು ಓಬಳೇಶ್ ಪರಿಣಾಮಕಾರಿಯಾಗಿ ಸ್ಟೇಜ್ ಮಾಡಿಸುತ್ತಾರೆ.

ಅಭಿನಯಿಸುವುದೆಂದರೆ ಮನುಷ್ಯನೊಳಗಿನ ಎಲ್ಲ ಅಹಂಕಾರಗಳನ್ನು ಕಳೆದುಕೊಳ್ಳುವುದು. ಇದು ಓಬಳೇಶ್ ರಂಗಭೂಮಿಯಲ್ಲಿ ತಾನು ಕಂಡು ಕೊಂಡ ಬದುಕಿನ ಪರಮಸತ್ಯವೆಂದು ನಂಬಿಕೊಂಡಿದ್ದರು. ಹೀಗೆ ಅರ್ಧಶತಮಾನಗಳ ಕಾಲ ಜಗಳೂರು ತಾಲ್ಲೂಕು ಬಿದರಕೆರೆ ಎಂಬ ಹಳ್ಳಿಯ ಈ ಹೈದ ಕರ್ನಾಟಕ ರಂಗಭೂಮಿಯಲ್ಲಿ ದಂತಕತೆಯಾಗುತ್ತಾರೆ. ನಟನಾಗಿ, ನಾಟಕಕಾರನಾಗಿ, ಕಂಪನಿ ಮಾಲೀಕನಾಗಿ ಹೀಗೆ ರಂಗಭೂಮಿಯ ಎಲ್ಲಾ ಪ್ರಕಾರಗಳಲ್ಲೂ ಅವರದು ಐತಿಹಾಸಿಕ ದಾಖಲೆ. 1985ರಲ್ಲಿ ಅವರು ದಾವಣಗೆರೆಯ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆಗೂ ಹಣವಿಲ್ಲದೇ ಅಸು ನೀಗುತ್ತಾರೆ.

ಅವರ ತರುವಾಯ ಅವರ ಮಕ್ಕಳಾದ ಬಿ.ಓ.ವಿಜಯಲಕ್ಷ್ಮಿ, ವಸುಂಧರಾ, ಜ್ಯೋತಿಕಲಾ ಅವರು ದಾವಣಗೆರೆ ನಗರದಲ್ಲಿದ್ದುಕೊಂಡು ರಂಗಭೂಮಿಯ ಅಭಿನಯ ಕಾಯಕದಲ್ಲಿ ನಿರತರಾಗಿದ್ದಾರೆ. ಮೊಮ್ಮಕ್ಕಳು ಕೂಡಾ ನೃತ್ಯ ನಟಿಯರು.

# ಹರಿಹರ ರಂಗಭೂಮಿ : ಒಂದು ಪಕ್ಷಿ ನೋಟ

ತಣ್ಣಗೆ ಆಗಾಗ ತುಂಬಿ ಹರಿಯುವ ತುಂಗಭದ್ರೆ, ಅದರ ದಡದಲ್ಲಿರುವ ಹರಿಹರ ಉತ್ತರ ದಕ್ಷಿಣ ಕರ್ನಾಟಕವನ್ನು ಕೂಡಿಸಿಕೊಡುವ ಊರು. ಕರ್ನಾಟಕದ ವೃತ್ತಿ ರಂಗಭೂಮಿಯ ತವರೂರಾದ ದಾವಣಗೆರೆಗೆ ರಂಗಭೂಮಿ ಕುರಿತು ಬಹು ದೊಡ್ಡ ಇತಿಹಾಸವಿರುವಾಗ ಪಕ್ಕದ ಪುಟ್ಟ ಪುಟ್ಟ ಗಿರಣಿಗಳ ಸಣ್ಣ ಶಹರ ಹರಿಹರಕ್ಕೆ ಅಂತಹ ಐತಿಹ್ಯವಿಲ್ಲದಿದ್ದರೂ ರಂಗಕ್ಕೆ ಅದರ ಕೊಡುಗೆ ಕಡಿಮೆ ಏನಲ್ಲ.


ಅರವತ್ತು ವರ್ಷಗಳ ಹಿಂದೆಯೇ ಪಂಚಾಕ್ಷರ ಗವಾಯಿಗಳ, ಹಾನಗಲ್ಲ ಕುಮಾರೇಶ್ವರ ನಾಟಕ ಕಂಪನಿ ಈ ತಾಲ್ಲೂಕಿನ ಅನೇಕ ಊರುಗಳಲ್ಲಿ ಕ್ಯಾಂಪು ಮಾಡಿ "ಹೇಮರೆಡ್ಡಿ ಮಲ್ಲಮ್ಮ" ನಾಟಕ ಪ್ರಯೋಗಿಸಿ ಇತಿಹಾಸ ನಿರ್ಮಿಸಿದೆ. ಹುಲಿಮನಿ ಸೀತಾರಾಮ ಶಾಸ್ತ್ರಿಗಳ ಕಂಪನಿ, ಉಜ್ಜಯನಿ ಮಠದ ದೊಡ್ಡವಾಡ ಸಿದ್ದಯ್ಯನವರ ಕಂಪನಿ, ರಂಗಭೂಮಿಯ ವಿಶ್ವವಿದ್ಯಾಲಯವಾಗಿದ್ದ ಗೋಕಾಕ್ ಬಸವಣ್ಣೆಪ್ಪನವರ ಕಂಪನಿ, ಅರಿಶಿಣಗೋಡಿ ಕಂಪನಿ, ಪಡೇಸೂರ ಕಂಪನಿ, ಚಿಂದೋಡಿ ಕಂಪನಿ ಹೀಗೆ ಹತ್ತಾರು ವೃತ್ತಿ ಕಂಪನಿಗಳು ಹರಿಹರ ಶಹರ ಹಾಗೂ ಹಳ್ಳಿ ಹಳ್ಳಿಗಳಲ್ಲಿ ತಮ್ಮ ಪ್ರಯೋಗಗಳ ಸಾರ್ಥಕ್ಯ ಮೆರೆದಿವೆ.

ಗ್ರಾಮೀಣ ರಂಗಭೂಮಿಗೆ ಈ ತಾಲ್ಲೂಕಿನ ಕೊಡುಗೆ ಅಮೋಘವಾದುದು. ಕೊಂಡಜ್ಜಿ, ಬೆಳ್ಳೂಡಿ ಗ್ರಾಮಗಳು ದೊಡ್ಡಾಟದ ಆಡುಂಬೊಲ. 1989ರಲ್ಲಿ ನಾನು (ಮಲ್ಲಿಕಾರ್ಜುನ ಕಡಕೋಳ) ಹಾಗೂ ಟಿ.ಬಿ. ಸೊಲಬಕ್ಕನವರ, ಮಲ್ಲಿಕಾರ್ಜುನ ಜಾಧವ ಹಾಗೂ ಕೊಂಡಜ್ಜಿ ಗ್ರಾಮಸ್ಥರ ನೆರವಿನಿಂದ ಒಂದು ವಾರಕಾಲ ದೊಡ್ಡಾಟೋತ್ಸವವನ್ನು ಕೊಂಡಜ್ಜಿಯಲ್ಲಿ ನೆರವೇರಿಸಿದೆವು. ಮಹಿಳಾ ತಂಡವೊಂದರಿಂದ ದೊಡ್ಡಾಟ ಆಡಿಸಿದ ಏಕೈಕ ಹೆಗ್ಗಳಿಕೆ ಆಗ ಜರುಗಿ ಪ್ರತಿನಿತ್ಯವೂ ಓರ್ವ ಹಿರಿಯ ದೊಡ್ಡಾಟ ಕಲಾವಿದರನ್ನು ಸನ್ಮಾನಿಸಿದ ನೆನಪು ಈಗ ಪವಾಡ ಸದೃಶವಾಗಿ ನನ್ನನ್ನು ಕಾಡುತ್ತಿದೆ.

ಅದಕ್ಕೆ ಮುನ್ನ ಕೊಂಡಜ್ಜಿ ಬೆಟ್ಟದಲ್ಲಿ ಸಮುದಾಯದ ಅನೇಕ ರಂಗಶಿಬಿರಗಳು ಜರುಗಿವೆ. ರಂಗಾಯಣ ತರಬೇತಿಗೆ ಮೊದಲ ತಂಡದ ಅಭ್ಯರ್ಥಿಗಳ ಆಯ್ಕೆ

ಸಂದರ್ಶನ ಕೊಂಡಜ್ಜಿ ಬೆಟ್ಟದಲ್ಲೇ ಜರುಗಿದೆ. ಸಿ.ಜಿ.ಕೆ., ಗಂಗಾಧರ ಸ್ವಾಮಿ, ಪ್ರಸನ್ನ, ಬಿ.ವಿ. ಕಾರಂತ ಇನ್ನು ಮುಂತಾದ ರಂಗಶಿಬಿರ ಚಕ್ರವರ್ತಿಗಳು ಅಲ್ಲಿ ಯಶಸ್ವಿ ಶಿಬಿರ ನಡೆಸಿದ್ದಾರೆ. ಏಳು ವರ್ಷಗಳ ಹಿಂದೆ ಮತ್ತು ಜುಲೈ (2011) ತಿಂಗಳಲ್ಲಿ 5 ದಿನಗಳ ಕಾಲ ಇಪ್ಟಾ ಕಲಾವಿದರ ರಂಗ ಅಧ್ಯಯನ ಸಂಗೀತ ಶಿಬಿರ ಜರುಗಿತು. ಜಿ.ಕೆ. ಗೋವಿಂದರಾವ್, ಸಿದ್ದನಗೌಡ ಪಾಟೀಲ, ಮಲ್ಲಿಕಾರ್ಜುನ ಕಡಕೋಳ ಶಿಬಿರದಲ್ಲಿ ಉಪನ್ಯಾಸಕರಾಗಿದ್ದರು.

ಭಾನುವಳ್ಳಿ, ಹೊಳೆಸಿರಿಗೆರೆ, ಸಾರಥಿ, ಕೆ.ಬೇವಿನಹಳ್ಳಿ, ಮಲೆಬೆನ್ನೂರು ಇನ್ನೂ ಮೊದಲಾದ ಊರುಗಳಲ್ಲಿ ಆಗಾಗ ವೃತ್ತಿನಾಟಕಗಳು ಜರುಗುತ್ತಿರುವುದು ಅಲ್ಲಿನ ಹವ್ಯಾಸಿ ಕಲಾವಿದರ ವೃತ್ತಿರಂಗ ಪ್ರೀತಿಯ ಪ್ರತೀಕವಾಗಿದೆ. ಊರಮ್ಮನ ಜಾತ್ರೆಗೋ ಅಥವಾ ನಾಟಕಗಳ ಪ್ರಯೋಗಗಳಿಗಾಗಿಯೋ ಸಾಂಸ್ಕೃತಿಕ ಸಂದರ್ಭಗಳನ್ನು ಈ ಕಲಾಪ್ರೇಮಿಗಳು ಸೃಷ್ಟಿಸಿಕೊಂಡಿರುತ್ತಾರೆ.



ಭಾನುವಳ್ಳಿಯ ಕೃಷ್ಣಮೂರ್ತಿಯವರ ಶ್ರೀ ವೆಂಕಟೇಶ್ವರ ಡ್ರಾಮಾ ಸೀನ್ಸ್

ಅರ್ಧಶತಮಾನಕ್ಕೂ ಹಿಂದೆಯೇ ಈ ತಾಲ್ಲೂಕಿನ ಸಾರಥಿ ಗ್ರಾಮದಲ್ಲಿ ಡ್ರಾಮಾ ಸೀನರಿಗಳ ಸುಸಜ್ಜಿತ ರಂಗ ಪರಿಕರಗಳಿದ್ದವು. ಇವತ್ತಿನ ಹೆಸರಾಂತ ವೆಂಕಟೇಶ್ವರ ಡ್ರಾಮಾ ಸೀನರಿಗಳ ಮಾಲೀಕರಾದ ಭಾನುವಳ್ಳಿಯ ಶೆಟ್ಟರ ಶೇಷಪ್ಪನವರ ಸಾರಥಿ ಡ್ರಾಮಾ ಸೀನರಿಗಳಲ್ಲಿ ಗ್ಯಾಸ್ ಲೈಟುಗಳನ್ನು ಹೊರುವ ಕೆಲಸ ಮಾಡುತ್ತಿದ್ದರಂತೆ. ಇಂದು ಅವರ ಪುತ್ರ ದಿ॥ಕೃಷ್ಣಮೂರ್ತಿಯವರು ಅವರ ಮಗ ರಮೇಶ್ ಈ ತಾಲ್ಲೂಕಿನ ಏಕೈಕ ಡ್ರಾಮಾಸೀನರಿ ಹೊಂದಿದ ಖ್ಯಾತಿ ಉಳ್ಳವರು. ಕಳೆದ ಬಾರಿ ನಾಟಕ ಅಕಾಡೆಮಿ ಅವರಿಗೆ 25 ಸಾವಿರ ಸಹಾಯಧನ ನೀಡಿ ಸತ್ಕರಿಸಿದೆ. ಇಂತಹ ಅಪರೂಪದ ಮತ್ತೊಂದು ಸಂಗತಿ ಎಂದರೆ ನಾಟಕಗಳಲ್ಲಿ ಘಟಂ (ಗಡಿಗೆ) ನುಡಿಸುವ ಪರಿಪಾಟ ಅತ್ಯಪರೂಪ. ರಾಮತೀರ್ಥದ ವೀರಾಚಾರ್ ಎಂಬ ಕಲಾವಿದ ರಂಗಭೂಮಿಗೆ ಅಂತಹ ಅಪರೂಪತೆಯನ್ನು ಸೃಷ್ಟಿಸಿದವರು ಅಂತಹ ಕೀರ್ತಿ ಈ ತಾಲ್ಲೂಕಿಗೆ ಸಲ್ಲುತ್ತದೆ.

ತುಂಗಭದ್ರೆಯ ದಡದಲ್ಲೊಂದು ಸಮಾಧಿ ಇದೆ. ಅದು ಈ ನಾಡಿನ ಹೆಸರಾಂತ ವೃತ್ತಿರಂಗನಟ ದಿವಂಗತ ನಂಜುಂಡಯ್ಯನವರ ಸಮಾಧಿ. ರಂಗಭೂಮಿಯಲ್ಲಿ "ಆಂಜನೇಯನ" ಪಾತ್ರಕ್ಕೆ ಅವರಿಗೆ ರಾಷ್ಟ್ರಮಟ್ಟದ ಖ್ಯಾತಿ ತಂದು ಕೊಟ್ಟ ಕೀರ್ತಿ ಹರಿಹರದ ಈ ನಂಜುಂಡಯ್ಯನವರದು. ಕೆರೂರು ಕಂಪನಿ, ಮನ್ಸೂರು ಕಂಪನಿ ಮತ್ತು ಇನ್ನೂ ಅನೇಕ ಕಂಪನಿಗಳಲ್ಲಿ, ಹೊರ ರಾಜ್ಯಗಳಲ್ಲೂ ಅವರಿಗೆ ಆಂಜನೇಯನ ಪಾತ್ರಕ್ಕಾಗಿ ವಿಶೇಷ ಸ್ಥಾನಮಾನಗಳಿದ್ದವು. ಮೂಲತಃ ಹಾಸನದವರಾದ ದಿ॥ ಧೀರೇಂದ್ರ ಗೋಪಾಲರ ಕರ್ಮಭೂಮಿ ಹರಿಹರ. ಅವರ ಪತ್ನಿ ಸುನಂದಮ್ಮ ಸಹ ರಂಗನಟಿ. ಧೀರೇಂದ್ರಗೋಪಾಲ ಚಿತ್ರರಂಗದಲ್ಲಿ ಮಿಂಚಿದರೂ ಅವರ ರಂಗಾಭಿನಯದ ಬೇರುಗಳು ಸದಾ "ಮುದುಕನ ಮದುವೆ" ಯಂತಹ ವೃತ್ತಿ ನಾಟಕಗಳಲ್ಲಿ ಮತ್ತು ಈ ಬಗೆಯ ಸಂಭಾಷಣೆಯ ಕ್ಯಾಸೆಟ್ಟುಗಳಲ್ಲಿ ಇರುತ್ತಿದ್ದವು.

ಇದೇ ಸರಹದ್ದಿಗೆ ಸೇರುವ ಕೆ.ಇ.ಬಿ.ಯ ನಾಗೇಶ್, ಕೊಂಡಜ್ಜಿ ಗಣೇಶ್ ಕೆಲವು ಕಾಲ ಸರ್ವಿಸ್ ಕಂಪನಿ ಕಟ್ಟಿ ಕೈ ಸುಟ್ಟು ಕೊಂಡವರು. ಶಕುನಿ ಪಾತ್ರಕ್ಕೆ ಹೇಳಿ ಮಾಡಿಸಿದ ಗಜಾನನ ಕಂಪನಿಯ ಪ್ರಸಿದ್ಧ ರಂಗನಟ ಕುಲಕರ್ಣಿಯವರು ಹರಿಹರದವರು. ಏಕಪಾತ್ರಾಭಿನಯದ ಶಿವಲಿಂಗಯ್ಯ, ಶಾಲಾಶಿಕ್ಷಕ ಶಿವಾನಂದಯ್ಯ, ಬಾಬಣ್ಣ, ಗಂಗಾಧರ ಕಾಟವೇ, ಜಾಧವ್ ಇನ್ನೂ ಮುಂತಾದವರು ಕಲಾವಿದರಾಗಿ ಗುರುತಿಸಿಕೊಂಡರು.

ಕಿರ್ಲೋಸ್ಕರ್ ಕಂಪನಿಯಲ್ಲಿ ರಂಗಕಲಾವಿದರ ಬಹುದೊಡ್ಡ ತಂಡವೇ ಇತ್ತು. ಶಿವಾನಂದ ಹಾಗೂ ಅವರ ಸೋದರ ವಿರೂಪಣ್ಣನವರು ಮೈಕ್ಲಬ್‌ನಲ್ಲಿ ಹಾಗೂ ಹಳೇ ಭರಂಪೂರಿಯಲ್ಲಿ ಆಗಾಗ ನಾಟಕಗಳನ್ನು ಆಡಿಸುವ ರಂಗಾಸಕ್ತಿಯುಳ್ಳವರು. "ಯುವಕಸಂಘ"ದ ಸಾರಥ್ಯ ವಹಿಸಿಕೊಂಡಿದ್ದ ವಿರೂಪಾಕ್ಷ ಕುಲಕರ್ಣಿಯವರು ಮೂರಂಕಿನ "ಮೂರಾಬಟ್ಟೆ" ಎಂಬ ನಾಟಕ ರಚಿಸಿ ಆಡಿಸಿದ್ದಾರೆ. ಇತ್ತೀತ್ತಲಾಗಿ ಪಾಟೀಪೆನ್ಸಿಲ್ಲು, ಫೋಟೋದ್ಧಾಂಗ ಎಂಬ ಪುಟ್ಟ ಪುಟ್ಟ ರೂಪಕ ಮಾದರಿಯ ಕುಲಕರ್ಣಿಯವರ ನಾಟಕಗಳನ್ನು ರೇಖಾನಾಯಕ್, ನಾಗಮಣಿ ತಂಡದ ಮಹಿಳೆಯರು ಪ್ರದರ್ಶಿಸಿದ್ದಾರೆ.

ಸೋನಾಲ್ಕರ ಕಂಪನಿಯ ಕುರಂದವಾಡರ ಗೆಳೆಯರ ಬಳಗ, ಹರಿಹರೇಶ್ವರ ದೇವಸ್ಥಾನ ಬಳಿಯ ಜಗನ್ನಾಥ ಅವರ ಮಿತ್ರ ಮಂಡಳಿ, ರೇವಣಸಾ ನೇತೃತ್ವದ ಮಿತ್ರವೃಂದದ ಪ್ರಯೋಗಗಳು, ಹಳೆಯ ಹರ್ಲಾಪುರದ ಬಸವೇಶ್ವರ ನಾಟಕ ಮಂಡಳಿ ಹಳ್ಳಿ ಹಳ್ಳಿಗಳಲ್ಲಿ, ಆಯಾ ಊರಿನ ದೇವರ ಹೆಸರಿನ ಜಾತ್ರಾ ಸಂದರ್ಭಗಳಲ್ಲಿ ದೇವರ ಹೆಸರು ಧರಿಸಿಕೊಂಡು ಆಡುವ ಕಂಪನಿ ಮಾದರಿಯ ನಾಟಕಗಳಿಗೆ ತಾಲ್ಲೂಕಿನ ಹೆಸರಾಂತ ಹಾರ್ಮೋನಿಯಂ ಮಾಸ್ತರುಗಳು ಒಟ್ಟು ಯಶಸ್ಸಿಗೆ ಹೊಣೆ ಹೊರುತ್ತಾರೆ. ಅವರುಗಳೆಂದರೆ ಭಾನುವಳ್ಳಿಯ ಪರಮೇಶ್ವರಪ್ಪ ಮಾಸ್ತರ, ಹಲಸಬಾಳು ಗ್ರಾಮದ

ಪದವೀಧರ ರೇವಣಸಿದ್ದಯ್ಯ ಸರ್ವಂದ ಮಾಸ್ತರ, ನಾಗೇನಹಳ್ಳಿಯ ಶಿವಮೂರ್ತಯ್ಯ ಇವರುಗಳಿಗೆ ಶಾಲಾ ಮಾಸ್ತರುಗಳಾದ ಮಂದೇವಾಲಿಯ ಮಡಿವಾಳಪ್ಪನೆಂಬ (ಮಡಿವಾಳಪ್ಪ ಇತ್ತೀಚೆಗೆ ತೀರಿಕೊಂಡರು) ಅಂಧ ಕಲಾವಿದ ಹಾಗೂ ಪಾಟೀಲ ಮತ್ತು ಸಿದ್ಧರಾಜು ಎಂಬುವವರು ತಬಲಾ ಸಾಥೀ ನೀಡುತ್ತಾರೆ. ದಿ॥ ಬಸವರಾಜ ಮಜ್ಜಗಿ ಕೂಡಾ ತಬಲಾ ವಾದಕರು. ಎರಡು ವರುಷಗಳ ಹಿಂದೆ ರೈಲು ದುರಂತದಲ್ಲಿ ನಿಧನರಾದ ಹಾರ್ಮೋನಿಯಂ ಮಾಸ್ತರ ಬಸಪ್ಪ ಹಂಚಿನಾಳ ಹರಿಹರದಲ್ಲಿ ಬಡತನದ ಭೂತ, ಆದರ್ಶಪ್ರೇಮ, ವಾತ್ಸಲ್ಯ, ರೈತನ ಮಕ್ಕಳು ಮುಂತಾದ ನಾಟಕಗಳನ್ನು ಹತ್ತಾರು ವರುಷ ಅರವತ್ತರ ದಶಕದಲ್ಲಿ ತಿಳಿಸಿದ್ದಾರೆ.

ಇದು ವೃತ್ತಿರಂಗ ಅರೆವೃತ್ತಿರಂಗದ ಕಥೆಯಾದರೆ ಹೊಸ ಅಲೆ ಮಾದರಿಯ ಸಮುದಾಯ ಹಾಗೂ ಬೀದಿ ನಾಟಕಗಳ "ಬದ್ಧ ಪ್ರಯೋಗಗಳದ್ದು" ಕೂಡಾ ಕಡಿಮೆ ಕೊಡುಗೆಯೇನಲ್ಲ. "ಸಮುದಾಯ" ರಂಗಸಂಸ್ಕೃತಿಯ ಸಂದರ್ಭದಲ್ಲಿ ಹರಿಹರದ ಪಾತ್ರ ರಾಜ್ಯ ಮಟ್ಟದ್ದು. ಆರ್.ಅಣ್ಣಪ್ಪ, ವಿ.ಯಲ್ಲಪ್ಪ, ಪ್ರೊ॥ ಸಿ.ವಿ. ಪಾಟೀಲ, ಪ್ರೊ॥ ಎಚ್.ಎ. ಭಿಕ್ಷಾವರ್ತಿ ಮಠ, ದೇವಕಿ ದೇಶಪಾಂಡೆ, ಜ್ಯೋತಿ, ಕೆ. ಶರೀಫಾ, ಸುಧಾ, ಸುರೇಶ್ ಕೊಂಡಜ್ಜಿ, ಇಕ್ಬಾಲ್ ಹುಸೇನ್ ದ.ಸ.ಸಂ.ನ ಅನೇಕ ಗೆಳೆಯರು ಸಮುದಾಯದ ಅಂದಿನ ರಂಗ ಚಳವಳಿಗೆ ರಂಗ ಕಟ್ಟಾಳುಗಳಾಗಿ ಅದರ ಎಲ್ಲ ಹಂತಗಳಲ್ಲಿ ಅಹರ್ನಿಶಿ ದುಡಿದವರು. ಈ ಎಲ್ಲ ಸಂಗಾತಿಗಳು ದಾವಣಗೆರೆಯಲ್ಲಿ ಸಮುದಾಯದ ಬೆಳ್ಳಿಹಬ್ಬವನ್ನು ಆಚರಿಸಿದರು. 2013ರಲ್ಲಿ ಜಚೀ ನಾಗರಾಜರಾವ್, ಜರಾಸಂಧ, ಎಚ್ಚಮನಾಯಕ ಎನ್ನುವ ಎರಡು ನಾಟಕಗಳನ್ನು ಪ್ರಕಟಿಸಿದರು.

ಇಂದು ರಂಗಾಯಣದಲ್ಲಿ ಹೆಸರು ಮಾಡಿರುವ ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಇದೇ ತಾಲ್ಲೂಕಿನ ಮಂಜುನಾಥ ಬೆಳಕೆರೆ 'ಸ್ನೇಹರಂಗ' ಎಂಬ ತಂಡ ಕಟ್ಟಿ 1983ರಿಂದ ಎಂಟು ವರುಷಗಳ ಕಾಲ ರಂಗಪ್ರದರ್ಶನ ನೀಡಿದ್ದುಂಟು. ಸಂಗಾನೂರಲ್ಲೊಂದು ಶಾಲೆ, ಅಂಧಯುಗ, ಸೇತು ಮಾಧವನಸಲ್ಲಾಪ, ಅಪ್ಪ, ವಿಷವೃತ್ತದೊಳಗೆ ಮೊದಲಾದ ನಾಟಕಗಳನ್ನು ನಿರ್ದೇಶಿಸಿ ರಂಗ ಪ್ರಯೋಗ ಮಾಡಿಸಿದ್ದಾರೆ. ಜತೆಗೆ ಹರಿಹರ ಸಮುದಾಯದಂತಹ ಜನಪರ ರಂಗಸಂಘಟನೆಯಲ್ಲಿ ತೊಡಗಿಸಿಕೊಂಡರು. ಆತನೀಗ ರಾಜ್ಯಮಟ್ಟದವರೆಗೆ ದಿವಿನಾಗಿ ಬೆಳೆದಿರುವುದು ಹೆಮ್ಮೆಯ ಸಂಗತಿ.

ಇತ್ತೀಚೆಗೆ ವಿ.ಯಲ್ಲಪ್ಪ, ವಸಂತಕುಮಾರ್, ಆರ್.ಕೆ.ಬಾಬು, ಜಯಲಕ್ಷ್ಮಿ, ಚಂದನಾ, ಲೀಲಾ, ಮುಕ್ತಾ ಇನ್ನೂ ಮುಂತಾದವರು ಸೇರಿ "ತುಂಗಭದ್ರಾ ಕಲಾ ತಂಡ" ಕಟ್ಟಿ ಬೀದಿ ನಾಟಕ, ರೂಪಕಗಳ ಮೂಲಕ ಜನಜಾಗೃತಿ ಉಂಟು ಮಾಡುತ್ತಿದ್ದಾರೆ. ಬಿ.ಜಿ.ವಿ.ಎಸ್. ಮೂಲಕ ಬೀದಿ ನಾಟಕ ಪ್ರದರ್ಶಿಸಿ ಸಮಷ್ಟಿಯಲ್ಲಿ ವೈಜ್ಞಾನಿಕ ಪ್ರಜ್ಞೆ

ಹಂಚುವ ರಂಗ ಕೈಂಕರ್ಯ ಕೈಗೊಂಡಿದೆ. ತಾಲ್ಲೂಕಿನ ಕೊಂಡಜ್ಜಿ ಗ್ರಾಮವು ಜಾನಪದ ರಂಗಭೂಮಿಯ ತವರುಮನೆ. ಈ ಊರಲ್ಲಿ ಮನೆ ಮನೆಯಲ್ಲೂ ದೊಡ್ಡಾಟ ಕಲಾವಿದರಿದ್ದಾರೆ. ಎಂಬತ್ತರ (1989) ದಶಕದಲ್ಲಿ ಮಲ್ಲಿಕಾರ್ಜುನ ಕಡಕೋಳ ಹಾಗೂ ಸೊಲಬಕ್ಕನವರು ಒಂದು ವಾರ ಅದ್ದೂರಿಯಾಗಿ ದೊಡ್ಡಾಟೋತ್ಸವ ಮಾಡಿದ್ದರು. ಇಲ್ಲಿನ ಬೆಟ್ಟದಲ್ಲಿ ಇಪ್ಟಾ ಹಾಗೂ ಸಮುದಾಯದವತಿಯಿಂದ ಅನೇಕ ರಂಗಶಿಬಿರಗಳು ಜರುಗಿವೆ.

ಹೀಗೆ ಹರಿಹರದ ರಂಗಭೂಮಿಗೆ ಶತಮಾನದಷ್ಟು ಉಲ್ಲೇಖನಿಯ ರಂಗಸಂಭ್ರಮ ಉಪಲಬ್ಧವಿಲ್ಲದಿದ್ದರೂ ಇರುವಷ್ಟು ರಂಗಸಂದರ್ಭಗಳು ಉಲ್ಲೇಖನಿಯವೇ ಎಂಬುದು ಸಂತಸ–ಸಡಗರದ ಸಂಗತಿ. ಹರಿಹರದಲ್ಲಿ, ವ್ಯಷ್ಟಿ ಹಾಗೂ ರಂಗಸಮಷ್ಟಿ ನೆಲೆಯಲ್ಲಿ ದೀಪ ಹಚ್ಚಿ ಹುಡುಕಿದರೂ ವೃತ್ತಿ–ವಿಲಾಸಿ–ಹವ್ಯಾಸಿ–ಮೂರನೇ ರಂಗ ಭೂಮಿಗಳೆಂಬ ತಾರತಮ್ಯಗಳು ಕಾಣಿಸುವುದಿಲ್ಲ. ಅಲ್ಲಿ ಸಮಗ್ರ ರಂಗಭೂಮಿಯ ಸಂಪ್ರೀತಿ ತುಂಗಭದ್ರೆಯಂತೆ ಸಪ್ಪಳಿಲ್ಲದೇ ಆಗಾಗ ತುಂಬಿ ಹರಿಯುತ್ತಿರುತ್ತದೆ.

***********

## ಹರಿಹರ ತಾಲ್ಲೂಕು ರಂಗ ಸಂಗೀತ ಕಲಾವಿದರು

ರೇವಣಸಿದ್ದಯ್ಯ ಸರ್ವಾಂದ ಮಾಸ್ತರ ಹಲಸಬಾಳು (ಹಾರ್ಮೋನಿಯಂ)

ದಿ|| ಮಡಿವಾಳಪ್ಪ ಮಂದೇವಾಲಿ (ತಬಲಾ)

ಎಚ್.ಎಸ್. ಪರಮೇಶ್ವರಪ್ಪ ಭಾನುವಳ್ಳಿ (ಹಾರ್ಮೋನಿಯಂ),

ಸಿದ್ಧಾಚಾರ್ ಉಕ್ಕಡಗಾತ್ರಿ (ಹಾರ್ಮೋನಿಯಂ),

ವೀರಾಚಾರ್ ಎಕ್ಕೆಗೊಂದಿ (ಹಾರ್ಮೋನಿಯಂ),

ಕುಬೇರ ಗೌಡ ಬಿಳಸನೂರು (ಹಾರ್ಮೋನಿಯಂ),

ಶಿವಾನಂದಪ್ಪ ದೀಟೂರು (ಹಾರ್ಮೋನಿಯಂ),

ಪುಟ್ಟಪ್ಪ ಬೆಳ್ಳೂಡಿ (ಹಾರ್ಮೋನಿಯಂ),

ಗೋಪಾಲಪ್ಪ (ಹಾರ್ಮೋನಿಯಂ).

ಈಶ್ವರಪ್ಪ ನಂದಿಗಾವಿ (ತಬಲಾ)

ಬಿ. ವೀರಾಚಾರ್ ರಾಮತೀರ್ಥ (ಘಟವಾದ್ಯ)

ಬನ್ನಿಕೋಡು ಲೋಕಪ್ಪ (ಹಾರ್ಮೋನಿಯಂ)

ಎಂ. ಬಸಪ್ಪ ಗುತ್ತೂರು (ಹಾರ್ಮೋನಿಯಂ)

ಜೆ. ಬಸವರಾಜಪ್ಪ ಕೊಂಡಜ್ಜಿ (ಹಾರ್ಮೋನಿಯಂ)


ಪೂಜಾರ ಬಸವರಾಜಪ್ಪ (ಹಾರ್ಮೋನಿಯಂ)

ಕಾಶಿನಾಥಾಚಾರ್ (ತಬಲಾ)

ಬಿ. ಪರಮೇಶ್ವರಪ್ಪ ಭಾನುವಳ್ಳಿ (ಹಾರ್ಮೋನಿಯಂ)

ಬಿ. ಕರಿಯಪ್ಪ ಕಮಲಾಪುರ (ಹಾರ್ಮೋನಿಯಂ)

***********



ದಾವಣಗೆರೆ ಪ್ರತಿಮಾಸಭಾ ಅಭಿನಯದ 'ಸೆಜುವಾನಿನ ಸಾಧ್ವಿ' ನಾಟಕದ ಒಂದು ದೃಶ್ಯ

## ಶ್ರೀ ವೆಂಕಟೇಶ್ವರ ಡ್ರಾಮಾ ಸೀನ್ಸ್, ಡ್ರೆಸಸ್ ಮತ್ತು ಮೇಕಪ್, ಭಾನುವಳ್ಳಿ

ಸ್ವಾತಂತ್ರ್ಯ ಪೂರ್ವದಲ್ಲೇ ಹರಿಹರ ತಾಲ್ಲೂಕಿನ ಸಾರಥಿ ಗ್ರಾಮದಲ್ಲಿ ನಾಟಕಗಳಿಗೆ ಬೇಕಾಗುವ ಸೀನರಿ, ಮೇಕಪ್, ಪ್ರಸಾದನ ಇತರೆ ರಂಗ ಪರಿಕರಗಳ ಭಾಂಡಾರವಿತ್ತು. ಇಂದು ಹರಿಹರ ತಾಲ್ಲೂಕಿನ ಭಾನುವಳ್ಳಿ ಗ್ರಾಮದಲ್ಲಿರುವ ಶ್ರೀ ವೆಂಕಟೇಶ್ವರ ಡ್ರಾಮಾ ಸೀನ್ಸ್‌ಗಳ ಸಂಸ್ಥಾಪಕರಾದ ಶೇಷಪ್ಪ ಶೆಟ್ಟರು ಸಾರಥಿಯ ಆ ರಂಗಭಂಡಾರದಲ್ಲಿ



ಹಳ್ಳಿಯ ಪೌರಾಣಿಕ ನಾಟಕವೊಂದಕ್ಕೆ ಕೃಷ್ಣಮೂರ್ತಿಯವರು
ಕಲಾವಿದರನ್ನು ರಂಗಾಲಂಕಾರ ಮಾಡಿ ಸಿದ್ಧಗೊಳಿಸಿದ್ದು.

ಗ್ಯಾಸ್‌ಲೈಟುಗಳನ್ನು ಹೊರುವ ಕೆಲಸಕ್ಕಿದ್ದರು. ಪ್ರಾಯಶಃ ಈ ಎರಡೂ ಹಳ್ಳಿಗಳು ಈ ಭಾಗದ ಮೊಟ್ಟ ಮೊದಲ ರಂಗಸಜ್ಜಿಕೆಗಳ ಗ್ರಾಮಗಳೆಂದು ಹೇಳಬಹುದು. ಈಗ ಸಾರಥಿಯಲ್ಲಿ ಅವುಗಳಿಲ್ಲ.

ಎರಡು ವರುಷಗಳ ಹಿಂದೆ ಕರ್ನಾಟಕ ನಾಟಕ ಅಕಾಡೆಮಿಯಿಂದ 25 ಸಾವಿರ ರೂಪಾಯಿಗಳ ಧನ ಸಹಾಯ ಪಡೆದಿರುವ ಭಾನುವಳ್ಳಿಯ ಶ್ರೀ ವೆಂಕಟೇಶ್ವರ ಡ್ರಾಮಾ ಸೀನ್ಸ್, ಡ್ರೆಸಸ್ ಮತ್ತು ಮೇಕಪ್ ಸಂಸ್ಥೆಯು ಕಳೆದ ಆರು ದಶಕಗಳಿಂದ ವ್ಯವಸ್ಥಿತ ರಂಗಸಜ್ಜಿಕೆಗಳ ಪೂರೈಕೆ ಕಾರ್ಯದಲ್ಲಿ ತೊಡಗಿ ವರ್ಷಕ್ಕೆ ನೂರು ನಾಟಕಗಳಿಗೆ ವೇದಿಕೆ ಆಗಿದೆ.

ಪೌರಾಣಿಕ, ಐತಿಹಾಸಿಕ, ಸಾಮಾಜಿಕ..... ಹೀಗೆ ಎಲ್ಲ ಬಗೆಯ ನಾಟಕಗಳಿಗೆ ಬೇಕಾಗುವ ಜನರೇಟರ್ ಸೇರಿದಂತೆ ಸಮಗ್ರ ರಂಗ ಪರಿಕರಗಳ ಭಂಡಾರ ಭಾನುವಳ್ಳಿಯ ದಿ॥ ಕೃಷ್ಣಮೂರ್ತಿಶೆಟ್ಟಿಯವರದು. ನಾಟಕಗಳಿಗೆ ಮಾತ್ರವಲ್ಲದೇ ಪರ್ಯಾಯ ರಂಗ ಭೂಮಿಯಂತಿರುವ ಸ್ತಬ್ಧಕಲೆಗಳಲ್ಲಿ ಈ ಭಾಗದಲ್ಲಿ ನಿಪುಣರಾದ ರಂಗಕಕಲಾವಿದರಿಗೂ ವೇಷಭೂಷಣ, ರಂಗಾಲಂಕಾರಗಳನ್ನು ಅವರ ಮಗ ರಮೇಶ್ ಹಾಗೂ ಅವರ ಪತ್ನಿ  ಮಾಡುತ್ತಾರೆ. ಒಂದೆರಡು ಚಲನಚಿತ್ರಗಳಿಗೂ ಇವರ ಪ್ರಸಾದನ ಸೇವೆ ಸಂದಾಯವಾಗಿದೆ.

ಸ್ವತಃ ಅವರು ಕೂಡಾ ಮುಖವಾಡಗಳನ್ನು ಸಿದ್ಧಗೊಳಿಸುತ್ತಾರೆ. ಗಣೇಶ್ ಉತ್ಸವ, ಇತರೆ ರಂಗಸಮಾರಂಭ, ಕನ್ನಡ ರಾಜ್ಯೋತ್ಸವ, ಶಾಲಾ ಮಕ್ಕಳ ರಂಗಭೂಮಿ ಚಟುವಟಿಕೆಗಳಿಗೂ ಇವರು ರಂಗ ಪರಿಕರಗಳನ್ನು ಒದಗಿಸುತ್ತಾರೆ. ಅವರೊಂದಿಗೆ ಅವರ ಮಗ ವಿ.ಕೆ. ರಮೇಶ್ ಸೇರಿದಂತೆ ರಂಗ ಸಜ್ಜಿಕೆ ನಿರ್ಮಾಣ, ಧ್ವನಿವರ್ಧಕ, ಬೆಳಕು ಸಂಯೋಜನೆ, ಮೇಕಪ್ ಇತ್ಯಾದಿಗಳ ನಿರ್ವಹಣೆಗೆ ರಾಮಣ್ಣ, ಹಾಲೇಶ್, ಜಬೀವುಲ್ಲಾ, ಜಯಪ್ಪ, ನಾಗರಾಜ, ಮಂಜುನಾಥ ಎಂ.ಜಿ. ವೀರಭದ್ರಪ್ಪ ರಮೇಶ್ ಎಂಬ ಎಂಟು ಮಂದಿ ನೇಪಥ್ಯ ಕಲಾವಿದರಿದ್ದಾರೆ. ಅದೆಲ್ಲ ವಿ.ಕೃಷ್ಣಮೂರ್ತಿಯವರ ಮಗ ರಮೇಶ್ ಸಾರಥ್ಯದಲ್ಲಿ ಜರುಗುತ್ತದೆ.

## ಗ್ರಾಮೀಣ ರಂಗಭೂಮಿ ತಂಡಗಳು ಮತ್ತು ಕಲಾವಿದರು

* ಗುತ್ತೂರು : ಶ್ರೀ ಮಾರುತಿ ಕೃಪಾಪೋಷಿತ ನಾಟ್ಯ ಸಂಘ. (25 ವರ್ಷಗಳಿಂದ)
* ಬೆಳ್ಳೂಡಿ : ಶ್ರೀ ಉಡುಸಲಾಂಬಿಕಾ ನಾಟ್ಯ ಸಂಘ (30 ವರ್ಷಗಳಿಂದ)
* ಹನಗವಾಡಿ : ಶ್ರೀ ವೀರಭದ್ರೇಶ್ವರ ನಾಟ್ಯ ಸಂಘ (30 ವರ್ಷಗಳಿಂದ)
* ರಾಮತೀರ್ಥ : ಶ್ರೀ ಹೊನ್ನೂರೇಶ್ವರ ನಾಟ್ಯ ಸಂಘ (25 ವರ್ಷಗಳಿಂದ)

* ಭಾನುವಳ್ಳಿ : ಶ್ರೀ ಬಸವೇಶ್ವರ ನಾಟ್ಯ ಸಂಘ (30 ವರ್ಷಗಳಿಂದ)
* ದೀಟೂರು : ಶ್ರೀ ರಾಂಪುರ ಹಾಲಸ್ವಾಮಿ ನಾಟ್ಯ ಸಂಘ (30 ವರ್ಷಗಳಿಂದ)
* ಗಂಗನರಸಿ, ಕೊಂಡಜ್ಜಿ, ಸಾರಥಿ, ಮಲೇಬೆನ್ನೂರು, ಕಡಾರನಾಯಕನಹಳ್ಳಿ, ಯಲವತ್ತಿ, ಲಕ್ಕಶೆಟ್ಟಿಹಳ್ಳಿ, ಮುಂತಾದ ಊರುಗಳಲ್ಲಿ ರಂಗ ತಂಡಗಳಿವೆ.

ಗುತ್ತೂರಿನ ವೀರಭದ್ರಪ್ಪ, ಪರಶುರಾಮ ಐರಣಿ, ಚಂದ್ರು ಮಡಿವಾಳರ, ಪರಶುರಾಮ ಚಲುವಾದಿ, ಮುತ್ತಪ್ಪ ಜೆ. ಬೆಳ್ಳೂಡಿಯ ಸಿದ್ದೇಶ್, ನಾಗರಾಜ, ರಾಮತೀರ್ಥದ ತಿಪ್ಪಯ್ಯಸ್ವಾಮಿ, ಶಿವರುದ್ರಯ್ಯ, ವಿರುಪಾಕ್ಷಪ್ಪ ಪಾಂಡುರೆಡ್ಡಿ ಈ ಎಲ್ಲರೂ ವೃತ್ತಿ ಕಂಪನಿ ನಟರಷ್ಟೆ ಪ್ರಸಿದ್ಧರು.

***********

# ಹರಪನಹಳ್ಳಿ ರಂಗಸಂಸ್ಕೃತಿ ಕುರಿತು.....

ಅಂದು ಬಳ್ಳಾರಿಯ ಬಿಸಿಲ ನಾಡಿಗೆ ಸೇರಿದ ಹರಪನಹಳ್ಳಿ ನೂತನ ದಾವಣಗೆರೆ ಜಿಲ್ಲೆಗೆ ಸೇರಿರುವ ಐತಿಹಾಸಿಕ ಹಿನ್ನೆಲೆಯುಳ್ಳ ತಾಲ್ಲೂಕು. ನೀಲಗುಂದದ ಭೀಮೇಶ್ವರ, ಬಾಗಳಿಯ ಕಲ್ಲೇಶ್ವರ ದೇವಸ್ಥಾನಗಳು ಶಿಲ್ಪಕಲೆಯ ನೆಲೆಯಲ್ಲಿ ಅತ್ಯಂತ ಮಹತ್ವದ ಸಾಂಸ್ಕೃತಿಕ ಕೇಂದ್ರಗಳು. ಬೀಚಿಯವರಂತಹ ವಿನೋದ ಸಾಹಿತಿಯನ್ನು ನೀಡಿದ ಊರು. ಬೀಚಿ ಶ್ರೇಷ್ಠ ನಾಟಕಕಾರರು ಆಗಿದ್ದರು. ಅವರು ರೇಡಿಯೋ ನಾಟಕಗಳನ್ನು ರಚಿಸಿದ್ದಾರೆ. ದೇವರು ಸತ್ತಾಗ, ಮೈನಾಟಕೋದಯಂ ನಾಟಕಗಳನ್ನು ಸೇರಿದಂತೆ ಅವರ ನಾಟಕ ಸಾಹಿತ್ಯ ಗಮನೀಯ.

ಚಿಗಟೇರಿಯಂತಹ ಪುಟ್ಟಹಳ್ಳಿಯ ತಂಬಾಕು ವ್ಯಾಪಾರಿಯಾಗಿದ್ದ ನಾಡೋಜ ಮುದೇನೂರು ಸಂಗಣ್ಣ ಅವರು ಬಾಳಭಿಕ್ಷುಕ, ಲಕ್ಷಾಪತಿರಾಜನ ಕಥೆ, (ಜಯಶ್ರೀ ನಿರ್ದೇಶನ) ಅವ್ವಣ್ಣೆವ್ವ, ಶೀಲಾವತಿ, ಘಾಶಿರಾಂ ಕೊತ್ವಾಲ್, ಸೂಳೆಸಂಕವ್ವೆ ಇಂತಹ ಅಪರೂಪದ ನಾಟಕಗಳನ್ನು ನೀಡುವ ಮೂಲಕ ಕನ್ನಡ ನಾಟಕಲೋಕವನ್ನೇ ಶ್ರೀಮಂತಗೊಳಿಸಿದವರು. ಹಾಗೆಯೇ ಅವರು ಜಾನಪದ ರಂಗಭೂಮಿ ಕುರಿತು ಹೊಂದಿದ ಕಳಕಳಿ ಅನನ್ಯವಾದುದು.

ವೃತ್ತಿಯಿಂದ ವೈದ್ಯರಾಗಿ ನಿವೃತ್ತರಾಗಿರುವ ಕಡಬಗೇರಿಯ ಡಾ॥ ಎ. ಶಿವನಗೌಡ ಅವರು ಇಲಾಖೆಯ ಆರೋಗ್ಯ ಸೇವೆ ಕುರಿತಂತೆ ಮತ್ತು ಕೆಲವು ಐತಿಹಾಸಿಕ ನಾಟಕಗಳನ್ನು ರಚಿಸಿದ್ದಾರೆ. ಅವು ಆಗಾಗ ಪ್ರದರ್ಶನಗೊಳ್ಳುತ್ತಲೇ ಇರುತ್ತವೆ.

ಹರಪನಹಳ್ಳಿಯ ಜನಪದ ರಂಗಭೂಮಿಗೆ ಉನ್ನತ ಪರಂಪರೆಯೇ ಇದೆ. ಇವತ್ತಿಗೂ ಸಂಗ್ಯಾಬಾಳ್ಯಾ ಮತ್ತು ದ್ರೌಪದಿ ವಸ್ತ್ರಾಭರಣದಂತಹ ಬಯಲಾಟಗಳು ಅತ್ಯಂತ ಸೋಪಜ್ಞಶೀಲ ಶೈಲಿಯಲ್ಲಿ ಜರುಗುತ್ತವೆ. ಹರಪನಹಳ್ಳಿಯವರೇ ಆಗಿ ಹೋಗಿರುವ ಸೋಗಿನಾಗರತ್ನಮ್ಮ  ಸುಮಧುರ ಕಂಠದ ಗಾಯಕಿ. ಪೌರಾಣಿಕ, ಜಾನಪದ ರಂಗಭೂಮಿಯ ಅಮೋಘ ಪ್ರತಿಭೆ. ಬಸ್ವಂತ–ಬಲ್ವಂತ, ಕರಿಬಂಟನ ಕಾಳಗ, ಗಿರಿಜಾಕಲ್ಯಾಣ ಈಗಲೂ ಪ್ರಸ್ತುತಗೊಳ್ಳುತ್ತವೆ. ಹಲವಾಗಲು ದೇವೇಂದ್ರಪ್ಪನವರ ಸೂತ್ರದ ಗೊಂಬೆಯಾಟಗಳಿಗೆ ರಾಷ್ಟ್ರೀಯ ಮನ್ನಣೆ.

ಚಿಗಟೇರಿಯಂತಹ ಹಳ್ಳಿಯಲ್ಲಿ ರಂಗ ತಾಲೀಮು, ರಂಗ ಶಿಬಿರ ನಡೆಸಿ ಗೋಪಾಲ ವಾಜಪೇಯಿಯ 'ದೊಡ್ಡಪ್ಪ' ನಾಟಕವನ್ನು ಜಯತೀರ್ಥ ಜೋಶಿ ನಿರ್ದೇಶಿಸಿ ದಶಕಗಳ ಹಿಂದೆ 30 ರಂಗ ಪ್ರದರ್ಶನ ಮಾಡಿದ ಕೀರ್ತಿ ಇಲ್ಲಿನ ನಾರದಮುನಿ ಸಾಂಸ್ಕೃತಿ ಸಂಘಟನೆಗೆ ಸಲ್ಲುತ್ತದೆ. ಮಾ.ಬ. ಸೋಮಣ್ಣನವರ ನಿರ್ದೇಶನದಲ್ಲಿ ಮುದೇನೂರು ಸಂಗಣ್ಣನವರ ಕೆಲವು ನಾಟಕಗಳು ಎಲ್ಲರ ಮನ ಗೆಲ್ಲುವ ಕ್ರಿಯಾಶೀಲತೆಯಿಂದ ತುಂಬಿ ತುಳುಕಿವೆ.

ಪತ್ರಕರ್ತ ಗುಡಿಹಳ್ಳಿ ನಾಗರಾಜ ರಂಗಭೂಮಿ ಕುರಿತು ವಿಮರ್ಶಾಸಂಕಲನಗಳನ್ನು ಪ್ರಕಟಿಸಿರುವುದು ತಾಲ್ಲೂಕಿನ ರಂಗಭೂಮಿ ಮಾತ್ರವಲ್ಲ. ಸಮಗ್ರ ಕನ್ನಡ ರಂಗಭೂಮಿಗೆ ಸಲ್ಲುವ ಕಾಣಿಕೆ ಅದಾಗಿದೆ. ಅವರಿಗೆ ವೃತ್ತಿರಂಗಭೂಮಿ ಮೇಲೆ ಅಪಾರ ಪ್ರೀತಿ. ಅಂತೆಯೇ ಅವರು ಮಹತ್ವದ ಅಭಿನೇತ್ರಿಯರ ಆತ್ಮಚರಿತ್ರೆಗಳನ್ನು ಬರೆದಿದ್ದಾರೆ.

ತಾಲ್ಲೂಕಿನ ಪ್ರತಿಯೊಂದು ಹಳ್ಳಿಯಲ್ಲೂ ಹಾರ್ಮೋನಿಯಂ, ತಬಲಾ ನುಡಿಸುವ ರಂಗಕರ್ಮಿಗಳಿದ್ದಾರೆ. ದಿಲ್‌ರುಬಾದಂತಹ ಅಪರೂಪ ವಾದ್ಯ ನುಡಿಸುವ ಬಿ.ಪಿ. ಯಮನೂರ್‌ಸಾಬ್ ತಾಲ್ಲೂಕಿನ ಬೆಣ್ಣೆಹಳ್ಳಿ ಗ್ರಾಮದವರು. ಇವರು ನಾಟಕಕಾರರು ಹೌದು. ಈಗವರು ದಾವಣಗೆರೆಯಲ್ಲಿ ವಾಸವಾಗಿದ್ದು ಇತ್ತೀಚೆಗೆ ಸಹಸ್ರಾರು ರೂಪಾಯಿ ಕೊಟ್ಟು ನವೀನವಾದ 'ದಿಲ್‌ರುಬಾ' ವಾದ್ಯವನ್ನು ಖರೀದಿಸಿದ್ದಾರೆ. ಮುಪ್ಪಿನಲ್ಲೂ ನಾಟಕಗಳಿಗೆ ದಿಲ್‌ರುಬಾ ನುಡಿಸುವ ದರ್ದು ಕಮ್ಮಿಯಾಗಿಲ್ಲ.

ಅರ್ಧಶತಮಾನದಷ್ಟು ಹಿಂದೆಯೇ ಹಾದಿ ಬಸವೇಶ್ವರ ವೃತ್ತಿ ನಾಟಕ ಕಂಪನಿ ಇಲ್ಲಿ ಸ್ಥಾಪಿತವಾಗಿ ರಂಗಸೇವೆ ನೀಡಿದೆ. ಸ್ಥಳೀಯವಾಗಿ ವರ್ಷಕ್ಕೊಂದು ಬಾರಿಯಂತೆ ಶ್ರೀಕನಕೇಶ್ವರಿ ನಾಟಕ ಸಂಘವು ಬಾಗಳಿಯಲ್ಲಿ ಗೋಣಿಬಸವೇಶ್ವರ ಮಹಾತ್ಮೆ ನಾಟಕವನ್ನು ಕಳೆದ 45 ವರ್ಷಗಳಿಂದ ಪ್ರದರ್ಶನ ನೀಡುತ್ತಲೇ ನಡೆದಿದೆ. ಸಮುದಾಯ ರಂಗ ಚಳುವಳಿಯ ಗಾಳಿಯು ಇಲ್ಲಿ ಬೀಸಿದೆ. ಎಸ್.ಎಸ್. ಹಿರೇಮಠ ಪಂಚಪ್ಪ, ಪ್ರೊ॥ ಚಿಕ್ಕಮಠ, ಪ್ರೊ॥ ಬಡಿಗೇರ ಮುಂತಾದವರು 1985ರಲ್ಲಿ ಸಮುದಾಯ ನಾಟಕೋತ್ಸವ ಜರುಗಿಸಿದ್ದಾರೆ.

ಹೀಗೆ ಹರಪನಹಳ್ಳಿಯ ರಂಗಭೂಮಿ ಸಂಸ್ಕೃತಿಯು ಎಲ್ಲ ರಂಗ ಪ್ರಕಾರಗಳಲ್ಲೂ ಮೇಲುಗೈ ಮೆರೆದಿದೆ. ಇತ್ತೀಚೆಗೆ ಇಲ್ಲಿನ 'ಸಮಸ್ತರು' ರಂಗಸಂಘಟನೆ ರಂಗ ಚಟುವಟಿಕೆಗಳನ್ನು ಚುರುಕುಗೊಳಿಸಿದೆ. ತಾಲ್ಲೂಕಿನಲ್ಲಿ ಬೀಚಿ ಹೆಸರಿನ ರಂಗಮಂದಿರ ಕಣಿವೆಹಳ್ಳಿಯಲ್ಲಿದೆ. ಪಟ್ಟಣದಲ್ಲಿ ನಟರಾಜ ಕಲಾಭವನವು ರಂಗಮಂದಿರದ ಕೊರತೆ ನೀಗಿಸಿದೆ. ಇದೇ ರಂಗ ಮಂದಿರದಲ್ಲಿ ವಿರೂಪಾಕ್ಷ ಶಾಸ್ತ್ರಿ ನಾಟಕ ಶಾಲೆಯು ಹಂಪಿ ಕನ್ನಡ ವಿಶ್ವ ವಿದ್ಯಾಲಯ ಸಹಯೋಗದಲ್ಲಿ ಆರಂಭಗೊಂಡಿದೆ.

# ಹರಪನಹಳ್ಳಿ ತಾಲ್ಲೂಕು ರಂಗಭೂಮಿ

● ಪ್ರೊ. ಜಿ. ಬಸವಂತಪ್ಪ

ಹರಪನಹಳ್ಳಿ ತಾಲ್ಲೂಕಿನ ಹಲುವಾಗಲಿನ ದೇವೇಂದ್ರಪ್ಪ ಮತ್ತು ಬಸವಲಿಂಗಪ್ಪ ಸೂತ್ರದ ಗೊಂಬೆಯಾಟಕ್ಕೆ, ದಾದಾಪುರ ಕಿಳ್ಳಿಕೇತರ ಆಟದ ವಂಶಸ್ಥರಾದ ಜೀವಪ್ಪ ಮಾಸ್ತರರು ಹಾರ್ಮೋನಿಯಂ ಮಾಸ್ತರರೂ ಹೌದು ಮತ್ತು ನಾಟಕಗಳನ್ನು ಆಡಿಸುತ್ತಾರೆ. ಹಂಪಾ ಪಟ್ಟಣದ ದೇವೇಂದ್ರಪ್ಪ ಸಹೋದರರು ಗೊಂದಲಿಗರ ಆಟಕ್ಕೆ, ಮತ್ತಿಹಳ್ಳಿ ಜೋಗೇರ ರಾಮಚಂದ್ರಪ್ಪ ಮತ್ತು ಸಂಗಡಿಗರು ಜೋಗೇರ ಆಟಕ್ಕೆ ಈಶ್ವರಪ್ಪ ಕಂಚಿಕೆರೆ ಕೊಟ್ರಬಸಪ್ಪ ನಾಟಕಕ್ಕೆ ಎಚ್.ಎಂ. ಶಿವಯೋಗಯ್ಯ, ಶ್ಯಾವಳಿಗಿ ಶೇಖರಪ್ಪ ದೊಡ್ಡಾಟಕ್ಕೆ ಹೆಸರಾಗಿದ್ದಾರೆ.

ಮೂಡಲಪಾಯ–ದೊಡ್ಡಾಟ ಪ್ರಾಚೀನಕಾಲದಿಂದಲೂ ಉಳಿದುಬಂದಿರುವ ಪ್ರಮುಖ ರಂಗ ಪ್ರಕಾರ. ಇಲ್ಲಿ ನಟರು ಪ್ರೇಕ್ಷಕರು ಸಂಗೀತ ನೃತ್ಯ ಹಿಮ್ಮೇಳದವರಿರುತ್ತಾರೆ. ತಾಳ, ಮದ್ದಳೆ, ಪುಂಗಿ, ಪಿಟೀಲು, ಕ್ಲಾರಿಯೋನೇಟ್ ಮುಂತಾದ ವಾದ್ಯಗಳನ್ನು ನುಡಿಸುತ್ತಾರೆ ನೃತ್ಯಕ್ಕೆ 2–3 ಸಾರಿ ಕುಣಿಯಲೇ ಬೇಕು. ಹಿಮ್ಮೇಳನದಲ್ಲಿ 7 ಜನರಿದ್ದು ಸಪ್ತಸ್ವರದಲ್ಲಿ ಹಾಡುತ್ತಾರೆ. ಹೆಚ್ಚು ಆರ್ಭಟವಿರುತ್ತದೆ. ಕಿರೀಟ ಭುಜ ಕಿರೀಟಗಳನ್ನು ನಟರು ಧರಿಸುತ್ತಾರೆ. ಸಣ್ಣಾಟದಲ್ಲಿ ಆರ್ಭಟವಿರುವುದಿಲ್ಲ. 5 ಜನ ಹಿಮ್ಮೇಳದಲ್ಲಿ ಹಾಡುತ್ತಾರೆ. ತಬಲ ಹಾರ್ಮೋನಿಯಂ ನುಡಿಸುತ್ತಾರೆ.

ಹರಪನಹಳ್ಳಿಯ ಜನರು ಎಂದೂ ಮರೆಯಲಾಗದಂತಹ ನಟರೆಂದರೆ ಎಚ್.ಎಂ. ನಿಜಲಿಂಗಯ್ಯನವರು, ಕೆ.ಎಸ್. ಹಡಗಲಿಮಠ ನಾಟಕಕ್ಕಾಗಿಯೇ ತಮ್ಮ ಜೀವನವನ್ನು ಮುಡಿಪಾಗಿಟ್ಟುಕೊಂಡು ಹಲವಾರು ನಾಟಕಗಳನ್ನು ಪ್ರಯೋಗ ಮಾಡಿದವರು. ಒಂದು ಸಾರಿ ತಾರಕಾಸುರ ಬಯಲಾಟವಾಡುತ್ತಿದ್ದಾಗ ಮಧ್ಯರಾತ್ರಿ ಸಮಯ ಶ್ರೀಯುತರು ಬಣ್ಣ ಹಚ್ಚಿಕೊಂಡು ರಂಗಸ್ಥಳದಲ್ಲಿ ಅಭಿನಯಿಸುತ್ತಿದ್ದರು. ಆಗ ಅವರ ಮಗ ಸತ್ತನೆಂಬ ಬರಸಿಡಿಲಿನಂತಹ ವಿಷಯ. ಅವರು ಬಣ್ಣ ಹಚ್ಚಿಯಾಗಿದೆ ನಾಟಕ ನಿಲ್ಲಬಾರದು ಪ್ರೇಕ್ಷಕರಿಗೆ ನಿರಾಶೆಯಾಗುತ್ತದೆ ಬೆಳಿಗ್ಗೆ ಶವಸಂಸ್ಕಾರಕ್ಕೆ ಹೋಗುತ್ತೇನೆ. ನಾಟಕ ಮುಂದುವರೆಯಲಿ ಎಂದು ಪಾತ್ರ ನಿರ್ವಹಿಸಿದರಂತೆ. ಎಂಥ ಅಮೋಘ ಕಲಾಸೇವೆ. !

ಅವರ ಮಗ ಎಚ್.ಎಂ. ಶಿವಯೋಗಯ್ಯನವರು ತಂದೆಯವರ ಹೆಜ್ಜೆಯಲ್ಲಿಯೇ

ಹೆಜ್ಜೆ ಹಾಕಿ ಮಕ್ಕಳಾದ ಎಚ್.ಎಂ. ಬಸವರಾಜಯ್ಯ. ಎಚ್.ಎಂ. ವೀರಯ್ಯನವರನ್ನು ಬಳಸಿಕೊಂಡು ತರುಣ ಸಂಘವನ್ನು ಸ್ಥಾಪಿಸಿದರು. ನಾಟಕಕ್ಕೆ ಬೇಕಾದ ಸಾಮಗ್ರಿಗಳನ್ನು ಕಿನ್ನಾಳದಲ್ಲಿ ಮಾಡಿಸಿದರು. ಇಟಗಿಯ ಪೂರ್ವಾಚಾರ್‌ರಿಂದ ಬಣ್ಣ ಬಳಸಿದ್ದರು. ಸ್ವಂತ ಖರ್ಚಿನಲ್ಲಿಯೇ ಸಂಘವನ್ನು ನಡೆಸಿದುದ್ದು ಪವಾಡವೆಂದೇ ಹೇಳಬೇಕು. ಆದರ್ಶ ಪ್ರೇಮ, ಗಿರಿಜಾ ಕಲ್ಯಾಣ, ಅಣ್ಣತಂಗಿ, ಷಹಜಾನ್, ಕಿತ್ತೂರು ರಾಣಿಚೆನ್ನಮ್ಮ, ನೆಲ್ಲೂರು ನಂಬೆಕ್ಕ, ಹೇಮರೆಡ್ಡಿ ಮಲ್ಲಮ್ಮ, ಭಕ್ತ ಸಿರಿಯಾಳ ಮುಂತಾದ ನಾಟಕಗಳನ್ನು ತಾಲ್ಲೂಕಿನ ಬೇರೆ ಬೇರೆ ಊರುಗಳಲ್ಲಿ ಪ್ರದರ್ಶಿಸಿ ಜನ ಮನವನ್ನು ಸೂರೆಗೊಂಡರು. ಬಂಕಾಪುರದ ನಾಗರಾಜ ಶೆಟ್ಟಿಯವರು ಕಡು ಬಡತನವನ್ನು ಅನುಭವಿಸಿದ್ದಲ್ಲದೆ ನಾಟಕವನ್ನೇ ಜೀವದುಸಿರೆಂದುಕೊಂಡು ಬದುಕಿದವರು.

ಈ ಕಂಪನಿಯಲ್ಲಿ ಛಾಯಾಗ್ರಾಹಕರಾದ ಚೆನ್ನವೀರಪ್ಪ, ಕಂಟ್ಲೆಕೊಟ್ರಪ್ಪ, ಇಟಗಿ ವೀರಣ್ಣ, ಅಕ್ಕಸಾಲಿಗರ ಪಂಪಣ್ಣ ಹಾರ್ಮೋನಿಯಂ ಮಾಸ್ತರರು ಮತ್ತು ಹಾಡುಗಾರರು. ಚಿದಾನಂದಪ್ಪ ಆಚಾರ್, ಟಿ.ಹೆಚ್.ಎಂ. ಚಂದ್ರಮೌಳಿ, ದುಂಡಪ್ಪ, ಕಾಶೀಬಾಯಿ ಮುಂತಾದವರು ಅವಿಶ್ರಾಂತವಾಗಿ ಕಲೆಗಾಗಿ ದುಡಿದರು.

ಟಿ.ಹೆಚ್.ಎಂ. ಚಂದ್ರಮೌಳಿಯವರು ಕೂಡ್ಲಿಗಿ ತಾಲ್ಲೂಕಿನ ಹಿರೇಮಠದ ಮರುಳಸಿದ್ದಯ್ಯ ವೀರಮ್ಮನವರ ಪುತ್ರರು. ಆಗರ್ಭ ಶ್ರೀಮಂತರಾಗಿ ಬೆಳೆದವರು ಹರಪನಹಳ್ಳಿಗೆ ದತ್ತುಪುತ್ರನಾಗಿ ಬಂದಾಗ ಅವರ ತಂದೆ ಫಂಡ್ ಆಫೀಸಿನಲ್ಲಿ ಒಂದು ಲಕ್ಷ ರೂಪಾಯಿ ಠೇವಣಿ ಇಟ್ಟಿದ್ದರಂತೆ. ಚಂದ್ರಮೌಳಿಯವರದು ಆಕರ್ಷಕ



ದ್ರೌಪದಿ ವಸ್ತ್ರಾಭರಣ ಬಯಲಾಟದ ದ್ರೌಪದಿಯಾಗಿ ನಾಗರತ್ನ ಸೋಗಿ

ವ್ಯಕ್ತಿತ್ವ. ಎತ್ತರದ ಕಟ್ಟು ಮಸ್ತಾದ ಶರೀರ. ನಾಟಕದ ಹುಚ್ಚು ಹೆಚ್ಚಾಗಿ ಇದ್ದಬದ್ದ ಆಸ್ತಿಯನ್ನೆಲ್ಲಾ ಕಳೆದುಕೊಂಡು ಕೊನೆಗೆ ದಿವಾಳಿಯಾದವರು. 'ದೆವ್ವದಮನೆ' ಚಿತ್ರ ನಿರ್ಮಿಸಿ ಕೈ ಸುಟ್ಟುಕೊಂಡವರು. ಉದಯಕುಮಾರ್, ಚಿಂದೋಡಿಲೀಲಾ, ಆದವಾನಿ ಲಕ್ಷ್ಮೀದೇವಿ, ಕೆ.ಎಸ್. ಅಶ್ವಥ್, ಬಿ. ಜಯ, ಶಶಿಕಲಾ ಮುಂತಾದವರೊಂದಿಗೆ ಸ್ನೇಹ ಬೆಳೆಸಿಕೊಂಡಿದ್ದರು. ಯಾವುದೇ ಕಂಪನಿಗಳು ಹರಪನಹಳ್ಳಿಗೆ ಬಂದರೂ ಮೊದಲು ಅವರ ಮನೆಯಲ್ಲಿಯೇ ಆದರಾತಿಥ್ಯ ನಡೆಯಬೇಕು.

ನಾಟಕ ಕಲೆಯಲ್ಲಿ ಮತ್ತೊರ್ವರು ಬೆಳ್ಳಿಚುಕ್ಕಿಯಾಗಿ ಬೆಳಗಿದವರೆಂದರೆ ನೇವಾರ ಈಶ್ವರಪ್ಪನವರು. ನಾಟಕವೆಂದರೆ ಪಂಚಪ್ರಾಣ. 1952ರಲ್ಲಿ ಶ್ರೀ ಚೆನ್ನಬಸವೇಶ್ವರ ನಾಟ್ಯ ಸಂಘವನ್ನು ಸ್ಥಾಪಿಸಿ ಹಳ್ಳಿಹಳ್ಳಿಗಳಲ್ಲಿ ನಾಟಕ ಪ್ರದರ್ಶನಗಳನ್ನೇರ್ಪಡಿಸಿದ್ದರು. ನೀಲಗುಂದದಲಿ 1957ರಲ್ಲಿ ಕಪ್ಪಗಲ್ ಮಾದಿಗರ ತಂಡವನ್ನು ಕರೆಯಿಸಿ ಅವರಿಗೆಲ್ಲಾ ಊಟ ವಸತಿ ಕೊಟ್ಟು ವಾರದಲ್ಲಿ ಎರಡರಂತೆ 12 ನಾಟಕಗಳನ್ನು ಆಡಿಸಿದ್ದರು. ಇವರೂ ಕಡು ಕಷ್ಟ ನಷ್ಟ ಅನುಭವಿಸಿದವರು. ಇವರ ಮಗ ರಾಜಶೇಖರಪ್ಪ ಕೂಡಾ ನಟರಾಗಿದ್ದರು. ಚೆಳ್ಳಿಚುಕ್ಕಿ, ಹಳ್ಳಿಹುಡುಗಿ, ಸದಾರಮೆ, ಶಕುಂತಲಾ, ಗುಣಸಾಗರಿ ಮುಂತಾದ ನಾಟಕಗಳನ್ನು ಪ್ರಯೋಗಿಸಿದರು.

ಶ್ಯಾವಳಿಗೆ ಶೇಖರಪ್ಪನವರೆಂದರೆ ನಾಟಕ, ಅದಕ್ಕಾಗಿಯೇ ತಮ್ಮ ಬಾಳನ್ನೇ ಮುಡುಪಾಗಿಟ್ಟವರು, ಸಂತಾನ ಫಲವಿಲ್ಲದೇ ಆ ಕೊರತೆಯನ್ನು ನಾಟಕ ಕಲೆಯ ಮೂಲಕ ಸಂತಸ ಕಂಡವರು. ಶಾಂತಸ್ವಭಾವದ ಶೇಖರಪ್ಪನವರು ಅವಿರತ ಶ್ರದ್ಧೆಯಿಂದ ನಾಟಕಗಳನ್ನು ಕಲಿಸುವುದರಲ್ಲಿ ಜೀವನ ಸಾರ್ಥಕ್ಯವನ್ನು ಕಂಡು ಕೊಂಡವರು. ಅನೇಕ ಬಯಲಾಟಗಳಲ್ಲಿ ಭಾಗವತರಾಗಿ ಹಾರ್ಮೋನಿಯಂ ಮಾಸ್ತರರಾಗಿ, ನಟರಾಗಿ, ನಿರ್ದೇಶಕರಾಗಿ ಸೇವೆ ಸಲ್ಲಿಸಿದ್ದಾರೆ. ಏಕಲವ್ಯ, ಗಿರಿಜಾಕಲ್ಯಾಣ, ಪಾಂಡುವಿಜಯ, ದ್ರೋಣಪರ್ವ, ಕನಕಾಂಗಿಕಲ್ಯಾಣ, ಸೈಂದವರಸಾವು ಮುಂತಾದ ಬಯಲಾಟಗಳಿಗೆ ಭಾಗವತರಾಗಿ ದುಡಿದಿದ್ದಾರೆ. ಸಮುದಾಯ ತಂಡದಲ್ಲಿದ್ದು 1984–85ರಲ್ಲಿ 'ಬರದ ಬಯಲಾಟದ' ಭಾಗವತರಾಗಿ ಬೀದರಿನಿಂದ ಬೆಂಗಳೂರಿನವರೆಗೆ 1 ತಿಂಗಳ ಕಾಲ ಪ್ರದರ್ಶನಗಳನ್ನು ನೀಡಿದ್ದಾರೆ ಇವರ ಗೆಳೆಯರಾದ ಚೆನ್ನಬಸಪ್ಪನವರೂ ಬಯಲಾಟದಲ್ಲಿ ಭಾಗವಹಿಸುತ್ತಿದ್ದರು.

ಮಳೆಗಾಲ ಬಂತೆಂದರೆ ನಾಟಕ ಕಂಪನಿಗಳಿಗೆ ನೆನಪಾಗುತ್ತಿದ್ದುದು ಹರಪನಹಳ್ಳಿ ಕಲಾಪ್ರೇಕ್ಷಕ ಪ್ರಭುಗಳು ಚಿಂದೋಡಿ ವೀರಪ್ಪನವರ ಕಂಪನಿ, ಗುಬ್ಬಿವೀರಣ್ಣ ಕಂಪನಿ, ನಾಗರತ್ನಮ್ಮನವರ ಸ್ತ್ರೀ ನಾಟಕ ಮಂಡಲಿ, ಶಾರದ ಸಂಗೀತ ನಾಟಕ ಕಂಪನಿ, ಕಮತಗಿ ಕಂಪನಿ, ಹಿರಣ್ಣಯ್ಯ ಮಿತ್ರಮಂಡಳಿ, ಕಂಚಿಕೇರಿ ಕೊಟ್ರಬಸಪ್ಪನವರ ಕಂಪನಿ ಹೀಗೆ ಇನ್ನು ಹಲವಾರು ಕಂಪನಿಗಳು ಬಂದು ಬೀಡು ಬಿಟ್ಟು ತಿಂಗಳುಗಟ್ಟಲೇ ನಾಟಕಗಳನ್ನು ಪ್ರದರ್ಶಿಸಿದ್ದಾರೆ.

ಗುಬ್ಬಿ ಕಂಪನಿಯಿಂದ ಆಡಿದ ಲವಕುಶ, ಎಡೆಯೂರು ಸಿದ್ಧಲಿಂಗೇಶ್ವರ, ದಶಾವತಾರ, ಶ್ರೀ ಕೃಷ್ಣ ಲೀಲೆ, ಅಣ್ಣ ತಮ್ಮ ನಾಟಕಗಳನ್ನು ನೋಡಿದವರು ಇನ್ನೂ ಆ ಸವಿನೆನಪುಗಳನ್ನು ಮೆಲುಕು ಹಾಕುತ್ತಿದ್ದಾರೆ. ಸ್ವತಃ ಗುಬ್ಬಿ ಚೆನ್ನಬಸಪ್ಪನವರ ಪತ್ನಿ ಪ್ರಭಾವತಿ ಮತ್ತು ಮಕ್ಕಳು ನಟರಾಗಿ ಮಿಂಚಿದ್ದಾರೆ. ಶ್ರೀ ನೀಲಕಂಠೇಶ್ವರ ನಾಟ್ಯ ಸಂಘ ಮೈಸೂರು ಇವರು ಶನಿದೇವರ ಮಹಾತ್ಮೆ, ವಿಕ್ರಮಾದಿತ್ಯದಲ್ಲಿ ಎಚ್.ಟಿ. ಅರಸು ಸಿನಿಮಾ ನಟರ ಅದ್ಭುತ ಅಭಿನಯವನ್ನು ಇನ್ನೂ ಮರೆತಿಲ್ಲ. ಎಂ. ಆನಂದರಾವ್, ಬಳ್ಳಾರಿ ಲಲಿತಾ, ಕೂಡ್ಲಿಗಿ ಪದ್ಮ, ಮರಿಯಮ್ಮನಹಳ್ಳಿ ನಾಗರತ್ನ, ಗುಡಿಹನುಮಂತಾಚಾರ್ ಮುಂತಾದವರು ಜನ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದ್ದಾರೆ.

ಗುಡೆಕಟ್ಟಿ ನಾಟ್ಯ ಸಂಘದಲ್ಲಿ ತಳವಾರ ಸಂಜೀವಮ್ಮ, ಮಗಳು ಸಿದ್ದವ್ವ, ಮುತ್ತಿಗೆ ಗುಣಿಗಾರ ಹಾಲಪ್ಪ, ಗಜರತ್‌ಸಿಂಗ್, ಪಂಚಪ್ಪ ಬಿ. ಮೋಹರೆ, ಅಕ್ಕಸಾಲಿಗರ ನಾಗರಾಜ್ ಮುಂತಾದವರು ಭಾಗವಹಿಸಿದ್ದರು.

ಮತ್ತೊಬ್ಬ ಅನನ್ಯ ಕಲಾವಿದರೆಂದರೆ ಬಣಗಾರ ಹೊನ್ನಪ್ಪ. ಇವರು ನಾಟಕಗಳನ್ನು ನಿರ್ದೇಶಿಸುತ್ತಿದ್ದರು, ಬಹಳ ಶಿಸ್ತಿನ ಸಿಪಾಯಿ! ಸ್ವಾತಂತ್ರ್ಯ ಹೋರಾಟಗಾರರು, ಅದಕ್ಕಾಗಿ ಜೈಲು ಶಿಕ್ಷೆಯನ್ನು ಅನುಭವಿಸಿದವರು.

ಕಮ್ಮತ್ತಹಳ್ಳಿ ಬಿ. ಸುರೇಂದ್ರಾಚಾರ್ ನೀಲಗುಂದದ ಕುಳ್ಳನ್ನಾರಪ್ಪರ ಹಾಲಪ್ಪ ಇವರು ಮೋಡಿ ವಿದ್ಯೆ ಶಿಲ್ಪಿ ಹಾರ್ಮೋನಿಯಂ ಮಾಸ್ತರ, ನಟ ನಿರ್ದೇಶಕ ಬಹುಮುಖ ಪ್ರತಿಭಾವಂತರು. 1956ರಲ್ಲಿ ಚಿತ್ರಪಟ ರಾಮಾಯಣ, ಲವಕುಶ, ಪಾಂಡುವಿಜಯ ಹೀಗೆ ಹತ್ತಾರು ನಾಟಕಗಳನ್ನು ಆಡಿಸುತ್ತಿದ್ದರು. ಚಿತ್ತಾರಗಡಿಕೇರಿಯ ನಾನ್ನಾಸಾಹೇಬ, ಮೊಹಮ್ಮದ್ ಇಮಾಮ್ ಸಾಹೇಬ (ಇರ್ಕಲಿ) ಬಡಿಗೇರ ವೀರಬಸಪ್ಪ, ಬೇಡರಕೇರಿ ಗಿಡ್ಡಹಳ್ಳಿ ದೊಡ್ಡದ್ಯಾಮಪ್ಪ, ಮ್ಯಾಕಿ ಭೀಮಪ್ಪ ಸುಣ್ಣಗಾರಕೇರಿ ಫಕ್ಕೀರಪ್ಪ, ಮೈದೂರಿನ ಹರಿಜನ ದುರುಗಪ್ಪ ವಿವಿಧ ಭಂಗಿಗಳ ಸ್ತ್ರೀ ಪಾತ್ರದಲ್ಲಿ ಅವರ ವನಪು ವಯ್ಯಾರ ಮೆಚ್ಚುವಂತಹದು. ಬೆಣ್ಣಿಹಳ್ಳಿ ಬಯಲಾಟದ ಸಿದ್ದಲಿಂಗ, ಛಲವಾದಿ ಬಸವರಾಜ, ಕಾನಹಳ್ಳಿ ಕಾಶೀಮ್ ಸಾಹೇಬರು, ಲಾವಣಿ ರಿಯಾಜ್ ಕವ್ವಾಲಿ, ಅಲಾಯಿಪದ, ಜನಪದ, ಭಕ್ತಿ ಭಾವಗೀತೆ ತತ್ವಪದ ಹಾಡುತ್ತಾರೆ ಈಗಲೂ ಕೇಳಬೇಕೆನಿಸುತ್ತದೆ.

ಮಾಡ್ಲಿಗೇರಿ ಎಸ್. ಹಾಲಪ್ಪನವರ ನೇತೃತ್ವದಲ್ಲಿ ಸಣ್ಣ ತಿಮ್ಮಪ್ಪ ಭಾಗವತ ರುದ್ರಗೌಡದಾಸರ, ಗೌರಿಹಳ್ಳಿ ಈಡಿಗರ ಹಾಲಪ್ಪ, ಕೃಷ್ಣಪ್ಪ ಸಂಗೀತ ಮಾಸ್ತರರು, ಶಿರಗಾನಹಳ್ಳಿ ಪರಶುರಾಮಪ್ಪ, ಕಡಬಗೇರಿ ಬಾರಿಕರ ಷಣ್ಮುಖಪ್ಪ, ನೀಲಗುಂದ ಚೆನ್ನಬಸಪ್ಪ, ಬಾರಿಕರ ಹುಚ್ಚಪ್ಪ, ಅಗಸರ ಈಶ್ವರಪ್ಪ, ತಿರುಕಪ್ಪ ಗೋಣೆಪ್ಪನವರ, ಗೋಣೆಪ್ಪ ಹಳೇಮನೆ ನಾಗೇಂದ್ರಪ್ಪ, ಕೊರಚರ ಬಸಪ್ಪ, ಚಿಗರಿ ಹನುಮಂತಪ್ಪ ಮಾಸ್ತರರು ಹೆಸರಾಗಿದ್ದಾರೆ.

ಬಾಗಳಿಯಲ್ಲಿ ಶ್ರೀ ಕನಕೇಶ್ವರ ಯುವನಾಟ್ಯ ಸಂಘ ಈಗಲೂ ಚಾಲ್ತಿಯಲ್ಲಿದೆ. ಬಸವಲಿಂಗಪ್ಪ, ಹೊಸಮನಿ ಷಡಾಕ್ಷರಪ್ಪ, ಬಣಕಾರ ಸಿದ್ದಪ್ಪ, ರೇವಣ್ಣ ಮುಂತಾದವರು ಶ್ರೀ ಗೋಣಿಬಸವೇಶ್ವರ ನಾಟಕವನ್ನು 50 ವರ್ಷಗಳಿಂದ ಪ್ರಯೋಗ ಮಾಡಿದ್ದಾರೆ. ರೇಣುಕಪ್ಪ ಸಂಗೀತ ವಿದ್ವಾನ್ ಇದ್ದಾರೆ. ನಾಟಕವೆಂದರೆ ಚಿಗಟೇರಿಯನ್ನು ಮರೆಯುವ ಹಾಗಿಲ್ಲ. ನಾಟಕಕಾರ ಜಾನಪದದ ತಜ್ಞ ಮುದೇನೂರು ಸಂಗಣ್ಣನವರ ನೇತೃತ್ವದಲ್ಲಿ ಶ್ರೀ ನಾರದಮುನಿ ಸಾಂಸ್ಕೃತಿಕ ಸಂಘಟನೆ ಹೆಸರಾಂತ ಕಲಾತಂಡದವರಿಂದ ವಿವಿಧ ರೀತಿಯ ನಾಟಕಗಳು ನಡೆದಿವೆ. ಬಾಗಳಿಯಲ್ಲೇ ವಿಶ್ವಕಲಾ ಯುವಕ ರೈತನಾಟ್ಯ ಸಂಘವು ಅನೇಕ ಸಾಮಾಜಿಕ ಪೌರಾಣಿಕ ನಾಟಕಗಳನ್ನು ಪ್ರದರ್ಶಿಸಿದೆ.

ಚಂದ್ರಶೇಖರ ಕಂಬಾರ ಮತ್ತು ಸಂಗಣ್ಣನವರು ಸಂಪಾದಿಸಿರುವ ಲಕ್ಷಾಪತಿರಾಜನ ಕಥೆ, ಸೂಳೆ ಸಂಕವ್ವೆ, ದೊಡ್ಡಪ್ಪ, ಪ್ರಭಾತ್ ಕಲಾತಂಡದವರಿಂದ ಮುಖ್ಯಮಂತ್ರಿ, ಸಾಕ್ಷಿಕಲ್ಲು, ಸಂಗ್ಯಾಬಾಳ್ಯಾ ಇನ್ನು ಮುಂತಾದವು. ಹೆಸರಿಸಲು ಅವಕಾಶ ಸಾಲದ ಸಂಗಣ್ಣನವರ ಮಾನಸಿಕ ಕೂಸು 'ಸೃಜನರಂಗ' ಹರಪನಹಳ್ಳಿಯಲ್ಲಿ ಸ್ಥಾಪನೆಯಾಗಿ ಸೈಂಧವನ ಸಾವು ಆಡಿ ಸಾವನ್ನಪ್ಪಿದ್ದು ದುರಂತವೇ ಸರಿ. ಎ.ಎಂ. ನಾಗಭೂಷಣಯ್ಯ, ಕೌಟಿ ಶಂಕ್ರಪ್ಪ, ಶಾವಳಿಗಿ ನಾಗರಾಜ, ರುದ್ರಮುನಿಚಾರ್ಯ ಶೇಖರಪ್ಪ, ಇಟಗಿ ನಾಗರಾಜ, ಜಿ. ಬಸವಂತಪ್ಪ ಮುಂತಾದವರು ಭಾಗವಹಿಸಿದ್ದರು.

ನೀನಾಸಂನ ತಿರುಗಾಟದ ನಾಟಕಗಳು, ಶಿವಸಂಚಾರದ ನಾಟಕಗಳು ಪ್ರತಿ ವರ್ಷ ಪ್ರದರ್ಶನವಾಗುತ್ತಿವೆ. ಶಿಷ್ಯ ಗುರುವಿನ ಹತ್ತಿರ ಹೋಗಿದ್ದರೆ ಗುರುವೇ ಶಿಷ್ಯನ ಹತ್ತಿರ ಹೋಗಬೇಕು. ನಾಣ್ನುಡಿಯಂತೆ ನಾಟಕವೇ ಜನರಲ್ಲಿಗೆ ಹೋಗುವುದು, ಬೀದಿನಾಟಕದ ಸಿ.ಜಿ.ಕೃಷ್ಣ ಸ್ವಾಮಿಯವರ ಬೆಲ್ಚಿ ಮತ್ತು ಪತ್ರೆ ಸಂಗಪ್ಪನವರ ಕೊಲೆ ನಾಟಕಗಳನ್ನು ಎಸ್.ಎಸ್. ಹಿರೇಮಠರು, ಡಿ.ಬಿ. ಬಡಿಗೇರ, ಚಿಕ್ಕಮಠ, ಜಿ. ಬಸವಂತಪ್ಪ ಶಿಕಾರಿ ಬಾಲಪ್ಪ, ಕೆ.ಎನ್. ಹಡಗಲಿಮಠ ಮುರುಳಿ ಕೃಷ್ಣ, ಮೊಹ್ಮದ ಆಲಿ, ದ್ವಾರಕೇಶ, ಮತ್ತಿಹಳ್ಳಿ ಸಿದ್ದಪ್ಪ, ಸರಸ್ವತಿ ಜಾಹ್ನವಿ ಅಮೀರುನ್ನಿಸ ಮುಂತಾದವರು ಭಾಗವಹಿಸಿದ್ದರು. ಅನಕ್ಷರತೆ, ಮೂಢನಂಬಿಕೆಗಳು ಶೋಷಣೆ ಬಡತನ ಮುಂತಾದ ಸಾಮಾಜಿಕ ಸಮಸ್ಯೆಗಳ ಬಗ್ಗೆ ಅರಿವು ಜನ ಜಾಗ್ರತೆಯನ್ನುಂಟು ಮಾಡುವುದು ಸಮುದಾಯದ ಮುಖ್ಯ ಉದ್ದೇಶ. ಎಸ್.ಎಸ್.ಹಿರೇಮಠರ ಜೋಗತಿಕಲ್ಲು ನಾಟಕದಲ್ಲಿ ಬಿ. ಪಂಚಪ್ಪ ಅವರ ಮಕ್ಕಳಾದ ಬಿ.ಪಿ. ಕಲ್ಪಿತ ಬಿ.ಪಿ. ಸುಷ್ಮ ಭಾಗವಹಿಸಿದ್ದುದು ಹಚ್ಚ ಹಸಿರು.

ಹಾಸ್ಯಭರಿತ ಪಾತ್ರಗಳಿಗೆ ಜೀವ ತುಂಬುವ ಅಭಿನಯ ಚತುರ ಬಿ. ಮನೋಹರರವರು ಹತ್ತಾರು ನಾಟಕಗಳಲ್ಲಿ ಅಭಿನಯಿಸಿದ್ದಾರೆ.

'ಜಪ್ತಿ' ನಾಟಕವು 33 ಪ್ರಯೋಗಗಳನ್ನು ಕಂಡಿತು. ಇಸ್ಮಾಯಿಲ್ ಎಲಿಗಾರ್, ಬಿ.ಪಂಚಪ್ಪ, ಜಾನಪದ ಹಾಡುಗಾರ ಎಂ. ಮರುಳಸಿದ್ದಯ್ಯ ಮುಂತಾದವರು

ಭಾಗವಹಿಸಿದ್ದರು. ಈಗ ಹರಪನಹಳ್ಳಿಯಲ್ಲಿ ಕಲೆ, ಸಾಹಿತ್ಯ, ನಾಟಕಗಳಲ್ಲಿ ಅನುಭವಿಗಳಾದ ಡಿ. ಭೀಮಪ್ಪನವರು ನಟರೂ ಹೌದು ಇವರ ಅಧ್ಯಕ್ಷತೆಯಲ್ಲಿ ತಾಲ್ಲೂಕಿನ ಕಲಾವಿದರು 'ಕಲಾಮನೆ' ರಚಿಸಿಕೊಂಡು ಕಲೆಯನ್ನು ಜೀವಂತವಾಗಿ ಉಳಿಸಿಕೊಳ್ಳಲು ಪ್ರಯತ್ನಿಸಿದ್ದಾರೆ. ಬಿ. ಪರಶುರಾಮರವರು ನಾಟಕ ಕಲೆಯನ್ನು ಬೆಳೆಸಲು ಪ್ರಯತ್ನಿಸುತ್ತಿದ್ದಾರೆ. ಗೋಪಾಲಕೃಷ್ಣ ನಾಯರಿ ನಿರ್ದೇಶನದಲ್ಲಿ ಕರ್ಣಭಾರ, ರಾಜಾ ಸೋಮಶೇಕರ ನಾಯಕ ನಾಟಕಗಳನ್ನು ಆಡಿಸಿದ್ದಾರೆ. 'ಸಮಸ್ತರು' ರಂಗ ಸಂಘಟನೆ ಕಟ್ಟಿಕೊಂಡಿದ್ದಾರೆ.

ಈ ಎಲ್ಲಾ ಮೇಲಿನ ಅಂಶಗಳನ್ನು ಮನಗಂಡಾಗ ಹರಪನಹಳ್ಳಿ ತಾಲ್ಲೂಕನ್ನು ಹುರುಪಿನ ತಾಲ್ಲೂಕೆಂದು ಕರೆಯಬೇಕಲ್ಲವೇ? ಕನ್ನಡ ಕಲಾ ನಾಟ್ಯ ಸಂಘ 1978 ರಿಂದ 1986 ತನಕ ಬಂಜೆ ತೊಟ್ಟಿಲು, ಬಸ್ ಕಂಡಕ್ಟರು, ಗೌಡ್ರಗದ್ಲ, ತಾಯಿಕರುಳು, ಚಿನ್ನದ ಗೊಂಬೆ ಪ್ರದರ್ಶಿಸಿದ್ದಾರೆ. ಹಾರ್ಮೋನಿಯಂ ಮಾಸ್ಟರ್ ಕುಬೇರಪ್ಪ, ನೀಲುವಂಜಿ, ಬಿ. ನೀಲಮ್ಮನವರ ಮಾವನವರು. ತಬಲ ರಾಜಣ್ಣನವರು ಒಳ್ಳೆಯ ಕಲಾವಿದರು ಹಲವಾರು ಕಂಪನಿಗಳಲ್ಲಿ ಕೆಲಸ ಮಾಡಿದ್ದಾರೆ. ಚಿಕ್ಕೆರೂರು ಭೀಮಸೇನರಾವು ಇವರ ನಿರ್ದೇಶನದಲ್ಲಿ ವಿರುಪಾಕ್ಷಭಟ್ಟ, ರಘುಪತಿ ಭಟ್, ಅಣ್ಣಿಂಭಟ್ರು, ನಾಟಕಕಾರ ಯಂಕಣ್ಣನವರು ಪ್ರಸಿದ್ಧರಾಗಿದ್ದಾರೆ.

# ಹರಪನಹಳ್ಳಿ ಸಮುದಾಯ ಸಮಸ್ತರು

ಬಯಲಾಟ, ವೃತ್ತಿರಂಗ ಶೈಲಿಯ ನಾಟಕ ಪ್ರದರ್ಶನಗಳಿಗೆ ಹೆಸರಾಗಿದ್ದ ಹರಪನಹಳ್ಳಿಗೆ ಗುಡಿಹಳ್ಳಿ ನಾಗರಾಜ ಅವರು ಆಧುನಿಕ ನಾಟಕಗಳನ್ನು ೧೯೮೦ ರಲ್ಲಿ (ಇಲ್ಲಿ ಉಪನ್ಯಾಸಕರಾಗಿದ್ದ ಅವಧಿಯಲ್ಲಿ) ಪರಿಚಯಿಸಿದರು. ಸಮುದಾಯ ಹುಟ್ಟುಹಾಕಿ ಮಂಗಳೂರಿನಿಂದ ಮೋಹನಚಂದ್ರ ಅವರನ್ನು ಕರೆಯಿಸಿ ಪ್ರಥಮಬಾರಿಗೆ ರಂಗಶಿಬಿರ ನಡೆಸಿದರು. ನಾಟಕ ನಿರ್ದೇಶನ ಮತ್ತು ನಾಟಕೋತ್ಸವ ಸಂಘಟಿಸುವ ಮೂಲಕ ಇಲ್ಲಿನ ಸಮುದಾಯ ಆಂದೋಲನ ಶುರುವಾಗಲು ಕಾರಣರಾದರು.

ಪಕ್ಕದ ಹೂವಿನ ಹಡಗಲಿಯಲ್ಲಿ ಉಪನ್ಯಾಸಕರಾಗಿದ್ದ ಎಸ್.ಎಸ್.ಹಿರೇಮಠರು ಇಲ್ಲಿಗೆ ವರ್ಗವಾಗಿ ಬಂದ ನಂತರ ಸಮುದಾಯ ಚಟುವಟಿಕೆಗಳು ತೀವ್ರಗೊಂಡವು. ಬೀದಿ ನಾಟಕಗಳ ಆಂದೋಲನವೇ ಶುರುವಾಯಿತು. ಪ್ರೊ.ಬಡಿಗೇರ, ಎ.ಸಿ.ಚಿಕ್ಕಮಠ, ಇಸ್ಮಾಯಿಲ್ ಎಲಿಗಾರ, ಶಾಂತಕುಮಾರಿ ಮುಂತಾದವರು ಸಮುದಾಯವನ್ನು ವಿಸ್ತರಿಸಿ ಬೆಳೆಸಿದರು.

ಗುಡಿಹಳ್ಳಿ ನಾಗರಾಜ ನಾಟಕ ಅಕಾಡೆಮಿ ಸದಸ್ಯರಾಗಿದ್ದ ಅವಧಿಯಲ್ಲಿ ೧೯೯೫ ರಲ್ಲಿ ಹರಪನಹಳ್ಳಿಯಲ್ಲಿ ಒಂದು ತಿಂಗಳ ರಂಗಶಿಬಿರವನ್ನು ಲಂಬಾಣಿ ಮಹಿಳೆಯರಿಗೆ



ಸಮಸ್ತರು, ಅಭಿನಯದ ರಾಜಸೋಮಶೇಖರ ನಾಯಕ ನಾಟಕದ ಒಂದು ದೃಶ್ಯ

ಏರ್ಪಡಿಸಿದ್ದರು. ಸಂಘಟನೆಯಲ್ಲಿ ಬಿ.ಪರಶುರಾಮ ಕೈಜೋಡಿಸಿದರು.

ಈ ಮಧ್ಯೆ ರಂಗಚಟುವಟಿಕೆ ಸ್ವಲ್ಪ ಕ್ಷೀಣಗೊಂಡಾಗ ಚಳವಳಿಗಳ ಮೂಲಕ ರಂಗಪ್ರವೇಶ ಮಾಡಿದ ಪರಶುರಾಮ ಅವರು, ನಂತರದ ದಿನಗಳಲ್ಲಿ ಅದರಲ್ಲೂ ಕಳೆದ ದಶಕದಿಂದ ಸಮಸ್ತರು ತಂಡದ ಮೂಲಕ ರಂಗ ಚಟುವಟಿಕೆಗಳನ್ನು ನಿರಂತರವಾಗಿ ನಡೆಸುತ್ತ ಬಂದಿದ್ದು ರಾಜ್ಯದ ಪ್ರತಿಷ್ಠಿತ ಹವ್ಯಾಸಿ ತಂಡಗಳ ಪೈಕಿ ಇದೂ ಒಂದು ಎನ್ನುವ ಮಟ್ಟಕ್ಕೆ ಬೆಳೆಸಿದ್ದಾರೆ.

ಗೋಪಾಲಕೃಷ್ಣ ನಾಯಿರಿ ದಿಲ್ಲಿಯಲ್ಲಿ ಎನ್.ಎಸ್.ಡಿ. ಪದವಿ ಪಡೆದು ಬಂದವರು. ಅದರಿಂದಲೇ ಮಾತ್ರ ಅವರಿಗೆ ಕನ್ನಡರಂಗಭೂಮಿಯಲ್ಲಿ ವಿಶೇಷ ಸ್ಥಾನಮಾನವೆಂದೇನಿಲ್ಲ. ಅವರ ರಂಗಬದ್ಧತೆಗಳಿಗೆ ಪರಿಶಿಷ್ಟ ಕಲೆಗಳ ಸಂವೇದನೆಗಳು ಸೇರಿದಂತೆ ಈ ನೆಲದ ಆದಿಮ ಬದುಕಿನ ಕಲೆಗಳ ಜೀವ ಕಳಕಳಿಗಳಿವೆ. ಇಂತಹ ಜೀವಪರ ಚಿಂತನೆಗಳಿಂದಾಗಿ ಅವರು ಎರಡು ದಶಕಗಳಷ್ಟು ಹಿಂದೆ 'ಸಮಸ್ತರು' ಹೆಸರಿನ ರಂಗ ಸಂಘಟನೆ ಹುಟ್ಟು ಹಾಕಿದರು. ಅದರ ವ್ಯಾಪ್ತಿ ಕನ್ನಡ ನೆಲದ ತುಂಬೆಲ್ಲ ಎಂಬ ಹಂಬಲ. ಆದರೆ ಅಂದು ಚಿತ್ರದುರ್ಗ ಜಿಲ್ಲೆಯಲ್ಲಿ ಮಾತ್ರ ತನ್ನ ಗಟ್ಟಿಮುಟ್ಟಾದ ನೆಲೆ ಕಂಡಿತು. ಅದೆಷ್ಟು ಪರಿಣಾಮಕಾರಿಯಾಗಿ ಅಲ್ಲಿ ಬೆಳೆಯ ತೊಡಗಿತೆಂದರೆ ಕೆಲವು ಪಟ್ಟಭದ್ರ ಹಿತಾಸಕ್ತಿಗಳು ನಾಯಿರಿಯವರ ಮೇಲೆ ಘೋರ ಹಲ್ಲೆ ಮಾಡುವವರೆಗೂ.

ಆದರೆ ಸಮಸ್ತರು ಜಿಲ್ಲೆಯಾಚೆ ಹೋಗದಂತಹ ಬಿಕ್ಕಟ್ಟು ಸೃಷ್ಟಿಯಾಯಿತು. ನೂತನ ದಾವಣಗೆರೆ ಜಿಲ್ಲೆಯಾದ ಮೇಲೆ ಹರಪನಹಳ್ಳಿಯಲ್ಲಿ ಬಿ. ಪರಶುರಾಮ್, ನಾಯಿರಿಯವರ 'ಸಮಸ್ತರು' ರಂಗಸಂಘಟನೆಯ ಶಾಖೆ ಆರಂಭಿಸಿಕೊಂಡು ಕೆಲವು



ಸಮಸ್ತರು ಕಾರ್ಯಕ್ರಮವೊಂದರಲ್ಲಿ ಬಿ. ಪರಷುರಾಮ, ಮಂಜುನಾಥ ಬೆಳಕೆರೆ, ಜನಾರ್ಧನ (ಜನ್ನಿ), ಗುಡಿಹಳ್ಳಿ ನಾಗರಾಜ

ರಂಗ ಪ್ರಯೋಗಗಳನ್ನು ನಾಯಿರಿಯವರ ಮಾರ್ಗದರ್ಶನದಲ್ಲೇ ಪ್ರಸ್ತುತ ಪಡಿಸುತ್ತಾ ಬಂದಿದ್ದಾರೆ. ನಾಟಕ ಅಕಾಡೆಮಿಯ ವಾರ್ಷಿಕ ಪ್ರಶಸ್ತಿಯನ್ನು ಪರಶುರಾಮ್ ಗಳಿಸಿಕೊಂಡಿದ್ದಾರೆ.

ನಾಯಿರಿ–ಪರಶುರಾಮ್ ಜುಗಲ್‌ಬಂದಿಯಾಗಿ ಹರಪನಹಳ್ಳಿಯ 'ಸಮಸ್ತರು' ವೀರಗಾಸೆ ಕರ್ಣಭಾರ, ಕುಲಂಕುಲಮಲ್ಲು, ಸಿದ್ದ, ಕೈಲಾಸದ ಹಾದಿಯಲ್ಲಿ... ಪ್ರಯೋಗಗಳನ್ನು ಯಶಸ್ವಿಯಾಗಿ ನೆರವೇರಿಸಿದೆ. ಇತ್ತೀಚೆಗೆ ಡಿ. ರಾಮನಮಲಿಯವರ 'ಕಾಳವ್ವನಕೋಳಿ' ಎಂಬ ಸಣ್ಣ ಕಥೆಯೊಂದನ್ನು ರಂಗ ರೂಪಾಂತರಗೊಳಿಸಿದೆ. ಕೆಲವು ರಂಗ ಶಿಬಿರಗಳನ್ನು ನಡೆಸಿದೆ. ಸಮಸ್ತರು ಹತ್ತು ಹಲವು ಹೈರಾಣಗಳೊಂದಿಗೆ ಬಿಸಿಲ ನಾಡಿನ ಬಯಲು ಸೀಮೆಯಲ್ಲಿ ಬೇರೂರಲು ಅದು ತುಂಬಾ ಹೆಣಗಾಡುತ್ತಿದೆ.



ಸಮಸ್ತರು ಅಭಿನಯಿಸಿದ 'ವಧೂಟಿ' ನಾಟಕದ ದೃಶ್ಯ

### ಸಮಸ್ತರು ಕಲಾವಿದರು :

| | | |
|---|---|---|
| ಎಂ. ಮಾರುತಿ | ಎಂ.ಅರುಣ | ಎಚ್.ಜೆ. ಮಾಲಾಶ್ರೀ |
| ಎಚ್. ಎಲ್ಲಮ್ಮ | ಶೃತಿ | ಅಫ್ರೀನ್ ಮಿರ್ಜ |
| ವೀರಮ್ಮ | ಶೋಭ | ದುರ್ಗಾಂಬ |
| ಕಾರ್ತಿಕ | ಚಂದನ | ಬಸವರಾಜ |
| ದುರುಗಪ್ಪ | ಸಂತೋಷ | ಕುಮಾರ |
| ರವಿಕುಮಾರ | ಗುಡ್ಡಜ್ಜ | ಪುಷ್ಪ |
| ಮಂಜಪ್ಪ | ದಿನೇಶ್ | ಅಜ್ಜಯ್ಯ |
| ಕಾವೇರಿ | ಬಿ. ಪರಶುರಾಮ್ | ಸಂತೋಷ |
| ನಾಗರಾಜ | ದೇವೇಂದ್ರ | ಪ್ರಭಾಕರ |
| ದೇವೀರಮ್ಮ | | |

## ಹರಪನಹಳ್ಳಿ ತಾಲ್ಲೂಕು ಸಂಗೀತ ಕಲಾವಿದರು

| ಕಲಾವಿದರ ಹೆಸರು | ವಾಸಸ್ಥಳ | ರಂಗಪ್ರಕಾರ |
|---|---|---|
| ಆರ್. ಬಾಷಾ ಸಾಹೇಬ್ | ದುಗ್ಗಾವತಿ | ಹಾರ್ಮೋನಿಯಂ ಮಾಸ್ತರ್ |
| ಸಾರಥಿಸಿದ್ದಪ್ಪ | ದುಗ್ಗಾವತಿ | ಹಾರ್ಮೋನಿಯಂ ಮಾಸ್ತರ್ |
| ಬಸವರಾಜಪ್ಪ | ತಾಳೇದಹಳ್ಳಿ | _"_ |
| ಈ. ಕೆಂಚಪ್ಪ | ಗೌರಿಹಳ್ಳಿ | _"_ |
| ಮರುಳಸಿದ್ದಪ್ಪ | ಕೆರೆಗುಡಿಹಳ್ಳಿ | _"_ |
| ಭರಮಪ್ಪ | ಉಚ್ಚಂಗಿದುರ್ಗ | _"_ |
| ವಾಸುದೇವಪ್ಪ | ಹಲುವಾಗಲು | _"_ |
| ವೆಂಕಟೇಶ್ | ಮತ್ತಿಹಳ್ಳಿ | _"_ |
| ಮಲ್ಲಿಕಾರ್ಜುನಪ್ಪ | ಮತ್ತಿಹಳ್ಳಿ | _"_ |
| ಹಾಲೇಶಪ್ಪ | ತಿಪ್ಪನಹಳ್ಳಿ | _"_ |
| ಸುರೇಂದ್ರಾಚಾರ್ | ಕಮ್ಮತ್ತಹಳ್ಳಿ | _"_ |
| ಅಂಜಿನಪ್ಪ | ಇಟ್ಟಿಗುಡಿ | ಸ್ಯಾಕ್ಸಾಫೋನ್, ಕ್ಯಾಶಿಯೋ |
| ರೇವಣ್ಣ | ಬಾಗಳಿ | ಹಾರ್ಮೋನಿಯಂ |
| ಪರ್ಸಪ್ಪ | ಶಿರಗಾನಹಳ್ಳಿ | _"_ |
| ಹನುಮಂತಪ್ಪ | ತುಂಬಿಗೆರೆ | _"_ |

| | | |
|---|---|---|
| ಅಜ್ಜಪ್ಪ | ಬೆಣ್ಣಿಹಳ್ಳಿ | ಕ್ಯಾಶಿಯೋ, ಕ್ಲಾರಿಯೋನೆಟ್ |
| ಹೇಮಣ್ಣ | ಹೊನ್ನೇನಹಳ್ಳಿ | ಹಾರ್ಮೋನಿಯಂ |
| ಇಮಾಮ್ ಸಾಹೇಬ್ | ಶಿಂಗ್ರಿಹಳ್ಳಿ | _"_ |
| ಯಮನೂರ್ ಸಾಹೇಬ್ | ಬೆಣ್ಣಿಹಳ್ಳಿ | ದಿಲ್‌ರುಬಾ |
| ಫಕ್ಕೀರೇಶಾಚಾರ್ | ಅರಸನಾಳು | ಹಾರ್ಮೋನಿಯಂ |
| ನಾಗರಾಜಪ್ಪ | ಹರಪನಹಳ್ಳಿ | ತಬಲಾ |
| ಜಯಣ್ಣ | ಅರಸೀಕೆರೆ | ಸೀನ್ಸ್ ಮಾಲೀಕರು |
| ಅಜ್ಜಪ್ಪ | ಅರಸೀಕೆರೆ | ಸೀನ್ಸ್ ಮಾಲೀಕರು |
| ತಾಜ್‌ಪೀರ್ | ಮತ್ತಿಹಳ್ಳಿ | ತಬಲಾ |
| ರೇವಣಸಿದ್ಧಾಚಾರ್ | ಅಣಜಿಗೆರೆ | ಹಾರ್ಮೋನಿಯಂ |
| ರೇಣುಕಪ್ಪ ಬಿ. | ಬಾಗಳಿ | ಹಾರ್ಮೋನಿಯಂ |
| ನಾಗರಾಜ್. ಎಚ್. | ಬಾಗಳಿ | ಹಾರ್ಮೋನಿಯಂ |
| ಅಜ್ಜಪ್ಪ | ಬಾಗಳಿ | ತಬಲಾ |
| ಹಾಲಸಿದ್ದಪ್ಪ | ಹರಪನಹಳ್ಳಿ | ಹಾರ್ಮೋನಿಯಂ |
| ಯಾಕೂಬ್ ಸಾಹೇಬ್ | ಶಿಂಗ್ರಿಹಳ್ಳಿ | ಹಾರ್ಮೋನಿಯಂ (ನಿರ್ದೇಶನ) |
| ಮಲ್ಲಿಕಾರ್ಜುನಪ್ಪ | ಮತ್ತಿಹಳ್ಳಿ | ಹಾರ್ಮೋನಿಯಂ |
| ರೇವಣಸಿದ್ದಪ್ಪ | ಕಂಚೀಕೆರೆ | ಹಾರ್ಮೋನಿಯಂ |
| ಪೂಜಾರ್ ಚಂದ್ರಪ್ಪ | ಹರಪನಹಳ್ಳಿ | ಹಾರ್ಮೋನಿಯಂ |
| ನೇವಾರ ಸಣ್ಣಪ್ಪ | ಕುಂಚೂರು | ತಬಲಾ |
| ಕೊಟ್ರಯ್ಯ ಗವಾಯಿಗಳು | ಚಿಗಟೇರಿ | ಹಾರ್ಮೋನಿಯಂ |
| ಹಬ್ಬೀ | ಅರಸಿಕೆರೆ | ಹಾರ್ಮೋನಿಯಂ |
| ಎನ್.ಜಿ. ಕೊಟ್ರಗೌಡ | ಜಿಟ್ಟನಕಟ್ಟೆ | ಹಾರ್ಮೋನಿಯಂ |
| ಕವಾಸ ಸಿದ್ದಪ್ಪ | ಕಂಚಿಕೆರೆ | ಹಾರ್ಮೋನಿಯಂ |
| ಪಿ. ಆಂಜಿನಪ್ಪ | ಗುಂಡಗತ್ತಿ | ಹಾರ್ಮೋನಿಯಂ |

*ಸಂಗ್ರಹ : ಇಮಾಮ್ ಹುಸೇನ್ ಶಿಂಗ್ರೀಹಳ್ಳಿ.*

## ಗ್ರಂಥಋಣ


1. ರಂಗಸುನೇರಿ 2. ಹೊನ್ನಮಣಿಗಳು 3.ಅಭಿವ್ಯಕ್ತಿ ರಂಗಾಂತರಂಗ
4. ರಂಗಕಂಕಣ 5. ರಂಗ ಬಾಸಿಂಗ 6. ವಿದ್ಯಾಗಿರಿ



ಪದ್ಮಶ್ರೀ ಚಿಂದೋಡಿ ಲೀಲಾ ಕಲಾಕ್ಷೇತ್ರ, ದಾವಣಗೆರೆ.

---

ವಿ.ಸೂ. : ಸರ್ಕಾರ ನಿರ್ಮಿಸುತ್ತಿರುವ ಜಿಲ್ಲಾ ರಂಗ ಮಂದಿರ ಕಟ್ಟಡವು ಮಹಾಲಿಂಗ ರಂಗ ಸಮಾಧಿ ಬಳಿ ನಿರ್ಮಾಣ ಹಂತದಲ್ಲಿದೆ

## ಕೃತಜ್ಞತೆಗಳು :


* ಎಂ.ಪಿ. ಗುರು ಚನ್ನಗಿರಿ
* ಎಚ್.ಸಿ. ಚಿದಾನಂದಮೂರ್ತಿ, ಹೊನ್ನಾಳಿ
* ವಸಂತ್ ಜಗಳೂರು
* ಜಿ. ಬಸವಂತಪ್ಪ, ಹರಪನಹಳ್ಳಿ
* ಡಾ. ಮಂಜುಶ್ರೀ ಕಡಕೋಳ, ಬೆಂಗಳೂರು
* ರೇವಣಸಿದ್ದಯ್ಯ ಸರ್ವಂದ, ಹರಿಹರ
* ಹಂಸಲೇಖ ಬೆಂಗಳೂರು
* ಪ್ರೊ॥ ಮಲ್ಲಿಕಾರ್ಜುನ ಜಾಧವ್
* ಡಾ॥ ಎಂ.ಜಿ. ಈಶ್ವರಪ್ಪ
* ಬಾ.ಮ. ಬಸವರಾಜಯ್ಯ
* ಅನುರಾಧಾ ಬಕ್ಕಪ್ಪ
* ಎ. ಭದ್ರಪ್ಪ ದಾವಣಗೆರೆ.
* ಕಂಚಿಕೇರಿ ಶಿವಣ್ಣ
* ಜ್ಯೋತಿಕಲಾ ಮತ್ತು ವಿಜಯಾ
* ಸಿಂಗ್ರಿಹಳ್ಳಿ ಇಮಾಮ್ ಹುಸೇನ್
* ಕುಂ.ಬಾ. ಸದಾಶಿವಪ್ಪ
* ತಿಪ್ಪೇಶ್‌ರಾವ್ ಚವ್ಹಾಣ್
* ಎಸ್.ಎಲ್. ಸಂತೋಷ
* ಓ.ಎಸ್. ನಾಗರಾಜ್ ನಲ್ಲೂರು
* ಈಶ್ವರ್‌ಪ್ರಸಾದ್
* ಹೊನ್ನಾಳಿ ಚಂದ್ರಶೇಖರ್
* ಡಾ. ಸಾಸ್ವೆಹಳ್ಳಿ ಸತೀಶ್ ಚಿಕ್ಕಮಗಳೂರು
* ಪ್ರೇಮ್‌ಕುಮಾರ್ ಭಂಡಿಗಡಿ
* ಶ್ರೀಕಂಠಮೂರ್ತಿ, ದಾವಣಗೆರೆ.
* ರಿದಂ ಪ್ರಕಾಶ್
* ಡಾ. ಎನ್.ಡಿ. ತಿಪ್ಪೇಸ್ವಾಮಿ ಗಂಗಾವತಿ